ಬಸವರಾಜ ಬಳಿಗಾರ ಸಂಪಾದಕತ್ವದಲ್ಲಿ

KARKAN/2021/27600

# ಕರುನಾಡ ಕಂದ

ಪಾಕ್ಷಿಕ

ಸಂಪುಟ-1 । ಸಂಚಿಕೆ-8 । ದಿನಾಂಕ: 16-02-2022 ಪುಟಗಳು: 16


ಬೆಲೆ: 20/-




## ಕರ್ನಾಟಕದ ಅಪರೂಪದ ಮಾದರಿ ಶಾಲೆ

## ಶತ್ರುವಿನ ಕೊನೆಯ ಅಸ್ತ್ರ ಅಪಪ್ರಚಾರ






ಬಾಡಿಯಾಲ:ಶಿಕ್ಷಕ ಸಿದ್ರಾಮಯ್ಯ ಸ್ವಾಮಿ ವಯೋನಿವೃತ್ತಿ ಬೀಳ್ಕೊಡಿಗೆ ಸಮಾರಂಭ

## ನಿವೃತ್ತಿ ಸುಖ ದು:ಖ ಎರಡನ್ನು ನೀಡುತ್ತದೆ:ಚೆಗುಂಟಾ ಶ್ರೀಗಳು

## ನಕಲಿ ಬಂಗಾರ ಮಾರಾಟದ ಜಾಲ ಪತ್ತೆ




## ಭವಿಷ್ಯದ ಭರವಸೆಯ ಮೂಡಿಸುವತ್ತ ದೇಶದ ಬಜೆಟ್



## ತಂದೆಯ ಕನಸು ನನಸಾಗಿಸಿದ ಫರೀದಾ ಬೇಗಂ

## ನಾಡಕಚೇರಿಯಲ್ಲಿ ದಿನನಿತ್ಯ ಭ್ರಷ್ಟಾಚಾರ



## ಡಾ|| ಅಂಬೇಡ್ಕರ್‌ರವರಿಗೆ ಅವಮಾನಕ್ಕೆ ನ್ಯಾಯಾಧೀಶರಿಗೆ ವಿರುದ್ಧ ಪ್ರಕರಣ ದಾಖಲು ಮನವಿ

ಕರುನಾಡ ಕಂದ
ಸಂಪುಟ–1 । ಸಂಚಿಕೆ–8
ದಿನಾಂಕ: 16–02–2022 । ಪುಟಗಳು: 16

# ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ – ಸುಭಾಸ ಯಾದವಾಡ



ವಿಜಯಪುರ : ದಿಟ್ಟ ಎದೆಗಾರಿಕೆಯಿಂದ ಆಳುವ ಪ್ರಭುತ್ವವನ್ನೇ ಪ್ರಶ್ನಿಸಿ,ಎದುರಿಸಿ "ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ" ಎಂದು ಕರೆಕೊಟ್ಟು ನವ್ಯದಿಂದ ನಂತರ ಬಂಡಾಯ ಕವಿಯಾಗಿ,ಲೇಖಕನಾಗಿ ಚಂದ್ರಶೇಖರ ಪಾಟೀಲ "ಚಂಪಾ" ಎಂದೇ ಖ್ಯಾತಿಗಳಿಸಿ ಬೆಳೆದು ನಿಂತ ಪರಿ ನಿಜಕ್ಕೂ ಶ್ಲಾಘನೀಯ. ಒಂದು ಅವಧಿಯಲ್ಲಿ ಕಸಾಪ ರಾಜ್ಯಾಧ್ಯಕ್ಷರಾಗಿ, ಸಮ್ಮೇಳನದ ಸರ್ವಾಧ್ಯಕ್ಷರೂ ಆಗಿದ್ದ ಚಂಪಾರ ಕನ್ನಡ ಕೃಷಿ ಸದಾಕಾಲ ಸ್ಮರಣೀಯ ಎಂದು ಹಿರಿಯ ಸಾಹಿತಿ ಸುಭಾಸ ಯಾದವಾಡ ಅಭಿಪ್ರಾಯಪಟ್ಟರು.

ಅವರು ವಿಜಯಪುರದ ಓದುಗರ ಚಾವಡಿಯ ಆಶ್ರಯದಲ್ಲಿ ಮಂಗಳವಾರ ಸಂಜೆ ನಗರದ ಸಾಯಿಪಾರ್ಕ್ ಬಡಾವಣೆಯಲ್ಲಿ ಸಾಹಿತಿ ಮನು ಪತ್ತಾರರ ಮನೆಯಲ್ಲಿ ಇತ್ತೀಚೆಗೆ ಅಗಲಿದ "ಸಾಹಿತಿ ಚಂಪಾ ಹಾಗೂ ಗಾಯಕ ಬಸವಲಿಂಗಯ್ಯ ಹಿರೇಮಠ"ರ ನೆನಪಿನಲ್ಲಿ ಆಯೋಜಿಸಿದ್ದ " ನುಡಿನಮನ " ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಧಾರವಾಡದ ಜಾನಪದ ಗಾಯಕ ಬಸವಲಿಂಗಯ್ಯ ಹಿರೇಮಠರ ಬದುಕು ಹಾಗೂ ಸಾಧನೆ ಕುರಿತು ಹಿಂದಿ ಉಪನ್ಯಾಸಕ ರಾಜೇಂದ್ರಕುಮಾರ್ ಬಿರಾದಾರ್ ಮಾತನಾಡಿ, ತಾನು ಹಾಡುವುದರ ಜೊತೆಗೆ ಎದುರಿನವರನ್ನೂ ಹಾಡುವಂತೆ ಪ್ರೇರೇಪಿಸುವಂತೆ, ಕುಣಿಯುವಂತೆ ಉನ್ಮಾದಿಸುವುದು ಒಂದು ಅದ್ಭುತ ಕಲೆ, ಕಲಿಕೆ ಹಾಗೂ ಶ್ರೇಷ್ಠವಾದ ಭಾವ. ಅಂತಹ ವಿಶೇಷ ಹಾಡುಗಾರಿಕೆಯ ಶೈಲಿ ಮತ್ತು ಉತ್ತರ ಕರ್ನಾಟಕದ ಗಂಡುಕಂಚಿನ ಕಂಠ ಬಸವಲಿಂಗಯ್ಯನವರಿಗೆ ಒಲಿದಿತ್ತು. ನಟನಾಗಿ, ಗಾಯಕನಾಗಿ, ಸಂಗೀತ ನಿರ್ದೇಶಕನಾಗಿ ಬಹುಮುಖಿ ಕಲೆಯ ಪ್ರತಿಭಾಸಂಪನ್ನರಾಗಿ ನಾಡಿನ ಸ್ವತ್ತಾಗಿದ್ದರು. ಆದರೆ ಅವರ ಅಕಾಲಿಕ ನಿರ್ಗಮನದಿಂದ ಜಾನಪದ ಸಂಗೀತ ಮತ್ತು ಸಾಹಿತ್ಯಲೋಕಕ್ಕೆ ನಿಜಕ್ಕೂ ಒಂದು ಬಹುದೊಡ್ಡ ಪ್ರಮಾಣದ ನಷ್ಟವಾಗಿದೆ. ಅವರ ನಂತರದಲ್ಲಿ ಇನ್ನಾರು, ಮುಂದ್ಯಾರು ಎಂಬ ಪ್ರಶ್ನೆಯೂ ಉದ್ಭವಿಸಿದರೆ ಅದು ಉತ್ಪ್ರೇಕ್ಷೆಯಲ್ಲ ಎಂದು ನುಡಿದರು.

ಸಾಹಿತಿ ಮನು ಪತ್ತಾರ ಮಾತನಾಡಿ, ಚಂಪಾ ತರಗತಿ ಕೋಣೆಯಲ್ಲಿ ಬೋಧಿಸಿ ತಮ್ಮ ವಿದ್ಯಾರ್ಥಿಗಳಿಗ??ಟೇ ಗುರುವಾಗಿರಲಿಲ್ಲ.ತಮ್ಮ ಮಾತಿನಿಂದ,ಲೇಖನಿಯಿಂದ, ಪತ್ರಕರ್ತನಾಗಿಯೂ ಅವರು ಲಕ್ಷಾಂತರ ಜನರಿಗೆ ಪರೋಕ್ಷವಾಗಿ ಗುರುವಾಗಿದ್ದಾರೆ. ಚಂಪಾರನ್ನು ಹೃದಯದಲ್ಲಿ ಆರಾಧಿಸುವ ಮಂದಿ ಅಷ್ಟಿಷ್ಟಲ್ಲ. ಅವರ ನಿಷ್ಠುರತನವು ಅನೇಕ ಬಾರಿ ಎ???ಟೇ ಜನರಿಗೆ ಸಹಿಸಲಾಗಿಲ್ಲ ಹಾಗೂ ಅಷ್ಟು ಸುಲಭವಾಗಿ ಬೇಗ ಯಾರಿಗೂ ಜೀರ್ಣವಾಗಿರಲೂ ಇಲ್ಲ.ಅಷ್ಟರಮಟ್ಟಿಗೆ ಅವರು ಒಂದು ವಲಯದಿಂದ ಅಂತರ ಕಾಪಾಡಿಕೊಳ್ಳುತ್ತಲೇ ಜಾತಿ–ಮತ–ಧರ್ಮಗಳಾಚೆ ಗುರುತಿಸಿಕೊಂಡು ಸಾಹಿತ್ಯಕೃಷಿ ಗೈದದ್ದು ಮನನೀಯ ಎಂದು ನುಡಿದರು.

ಮುಖ್ಯೋಪಾಧ್ಯಾಯ ರಾಜಶೇಖರ ಉಮರಾಣಿ ಮಾತನಾಡಿ, ಚಂಪಾ ಸಂಕ್ರಮಣದಿಂದ ಮನೆ ಮನೆಯನ್ನು ತಲುಪಿದರು. ಪುಸ್ತಕ ಅಭಿವೃದ್ಧಿ ಪ್ರಾಧಿಕಾರದಿಂದ ಕನ್ನಡ ಸೇವೆಗೈದವರು.ತುರ್ತು ಪರಿಸ್ಥಿತಿಯಲ್ಲಿ ಸಿಡಿದೆದ್ದಿದ್ದರು. ಗೋಕಾಕ್ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದರು. ಕನ್ನಡಿಗ–ರಿಗೆ ಪ್ರೇರಕರಾಗಿ, ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿ, ಸಾಹಿತ್ಯಾಸಕ್ತರ ಮೆಚ್ಚಿನ ಕವಿಯಾಗಿ, ಶಕ್ತಿಯಾಗಿ ಲಕ್ಷಾಂತರ ಕನ್ನಡದ ಮನಸ್ಸುಗಳಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ ಎಂದು ನುಡಿದರು.

ನುಡಿನಮನಕ್ಕೂ ಮುನ್ನ ಬಳಗದ ಎಲ್ಲರೂ ಈರ್ವರ ಭಾವಚಿತ್ರಕ್ಕೆ ನಮಿಸಿ ಪು?ಾ?ರ್ಪಚನೆಗೈದರು. ಇದೇ ಸಮಯದಲ್ಲಿ ಚಂಪಾರ ಕವಿತೆಗಳನ್ನು ಹಾಗೂ ಬಸವಲಿಂಗಯ್ಯರು ಹಾಡುತ್ತಿದ್ದ ತತ್ವಪದಗಳನ್ನು ಬಳಗದ ಗಾಯಕರಿಂದ ರಾಗಬದ್ಧವಾಗಿ ಹಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಭೆಯಲ್ಲಿ ಶರಣಗೌಡ ಪಾಟೀಲ, ಸುಭಾಸಚಂದ್ರ ಕನ್ನೂರ, ಡಾ.ರಾಜಕುಮಾರ ಜೊಳ್ಳಿ, ಕಾಮಾಕ್ಷಿ ಪತ್ತಾರ, ಶ್ರೀದೇವಿ ಪತ್ತಾರ, ಸುನೀತಾ ಉಮರಾಣಿ, ದಾಕ್ಷಾಯಣಿ ಬಿರಾದಾರ, ಪ್ರೀತಿ ಪಾಟೀಲ, ಸುರೇಶ ಗಬ್ಬೂರ, ಮಂಜುನಾಥ ಜುನಗೊಂಡ, ಮಯೂರ ತಿಳಗುಳಕರ, ಮುಸ್ತಾಕ ಮಲಘಾಣ, ವಿಜುಗೌಡ ಕಾಳಶೆಟ್ಟಿ, ಸೃಜನ್ ಪತ್ತಾರ, ವಿ. ಎಸ್. ಮಠ ಇದ್ದರು.

## ಅಮ್ಮ

ಉದರದಲ್ಲಿ ನವಮಾಸ ಕಾಲವು ಕೂಸನು ಹೊತ್ತು
ಗ್ರಹಿಣಿಯಾಗಿ ಮನೆಗೆಲಸವು ನಿವ9ಹಿಸಿ ನಿಯತ್ತು
ಮನೆಯ ಜವಾಬ್ದಾರಿಯನ್ನು ನಿಭಾಯಿಸುವ ಸ್ವತ್ತು
ಜಗದೊಳಗೆ ಧನ್ಯತೆಯ ಭಾವ ಅಮ್ಮಳು ಯಾವತ್ತು

ಹೆರಿಗೆ ನೋವನ್ನು ಸಹಿಸಿ ತನ್ನ ದೇಹವು ದಹಿಸಿ
ಹಗಲು–ಇರುಳು ಕರುಳಿನ ಕುಡಿಗಾಗಿ ನಿಗಾವಹಿಸಿ
ಕಂದನ ಪೋಷಣೆಗೆ ಎದೆ ಹಾಲು ಸದಾ ಕುಡಿಸಿ
ಬಿಸಿನೀರಿನ ಸ್ನಾನವುಗೈದು ಕಾಡಿಗೆ ಪೌಡರು ಲೇಪಿಸಿ

ಮಗು ಹುಶಾರು ಇಲ್ಲದ ಸಮಯವು ಜನನಿ
ಮಗುವಿಗಾಗಿ ಪತ್ಯನ್ನವು ಮಾಡುವ ಸ್ರಜನಿ
ತನಗೇ ಆರಾಮ ತಪ್ಪುವಷ್ಟೂ ಅಮ್ಮಗೆ ಚಡಪಡಿಕೆ
ಕಂದ ಗುಣವಾದಾಗ ತಾಯಿಯ ಮೊಗದಲ್ಲಿ ಲವಲವಿಕೆ

ಅಮ್ಮನ ಕೈತುತ್ತು ಮರೆಯದ ಆ ಹೊತ್ತು
ಅಮ್ಮನ ಮಾತು ವೇದವಾಕ್ಯವು ಯಾವತ್ತೂ
ವಜ್ರದ ಹರಳಿನಂತೆ ಹೊಳೆಯುವ ಅಮ್ಮಳು ನಿತ್ಯ
ಎಲ್ಲಿ ಹುಡುಕಿದರೂ ಅಮ್ಮಳಂತೆ ದೊರಕದು ಸತ್ಯ

ರಚನೆ:–ಅರ್ಜುನ.ಬಿ.ನಾಕಮಾನ.
ಶಿಕ್ಷಕರು.ಸರಕಾರಿ ಎಂಪಿಎಸ್ ಶಾಲೆ ಮಂದೇವಾಲ ತಾ:–ಜೇವರ್ಗಿ. ಜಿ:–ಕಲಬುರ್ಗಿ. ಮೋಬೈಲ್:–8746833928

**ಕರ್ನಾಟಕದ ಪ್ರತಿ ತಾಲೂಕಿನಲ್ಲಿ ಪಾರ್ಟ್ ಟೈಮ್ (ಗೌರವ ಧನ)**

**ಫುಲ್ ಟೈಮ್‌ಗೆ (ಸಂಬಳ) ಸ್ಥಳೀಯ ವರದಿಗಾರರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಯುವಕ–ಯುವತಿಯರು ತಮ್ಮ ಹೆಸರು ಹಾಗೂ ತಾಲ್ಲೂಕು ವಾಟ್ಸ್ ಆಪ್ ಅಥವಾ ಕರೆ ಮಾಡಿ**

**ಬಸವರಾಜ ಬಳಿಗಾರ** ಸಂಪಾದಕರು,
**'ಕರುನಾಡ ಕಂದ'** ಮೊ : 9986366909

**ಈಗಾಗಲೇ ಮಾಧ್ಯಮದ ಅನುಭವ ಇದ್ದವರು ಹಾಗೂ ಹೊಸದಾಗಿ ಸೇರಬಯಸುವವರು ಸಂಪರ್ಕಿಸಬಹುದು.**

**ನಿಮ್ಮ ಸ್ಥಳೀಯ ಸುದ್ದಿ ಹಾಗೂ ಎಲ್ಲಾ ರೀತಿಯ ಜಾಹೀರಾತುಗಳಿಗಾಗಿ ಕರೆ ಮಾಡಿ 9986366909**

# ಕನ್ನಡದ ಅಭಿವೃದ್ಧಿಗೆ ಅನುದಾನ ಹೆಚ್ಚಿಸಿ – ಶೇಷರಾವ ಮಾನೆ



ವಿಜಯಪುರ – ಕರ್ನಾಟಕ ರಕ್ಷಣಾ ವೇದಿಕೆಯ ನಮ್ಮ ಬಣ ಜಿಲ್ಲಾ ಘಟಕದ ವತಿಯಿಂದ ಕನ್ನಡದ ಅನುದಾನ ಹೆಚ್ಚಳಕ್ಕೆ ಹಕ್ಕೊತ್ತಾಯ ಪ್ರತಿಭಟಿಸಿ ಮಾನ್ಯಜಿಲ್ಲಾಧಿಕಾರಿಗಳ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಕರವೇ ಜಿಲ್ಲಾ ಘಟಕದ ಅಧ್ಯಕ್ಷ ಶೇಷರಾವ ಮಾನೆ ಮಾತನಾಡಿ, ಏಳು ಕೋಟಿ ಕನ್ನಡಿಗರ ಸ್ವಾಭಿಮಾನದ ಭಾಷೆಯಾಗಿರುವ ಕನ್ನಡದ ಅಭಿವೃದ್ಧಿಗೆ ಕೇಂದ್ರ ಸರಕಾರ ಅನುದಾನ ಹೆಚ್ಚಿಸಬೇಕು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿದ್ದರೂ ಮೈಸೂರಿನ ಭಾಷಾ ಸಂಸ್ಥಾನಕ್ಕೆ ಸ್ವಾಯತ್ತತೆಯನ್ನೆ ನೀಡಿಲ್ಲ ಯಾವುದೇ ಯೋಜನೆಗೆ ಮಂಜೂರಾತಿ ನೀಡುತ್ತಿಲ್ಲ ವರ್ಷಕ್ಕೆ ಕೇವಲ 1 ಕೋಟಿ ರೂ. ಅನುದಾನ ಮಾತ್ರ ನೀಡುತ್ತಿದ್ದು ಇದು ಸಿಬ್ಬಂದಿ ವೇತನಕ್ಕಷ್ಟೇ ಮೀಸಲಾಗಿದೆ. ಭಾಷೆಯ ಅಭಿವೃದ್ಧಿಗೆ ಸಂಬಂಧಿಸಿ ಮಾಡಬೇಕಾಗಿರುವ ನೂರಾರು ಕೆಲಸಗಳು ಅನುದಾನವಿಲ್ಲದೆ ಕೈಗೂಡುತ್ತಿಲ್ಲ. ಕೇವಲ 28 ಸಾವಿರ ಜನರು ಮಾತನಾಡುವ ಸಂಸ್ಕೃತ ಭಾಷೆಗೆ 634 ಕೋಟಿ ರೂ. ನಿಡಲಾಗಿದೆ. 7 ಕೋಟಿ ಮಂದಿ ಮಾತನಾಡುವ ಕನ್ನಡಕ್ಕೆ ಸಿಕ್ಕಿರುವುದು ಕೇವಲ 3 ಕೋಟಿ ಎಂಬುದನ್ನು ಉಲ್ಲೇಖಿಸಿದ್ದಾರೆ. ಉಳಿದ ಆಯಾ ಭಾಷೆಗಳಿಗೆ ಸಂಬಂದಪಟ್ಟಂತೆ ಅನುದಾನ ಬಿಡುಗಡೆಗೊಂಡಿದ್ದು ಕರ್ನಾಟಕದ ಶಾಸ್ತ್ರೀಯ ಭಾಷೆಗೆ ತಾರತಮ್ಯ ಧೋರಣೆ ನೀಡುತ್ತಿರುವುದು ಸರಿಯಲ್ಲ. ಇನ್ನೂ ಮುಂದೆಯಾದರು ಕೇಂದ್ರ ಸರಕಾರ ಕನ್ನಡಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದರು.

ಕರವೇ ಜಿಲ್ಲಾ ಗೌರವಾಧ್ಯಕ್ಷ ಎಂ.ಎಂ. ಖಲಾಸಿ ಮಾತನಾಡಿ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೊಟ್ಟರೆ ಅಷ್ಟೆ ಸಾಲದು ಅದಕ್ಕೆ ಪೂರಕವಾಗಿ ಅನುದಾನ ನೀಡಬೇಕು. ಕನ್ನಡ2 ಪ್ರಗತಿಗೆ ಕಾರ್ಯಮಾಡಲು ಕ್ರೀಯಾಯೋಜನೆ ರೂಪಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಕೆ. ಬನ್ನಟ್ಟಿ, ವೇದಿಕೆಯ ಜಿಲ್ಲಾ ಮುಖಂಡ ವಿನೋದ ಕೋಳೂರಗಿ, ಎ.ಎಸ್. ಪಟೇಲ, ವಸಂತರಾವ ಕುಲಕರ್ಣಿ, ಭೀಮಾಶಂಕರಯ್ಯ ವಿರಕ್ತಮಠ, ಬಸಯ್ಯ ಎಮ್ಮಿಮಠ, ಬಾಬು ಲಮಾಣಿ, ಗುರುರಾಜ ಪಂಚಾಳ, ರಾಘವೇಂದ್ರ ಹೊನ್ನಕಾಂಬಳೆ, ಜಿ.ಎಂ. ಹಿರೇಮಠ, ಆನಂದ ಡೋಮನಾಳ, ರಮೇಶ ಜಾಗೀರದಾರ ಮುಂತಾದವರು ಉಪಸ್ಥಿತರಿದ್ದರು.

ಕರುನಾಡ ಕಂದ
ಸಂಪುಟ-1 | ಸಂಚಿಕೆ-8
ದಿನಾಂಕ: 16-02-2022 | ಪುಟಗಳು: 16

# ಕಾರ್ಮಿಕರು ತಮ್ಮ ಹಕ್ಕು ಮತ್ತು ಸೌಲಭ್ಯಗಳನ್ನು ಅರಿತುಕೊಳ್ಳಲಿ - ನ್ಯಾಯವಾದಿ ದಾನೇಶ ಅವಟಿ



ವಿಜಯಪುರ - ಕಟ್ಟಡ ಮತ್ತು ಇತರೆ ಕಾರ್ಮಿಕರು ತಮ್ಮ ಹಕ್ಕುಗಳನ್ನು ಮತ್ತು ಸರಕಾರದ ಸೌಲಭ್ಯಗಳನ್ನು ಕುರಿತು ಚನ್ನಾಗಿ ಅರಿತುಕೊಳ್ಳಬೇಕೆಂದು ನ್ಯಾಯವಾದಿ ದಾನೇಶ ಅವಟಿ ಕರೆ ನೀಡಿದರು.

ಕಾಯಕ ನಗರದಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರ ಒಕ್ಕೂಟ (ರಿ) ಬೆಂಗಳೂರು ಜಿಲ್ಲಾ ಘಟಕ ವಿಜಯಪುರ ವತಿಯಿಂದ ಏರ್ಪಡಿಸಿದ್ದ ಕಾರ್ಮಿಕ-ರಿಗೆ ಉಚಿತ ಸುರಕ್ಷಾ ಕಿಟ್ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಕೇಂದ್ರ ಮತ್ತು ರಾಜ್ಯ ಸರಕಾರಿ ಕಾರ್ಮಿಕ ಇಲಾಖೆ ಮೂಲಕ ಹಲವಾರು ಯೋಜನೆಗಳನ್ನು ಜಾರಿಗೆ ತಂದದ್ದು, ಅವುಗಳ ಮಾಹಿತಿ ಕೊರತೆಯಿಂದ ಅವು ಫಲಾನುಭವಿಗಳನ್ನು ಹೊರತುಪಡಿಸಿ ಮಧ್ಯವರ್ತಿಗಳ ಪಾಲಾಗುತ್ತಿವೆ. ಹಾಗೂ ಇಲಾಖೆಯು ಕೊಡಮಾಡುವ ಧನಸಹಾಯ ಮತ್ತಿತರ ವಸ್ತುಗಳ ಮತ್ತಿತರ ಪಾಲಾಗುತ್ತಿರುವದು ವಿಷಾದನೀಯ ಹಾಗೂ ಕೆಲಸದ ಸ್ಥಳದಲ್ಲಿ ಕಾರ್ಮಿಕರಿಗೆ ಸೂಕ್ತ ಸೌಕರ್ಯಗಳ ಸಂಬಳ, ಭತ್ಯೆ, ರಜೆ ವೈದ್ಯಕೀಯ ಸೌಲಭ್ಯಗಳಿಲ್ಲದೆ ತೊಂದರೆಗಳಾಗುತ್ತಿವೆ. ಕಟ್ಟಡ ಕಾರ್ಮಿಕರಿಗೆ ಇರುವ ಕಾನೂನುಗಳು ಅರಿವು ಅತ್ಯಗತ್ಯ ಎಂದರು.

ಒಕ್ಕೂಟದ ಮೂರು ಜಿಲ್ಲಾ ಉಸ್ತುವಾರಿ ಕಾರ್ಯಕ್ರಮ ಅತಿಥಿಗಳಾಗಿ ಪ್ರಕಾಶ ರಜಪೂತ ಮಾತನಾಡಿ ಕರೋನಾದಂತಹ ಸಂಕಷ್ಟ ಸಮಯದಲ್ಲಿ ಕಾರ್ಮಿಕರ ಭವಣೆ ಹೇಳುತೀರದಂತಿದ್ದು ಅನೇಕರು ಒಪ್ಪತ್ತಿನ ಊಟಕ್ಕೆ ತೊಂದರೆ ಅನುಭವಿಸಿದ್ದಾರೆ. ಇಂತಹ ದಿನಮಾನದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಹಾಗೂ ಇತರೆ ಕಾರ್ಮಿಕರ ಒಕ್ಕೂಟ ಅವರ ನೋವಿಗೆ ಸ್ಪಂದಿಸಿ ಕಾರ್ಮಿಕ ಇಲಾಖೆಯ ಸಹಯೋಗದಲ್ಲಿ ಆಹಾರ ಪೊಟ್ಟಣ ವಿತರಣೆ, ವೈದ್ಯಕೀಯ ತಪಾಸಣೆ, ರೋಗಿಗಳಿಗೆ ಉಪಚಾರ ಅನೇಕರಿಗೆ ಕಾನೂನು ನೆರವುಗಳಂತಹ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಮಿಕರ ಸೇವೆ ಮಾಡುತ್ತಿದೆ. ಕಾರಣ ಇದರ ಸದುಪಯೋಗ ಕಾರ್ಮಿಕರು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಶಂಕರ ಮುತಗೋಡ, ಚರಣಸಿಂಗ ರಜಪೂತ, ಮನೋಜ ರಜಪೂತ, ಆನಂದ ರಜಪೂತ, ಶಿವು ಹಿರೇಕುರಬರ, ಹಣಮಂತ ಚಲವಾದಿ ಮತ್ತಿತರರು ಉಪಸ್ಥಿತರಿದ್ದರು. ಸಿದ್ದು ಹೊದ್ಲೂರ ಸ್ವಾಗತಿಸಿದರು. ಶಿವಪುತ್ರ ಹಂಚಿನಾಳ ನಿರೂಪಿಸಿದರು. ಮನೋಹರಸಿಂಗ ರಜಪೂತ ವಂದಿಸಿದರು.

# ಬಾಗೇಪಲ್ಲಿ: ರಥಸಪ್ತಮಿ ಪ್ರಯುಕ್ತ 108 ಸೂರ್ಯ ನಮಸ್ಕಾರ



ಬಾಗೇಪಲ್ಲಿ:- ತಾಲ್ಲೂಕು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಪಟ್ಟಣದ ಶ್ರೀ ಶಿರಡಿ ಸಾಯಿಬಾಬಾ ಮಂದಿರದ ಆವರಣದಲ್ಲಿ 60 ಕ್ಕೂ ಹೆಚ್ಚು ಯೋಗ ಬಂಧುಗಳು ರಥಸಪ್ತಮಿ ಪ್ರಯುಕ್ತ 108 ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ಮುನಿಯಪ್ಪ ಮಾತನಾಡಿಯೋಗಾಸನಗಳಲ್ಲಿ ಮೊದಲ ಪ್ರಾಶಸ್ತ್ಯ ಸೂರ್ಯ ನಮಸ್ಕಾರಕ್ಕಿದೆ. ಅದರಲ್ಲಿಯೂ ರಥ-'ಸಪ್ತಮಿಯ ದಿನವಾದ ಇಂದು ಸೂರ್ಯ ನಮಸ್ಕಾರ ಮಾಡಿದರೆ ಮನಸ್ಸು, ದೇಹ ಮತ್ತು ಉಸಿರಾಟ ವ್ಯವಸ್ಥೆಗಳಿಗೆ ವಿಶೇಷವಾಗಿ ಪರಿಣಾಮಕಾರಿಯಾಗಲಿದೆ ಎನ್ನುವುದು ಒಂದು ನಂಬಿಕೆ. ಭೂಮಿಯಲ್ಲಿನ ಸಕಲ ಜೀವರಾಶಿಗಳ ಚಟುವಟಿಕೆಗಳು ಸೂರ್ಯನಿಂಲೇ ನಡೆಯುತ್ತಿದೆ.

ಸೂರ್ಯನಿಲ್ಲದೇ ಜೀವನಕ್ಕೆ ಅಸ್ತಿತ್ವ ಇರಲು ಸಾಧ್ಯವಿಲ್ಲ, ಹೀಗಾಗಿ ಹೀಗಾಗಿ ರಥಸಪ್ತಮಿಯಂದು 108 ಸೂರ್ಯ ನಮಸ್ಕಾರಗಳು ಹಾಗೂ ಸಪ್ತಾಶ್ವಗಳ ಪ್ರತೀಕವಾಗಿ ಸಪ್ತ ನಮಸ್ಕಾರಗಳನ್ನು ಮಾಡುವುದು ವಿಶೇಷ ಎಂದು ಹೇಳಿದರು.

ಈ ಸಂದರ್ಭದಲ್ಲಿ ಭಜನೆ ಮಂಡಲಿ ಮುಖ್ಯಸ್ಥ ಮುನಿ ರಾಮಯ್ಯ, ರಾಮಚಂದ್ರಪ್ಪ ಮುನಿರಾಜು,ನಿಡುಮಾಮಡಿ, ಮುನಿಯಪ್ಪ, ರವಿ,ನಂಜುಂಡಪ್ಪ , ಅಕ್ಕಂದಿರಾದ ಸರಸ್ವತಮ್ಮ, ಲಲಿತಮ್ಮ,ಸುಧಾ ಮಣಿ, ಇನ್ನೂ ಮುಂತಾದ ಯೋಗ ಬಂಧುಗಳು ಹಾಗೂ ನಾಗರಿಕರು ಪಾಲ್ಗೊಂಡಿದ್ದರು.

# ಕುಂಚಾವರಂ ಗ್ರಾಮದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆ ಮಾಡಬೇಕು ಒತ್ತಾಯಿಸಿ ಗ್ರಾಮಸ್ಥರು ಪ್ರತಿಭಟನೆ



ಕಲಬುರಗಿ:ಚಿಂಚೋಳಿ ತಾಲೂಕಿನ ಕುಂಚಾವರಂ ಗ್ರಾಮದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆ ಮಾಡಬೇಕು ಎಂದು ಒತ್ತಾಯಿಸಿ ಗ್ರಾಮಸ್ಥರು ಡಾಕ್ಟರ್ ಬಿ ಆರ್ ಅಂಬೇಡ್ಕರ್ ವೃತ್ತದಿಂದ ಗ್ರಾಮ ಪಂಚಾಯಿತಿ ವರಗೆ ಪ್ರತಿಭಟನೆ ನಡೆಸಿದರು ಮುಖಂಡ ಜನಾರ್ಧನ ಪಾಟೀಲ ಮಾತನಾಡಿ ಚಿಂಚೋಳಿ ತಾಲೂಕಿನ ಕುಂಚಾವರಂ ಗ್ರಾಮವು ಸುಮಾರು ಹತ್ತು ಸಾವಿರ ಜನಸಂಖ್ಯೆ ಇರುವ ಈ ಗ್ರಾಮವು ಕರ್ನಾಟಕ ರಾಜ್ಯದ ಗಡಿಭಾಗದಲ್ಲಿದೆ ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರ ಕೇಂದ್ರಸ್ಥಾನ ,ಕಂದಾಯ ಇಲಾಖೆಯ ನಾಡ ಕಛೇರಿ, ಸಮುದಾಯ ಆರೋಗ್ಯ ಕೇಂದ್ರ, ವನ್ಯಜೀವಿಧಾಮದ ಅರಣ್ಯಧಿಕಾರಿ ಕಛೇರಿ ಸುಮಾರು 25 ತಂಡಗಳು 12 ಗ್ರಾಮಗಳಿಗೆ ಕೇಂದ್ರ ಬಿಂದುವಾಗಿದೆ ಇಲ್ಲಿ ಎಲ್ಲಾ ಸೌಲಭ್ಯಗಳಿವೆ ಸರಕಾರಿ ಪ್ರೌಢಶಾಲೆ ಡಾಕ್ಟರ್ ಬಿಆರ್ ಅಂಬೇಡ್ಕರ್ ವಸತಿ ಶಾಲೆ ಶಾದಿಪೂರ ಪ್ರೌಢಶಾಲೆ ಇದ್ದು ಪ್ರಸ್ತುತ ವರ್ಷದಲ್ಲಿ ಸುಮಾರು ಮುನ್ನೂರ ವಿದ್ಯಾರ್ಥಿಗಳು ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ 10ನೇ ವ್ಯಾಸಂಗ ಮುಗಿದ ನಂತರ ಶಿಕ್ಷಣಕ್ಕೆ ಚಿಂಚೋಳಿಗೆ ಹೋಗಬೇಕು ತಾಲೂಕ ಕೇಂದ್ರ ಸ್ಥಾನದಿಂದ ಸುಮಾರು 35 ಕಿಲೋ ಮೀಟರ್ ಅಂತರದಲ್ಲಿದ್ದು ಸಕಾಲಕ್ಕೆ ಬಸ್ಸಿನ ಸೌಕರ್ಯ ಇರುವುದಿಲ್ಲ ಸೈಕಲ್ ತುಳಿದು ಹೋಗಬೇಕಾದರೆ ದಟ್ಟವಾದ ಅರಣ್ಯವಿದೆ ಹೀಗಾಗಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಗಡಿ ಪ್ರದೇಶ ಇರುವ ಕಾರಣ ಇಲ್ಲಿ ಅನಕ್ಷರತೆ ಜಾಸ್ತಿ, ಬಡತನವಿದೆ ಹಸುಗೂಸು ಮಾರಾಟ ಪ್ರಕರಣಗಳು ಈ ಹಿಂದೆ ನಡೆದಿವೆ ಪೋಷಕರು ಹೆಣ್ಣುಮಕ್ಕಳಿಗೆ ಬಾಲ್ಯವಿವಾಹವನ್ನು ಮಾಡುತ್ತಿದ್ದಾರೆ ಅರ್ಧದಷ್ಟು ವಿದ್ಯಾರ್ಥಿಗಳು ಬೀದರ್ ಗುಲ್ಬರ್ಗ ಇನ್ನುಳಿದ ವಿದ್ಯಾರ್ಥಿಗಳು ನೆರೆಯ ತೆಲಂಗಾಣದ ಜಹೀರಾಬಾದ್ ಗೆ ಹೋಗುತ್ತಾರೆ ಈ ಭಾಗದ ಜನಪ್ರತಿನಿಧಿಗಳು ಮಾನ್ಯ ಕೇಂದ್ರ ಸಚಿವ ಭಗವಂತ ಖೂಬಾ, ಗುಲ್ಬರ್ಗ ಸಂಸದ ಡಾಕ್ಟರ್ ಉಮೇಶ್ ಜಾಧವ್ ಮಾನ್ಯ ಚಿಂಚೋಳಿ ಶಾಸಕರು ಡಾಕ್ಟರ್ ಅವಿನಾಶ್ ಜಾಧವ್ ಗಮನಹ-ರಿಸಬೇಕು ಎಂದು ಒತ್ತಾಯಿಸಿದರು ಈಗಲಾದರೂ ಎಚ್ಚೆತ್ತುಕೊಂಡು ಈ ಪ್ರದೇಶದಲ್ಲಿ ಸರಕಾರಿ ಪಿಯು ಕಾಲೇಜು ಮಂಜೂರು ಮಾಡಬೇಕೆಂದು ಒತ್ತಾಯಿಸಿ ಉಪ ತಹಶೀಲ್ದಾರ್ ರವಿಕುಮಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು ನರಸಿಂಹಲು ಕುಂಬಾರ್ ಮಾಜಿ ತಾಲೂಕು ಪಂಚಾಯತ್ ಸದಸ್ಯರು, ಜಗನ್ನಾಥ್, ಸಲೀಂ, ಮೌಲಾನಾ, ಚಂಟಿ ಬೈಕಾಡಿ, ಮಡುಗು ಜನಾರ್ಧನ್, ಶ್ರೀನಿವಾಸ್, ರಾಮಚಂದ್ರ ಪೋಚರಂ, ಅರ್ಜುನ್ ಶಿರುವಾಟ್ಟಿ, ರಮೇಶ್ ಮಾಸನಿ ಪೋಚರಂ, ಮಲ್ಲೇಶಂ, ಶದಿಪೂರ್, ವೆಂಕಟಾಪುರ ಗ್ರಾಮಸ್ಥರು ಪಾಲ್ಗೊಂಡಿದ್ದರು.

# ಬಿ.ಮಟಕೆರೆ ಗ್ರಾಮ ಪಂಚಾಯಿತಿಯಲ್ಲಿ 73ನೇ ಗಣರಾಜ್ಯೋತ್ಸವ ಕಾರ್ಯಕ್ರಮ ಆಚರಣೆ



ಸರಗೂರು ತಾಲೂಕು ಕಂದಲಿಕೆ ಹೋಬಳಿ ಬಿ.ಮಟಕೆರೆ ಗ್ರಾಮ ಪಂಚಾಯಿತಿ ವತಿಯಿಂದ 73ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಣೆ ಮಾಡಲಾಯಿತು ಕಾರ್ಯಕ್ರಮಕ್ಕೆ ಅಧ್ಯಕ್ಷರಾದ ರೂಪ ಮಲ್ಲೇಶ್ ನಾಯಕರು ಉಪಾಧ್ಯಕ್ಷರಾದ ದೇವದಾಸ ರವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಅಬ್ದುಲ್ ಪಾಸ್ ರವರು ಕಾರ್ಯದರ್ಶಿಗಳಾದ ಮಂಜುನಾಥ್ ರವರು ಗ್ರಾಮಪಂಚಾಯತಿಯ ಸರ್ವ ಸದಸ್ಯರು ಸಿಬ್ಬಂದಿ ವರ್ಗ ಮತ್ತು ಕೆ ಶಿವಕುಮಾರ್ ಅಧ್ಯಕ್ಷರು ಜೈ ಭೀಮ್ ಅಖಿಲ ಭಾರತ ದಲಿತ ಹೋರಾಟ ಸಮಿತಿಯ ಸರಗೂರು ಮತ್ತು ಕೋಟೆ ತಾಲೂಕು ಘಟಕಗಳ ಪದಾಧಿಕಾರಿಗಳು ಸದಸ್ಯರು ಭಾಗವಹಿಸಿದ್ದರು

ಅಬ್ದುಲ್ ಪಾಷಾ ರವರು ಪ್ರಾಸ್ತಾವಿಕ ನುಡಿಗಳಲ್ಲಿ 536

ರಾಜರುಗಳನ್ನು ಒಗ್ಗೂಡಿಸಿ ಭಾರತದ ಸಾರ್ವಭೌಮತ್ವ ರಾಷ್ಟ್ರೀಯತೆ ಏಕಾಗ್ರತೆ ಮಾನವೀಯತೆ ಒಳಗೊಂಡಂತೆ ಸಂವಿಧಾನ ರಚಿಸಿ ಭಾಷೆ ನೆಲ ಜಲ ಒಳಗೊಂಡಂತೆ ಪ್ರತ್ಯೇಕವಾದ ರಾಜ್ಯಗಳನ್ನು ಸಂವಿಧಾನ ಅಡಿಯಲ್ಲಿ ರಚಿಸಿ ರಾಜ್ಯಗಳನ್ನಾಗಿ ಮಾಡಲಾಗಿದೆ ಇದಕ್ಕೆ ಗಣರಾಜ್ಯೋತ್ಸವ ಎನ್ನುತ್ತಾರೆ ಈ ದಿನ ಸಂವಿಧಾನವನ್ನು ಅಂಗೀಕಾರ ದಿನವಾಗಿದೆ ಎಂದರು.

ಕರುನಾಡ ಕಂದ
ಸಂಪುಟ–1 | ಸಂಚಿಕೆ–8
ದಿನಾಂಕ: 16–02–2022 | ಪುಟಗಳು: 16

# ಸಂಪರ್ಕನಲ್ಲಿ ಇರೋದಂತು ನಿಜ : ಮಾಜಿ ಸಿಎಂ ಸಿದ್ದರಾಮಯ್ಯ



ಬಾದಾಮಿಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆ ಜೆಡಿಎಸ್, ಬಿಜೆಪಿ ಶಾಸಕರು ಕಾಂಗ್ರೆಸ್ ಗೆ ಸಂಪರ್ಕ ಇರುವ ವಿಚಾರ ಅವರೆಲ್ಲಾ ಸಂಪರ್ಕದಲ್ಲಿರೋದು ನಿಜ, ಆದ್ರೆ ಹೆಸರುಗಳನ್ನ ಮಾತ್ರ ಹೇಳಲ್ಲ ಎಷ್ಟು ಜನ ಸಂಪರ್ಕದಲ್ಲಿದ್ದಾರೆ ಅಂತಾನೂ ನಾನು ಹೇಳಲ್ಲ ಸಂಪರ್ಕನಲ್ಲಿ ಇರೋದಂತು ನಿಜ..ಬಿಜೆಪಿನೂ ಇದ್ದಾರೆ, ಜೆಡಿಎಸ್ ನವರೂ ಇದ್ದಾರೆ.ಸಿದ್ದು ಮೇಲೆ ಎಚ್ಡಿಕೆ ಕೋಪಗೊಂಡ ವಿಚಾರ ನನಗೆ ಗೊತ್ತಿಲ್ಲ, ಅವರಿಗೆ ಯಾವಾಗ ಕೋಪ ಬರುತ್ತೋ ಯಾವಾಗ ಇಳಿಯುತ್ತೋ ಯಾರಿಗೆ ಗೊತ್ತು ನನಗಂತೂ ಕೋಪ ಬರಲ್ಲ. ಪ್ರಜಾಪ್ರಭುತ್ವದಲ್ಲಿ ಟೀಕೆಗಳನ್ನ ಸಹಿಸಿಕೋ ಬೇಕು ಟೀಕೆ ಸಹಿಸಿಗೊಂಡ್ರೆ ಮಾತ್ರ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಬರೋದು ಎಂದ ಸಿದ್ದರಾಮಯ್ಯ ತುಮಕೂರು ಸಿದ್ದರಾಮಯ್ಯ ಅಪ್ಪನ ಮನೆ ಆಸ್ತಿನಾ ಎಂದಿದ್ದ ಕುಮಾರಸ್ವಾಮಿಗೆ ಸಿದ್ದರಾಮಯ್ಯ ಟಾಂಗ್.ಬಾದಾಮಿ ಪಟ್ಟಣದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೆ ಪೊಲಿಟಿಕಲ್ ಸಿಸ್ಟಂ ಮತ್ತು ಡೆಮಾಕ್ರಸಿ ಒಪ್ಪಿಕೊಂಡಿದ್ದೇವೆ. ಈ ರಾಜ್ಯದ ಆಸ್ತಿ, ದೇಶದ ಆಸ್ತಿ, ಜನರ ಆಸ್ತಿ ಯಾರ ಅಪ್ಪನ ಮನೆ ಅಸ್ತಿನು ಅಲ್ಲ.ನಮ್ಮನ ಮನೆ ಆಸ್ತಿನೂ ಅಲ್ಲ ಅವರ ಅಪ್ಪನ ಮನೆ ಆಸ್ತಿನೂ ಅಲ್ಲ.. ಜನರ ಆಸ್ತಿ ಪಾಪ ಅವರಿಗೆ ಅಷ್ಟು ಸಾಮಾನ್ಯ ಜ್ಞಾನ ಇಲ್ಲ ಅಂದ್ರೆ ನಾನೇನು ಮಾಡೋಕೆ ಆಗುತ್ತೆ ಹಂಗೆಲ್ಲ ಮಾತನಾಡೋದು ನಾಲಿಗೆ ಶುದ್ಧವಾಗಿ ಇರೋರು, ಸಂಸ್ಕೃತಿ ಇರೋರು ಮಾತನಾಡಲ್ಲ ಹಾಗೆಲ್ಲ

ಜೆಡಿಎಸ್ ಓಡಿಸಿ ಅಂತ ನಾನು ನಮ್ಮ ಕಾರ್ಯಕರ್ತರಿಗೆ ಹೇಳಿದ್ದು.ನನ್ನ ಕಾರ್ಯಕರ್ತ–ರಿಗೆ ಹೇಳೋಕೆ ನನಗೆ ಹಕ್ಕಿಲ್ವಾ.ಅದಕ್ಕೆ, ಸಿದ್ದರಾಮಯ್ಯನವರ ಅಪ್ಪನ ಆಸ್ತಿನಾ ಅಂತ ಅಂ–ದ್ರೆ ನಮ್ಮಪ್ಪನ ಆಸ್ತಿ ಅಲ್ಲ, ಕುಮಾರಸ್ವಾಮಿ ಅಪ್ಪನ ಆಸ್ತಿನೂ ಅಲ್ಲ ಜನರ ಆಸ್ತಿ ನಾವೆಲ್ಲ ಜನರ ಶ್ರಮದ ಮೇಲೆ ಬದುಕಿರುವವರು.ಬಾದಾಮಿಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆ ಶಾಸಕ ಬಸವನಗೌಡಾ ಪಾಟೀಲ್ ಯತ್ನಾಳ ಹೇಳಿಕೆ ವಿಚಾರ ನನಗೆ ಗೊತ್ತಿಲ್ಲ ಯತ್ನಾಳ ಏನ್ ಮಾತಾಡ್ತಾನೆ ಅವನಿಗೆ ಗೊತ್ತಿರಲ್ಲ ಪಾಪ ಅದಕ್ಕೆಲ್ಲ ನಾವ್ ಉತ್ತರ ಕೊಡೊಕೊತ್ತ ಕೂಡಕ್ಕಾಗಲ್ಲ ಏನ್ ಮಾತಾಡಿರ್ದ್ದೇನೇ ಅನ್ನೋದು ಯತ್ನಾಳಗೆ ಗೊತ್ತಿರಲ್ಲ ಪಾಪ.ಈಗ ನಾನೆಲ್ಲಿ ಅದಕ್ಕೆಲ್ಲ ಉತ್ತರ ಕೊಡ್ತಾ ಕೂಡ್ಲಿ.ಬಿಜೆಪಿಯಲ್ಲಿ ಗುಂಪುಗಾ–ರಿಕೆ ವಿಚಾರ ಬಿಜೆಪಿಯಲ್ಲಿ ಗುಂಪುಗಳಿವೆ ಅನ್ನೋದು ಬಹಳ ಸ್ಪಷ್ಟವಿದೆ.ಯಡಿಯೂರಪ್ಪ ಇದ್ದಾಗಲೂ ಇತ್ತು, ಬೊಮ್ಮಾಯಿ ಇದ್ದಾಗಲೂ ಇವೆ.ಅವ–ರಿಗೆ ಅಭಿವೃದ್ಧಿ ಬಿಟ್ಟು ಇವರನ್ನ ಸರಿದೂಗಿಸೋದೆ ಕೆಲಸವಾಗಿದೆ.ಇದ್ರಿಂದ ಈ ಸರ್ಕಾರದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ.ಶಿಸ್ತಿನ ಪಕ್ಷ ಅಂತ ಹೇಳ್ತಾರಲ್ಲ, ಈಗ ಮೋಸ್ಟ್ ಇನ್ ಡಿಸಿಪ್ಲೈನ್ ಪಾರ್ಟಿ ಆಗಿದೆ ಎಂದ ಸಿದ್ದರಾಮಯ್ಯ.

–ಶಿವಾನಂದ ಸಿದ್ದಲಿಂಗಪ್ಪನವರ

# ಬಿ.ಮಟಕೆರೆ ಗ್ರಾಮ ಪಂಚಾಯಿತಿ ವತಿಯಿಂದ ವಿಶೇಷ ಗ್ರಾಮ ಸಭೆ



ಬಿ.ಮಟಕೆರೆ ಗ್ರಾಮ ಪಂಚಾಯಿತಿ ವತಿಯಿಂದ ವಿಶೇಷ ಗ್ರಾಮ ಸಭೆಯನ್ನು ವಿಎಸ್ ಎಸ್ ಎಂ ಸಮುದಾಯ ಭವನದಲ್ಲಿ ರೂಪಾ ಬಾಯಿ ಮಲ್ಲೇಶ್ ನಾಯಕರವರ ಅಧ್ಯಕ್ಷತೆಯಲ್ಲಿ ಉಪಾಧ್ಯಕ್ಷರಾದ ದೇವದಾಸ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಅಬ್ದುಲ್ ರವರು ಕಾರ್ಯದರ್ಶಿಗಳಾದ ಮಂಜುನಾಥ ತೋಟಗಾರಿಕೆ ಅಧಿಕಾರಿಗಳು ಕೃಷಿ ಇಲಾಖೆ ಅಧಿಕಾ–ರಿಗಳಾದ ಮಹೇಶ್ವರ ಸದಸ್ಯರುಗಳು ವರ್ಗ ಕೆ ಶಿವಕುಮಾರ್ ಅಖಿಲ ಜೈ ಭೀಮ್ ಯುವಕರ ಸಂಘ ಅಧ್ಯಕ್ಷರು ಸರಗೂರು ಹಾಗೂ ಕೋಟೆ ಗೋವಿಂದರಾಜ ರವರು ಡಿಎಸ್ಎಸ್ ತಾಲೂಕು ಸಂಚಾಲಕರು ಸರಗೂರು ಯುವ ಮುಖಂಡರಾದ ಮಹೇಶ್ ಅವರು ಹಾಜರಿದ್ದು ಈ ಸಭೆಗೆ ಉಸ್ತುವಾರಿ ಅಧಿಕಾ–ರಿಗಳು ಬರದ ಕಾರಣ ಅಧಿಕಾರಿಗಳಿಗೆ ನೋಟಿಸ್ ನೀಡಿ ಮುಂದಿನ ಕ್ರಮ ಕೈಗೊಳ್ಳಲು ಗ್ರಾಮಸಭೆಯಲ್ಲಿ ಅಧಿಕಾರಿಗಳ ಜೊತೆ ಮಾತನಾಡಿದ ವಿಡಿಯೋ ಸಭಾ ನಡವಳಿ ನೀಡಬೇಕೆಂದು ಮತ್ತು ಗ್ರಾಮಸಭೆಯಲ್ಲಿ ಮನೆಗಳ ಫಲಾನುಭವಿಗಳ ಆಯ್ಕೆ ಮಾಡೋದು ಕೇವಲ ಅರ್ಜಿಗಳನ್ನು ಓದದೆ ಸಭೆ ಮುಗಿಸಿದ್ದಾರೆ ಕೂಡಲೇ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಂಡು ಫಲಾನುಭವಿಗಳಿಗೆ ಮನೆಯನ್ನು ನೀಡಬೇಕೆಂದು ಸಾರ್ವಜನಿಕರು ಹಾಗೂ ಸಂಘಟನೆಯ ಸದಸ್ಯರು ಆಗ್ರಹಿಸಿದರು

# "ಯುವಕರೇ ಒಂದಾಗಿ ಕರವೇ ಸೇರಲು ಮುಂದಾಗಿ"



ಕನ್ನಡಾಂಬೆಯ ಸೇವೆ ಮಾಡುವುದಕ್ಕೆ ಕನ್ನಡಿಗರು ತಮ್ಮ ಪ್ರಾಣವನ್ನೇ ತ್ಯಾಗ ಮಾಡುವುದಕ್ಕೆ ಸಿದ್ದರಾಗಿದ್ದಾರೆ , ಯುವಕರು ಈ ನಿಟ್ಟಿನಲ್ಲಿ ಯುವಕರ ಒಂದು ಒಗ್ಗಟ್ಟಿನಲ್ಲಿ ಬಲವಿದೆ ಎಂದು ತೋರಿಸಿಕೊಳ್ಳಲು ಉದಾಹರಣೆ ಸಾಕು .ಸ್ವಾಮಿ ವಿವೇಕಾನಂದ ಹೇಳಿದ ಮಾತಿನಂತೆ ಯುವಕರೇ ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಮಾತಿನಂತೆ ಯುವಕರು ಕರ್ನಾಟಕ ರಕ್ಷಣಾ ವೇದಿಕೆಯೊಂದಿಗೆ ಹೋರಾಡುತ್ತಾ ಬಂದಿದ್ದಾರೆ,

ಇನ್ನೂ ಕೆಲವು ಯುವಕರು ಉತ್ಸಾಹದಿಂದ ಕನ್ನಡಾಂಬೆಯ ಸೇವೆ ಮಾಡುವುದಕ್ಕೋಸ್ಕರ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಕರ್ನಾಟಕ ರಕ್ಷಣಾ ವೇದಿಕೆ ಗದಗ ಜಿಲ್ಲಾ ಯುವ ಘಟಕದ ಅಧ್ಯಕ್ಷರಾದ ನಿಂಗನಗೌಡ ಮಾಲಿಪಾಟೀಲ ರವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು," ಯುವಕರೇ ಒಂದಾಗಿ ಕರವೇ ಸೇರಲು ಮುಂದಾಗಿ" ಈ ಒಂದು ಮಾತಿನಂತೆ ಯುವಕರನ್ನು ಒಗ್ಗೂಡಿಸಿಕೊಂಡು ಮತ್ತು ನೇತೃತ್ವ ವಹಿಸಿಕೊಂಡು ಗದಗ ಜಿಲ್ಲಾ ಯುವ ಘಟಕದ ಅಧ್ಯಕ್ಷರಾದ ನಿಂಗನಗೌಡ ಮಾಲಿಪಾಟೀಲ್ ರವರ ಹೊಸ ಕಾರ್ಯಕರ್ತರ ಸೇರ್ಪಡೆ ಮತ್ತು ಪದಾಧಿಕಾ–ರಿಗಳ ಆಯ್ಕೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗದಗ ಜಿಲ್ಲಾ ಯುವ ಘಟಕದ ಉಪಾಧ್ಯಕ್ಷರಾದ ಮಾರುತಿ ಇಳಿಗೆರ.ಗದಗ ಜಿಲ್ಲಾ ಯುವ ಘಟಕದ ಸಂಚಾಲಕರಾದ ರಾಜೇಸಾಬ್ ಕೊಕ್ಕರಗುಂದಿ ,ಶಿರಹಟ್ಟಿ ಯುವ ಘಟಕದ ಅಧ್ಯಕ್ಷರಾದ ನಜೀರಸಾಬ್ ಮಕಂದರ, ಶಿರಹಟ್ಟಿ ತಾಲೂಕು ಕರವೇ ಅಧ್ಯಕ್ಷರಾದ ಬಸವರಾಜ ವಡವಿ, ಸಾಮಾಜಿಕ ಜಾಲತಾಣದ ಜಿಲ್ಲಾ ಸಂಚಾಲಕರಾದ ಚೇತನ್ ಕಣವಿ, ಶಿರಹಟ್ಟಿ ಸಂಚಾಲಕರಾದ ರಾಕೇಶ್ ಬೂದಿಹಾಳ ಶಿರಹಟ್ಟಿ ತಾಲೂಕು ವಿದ್ಯಾರ್ಥಿ ಘಟಕದ ಅಧ್ಯಕ್ಷರಾದ ರಾಜು. ಎನ್. ಎಚ್ , ಶಿರಹಟ್ಟಿ ತಾಲೂಕು ಯುವ ಘಟಕದ ಪ್ರಧಾನ ಕಾರ್ಯದರ್ಶಿ ನಾಗೇಂದ್ರ ಬೀರಬ್ಬಿ, ಶಿರಹಟ್ಟಿ ತಾಲೂಕು ಯುವ ಘಟಕದ ಉಪಾಧ್ಯಕ್ಷರಾದ ರಾಹುಲ್ ಮಡಿವಾಳ, ಈಶ್ವರ್ ಮಟ್ಟಿ ಸಿದ್ಧಾರೂಢ ಚನ್ನೂರು ,ರವಿ ಮಟಿ, ಪುಟ್ಟರಾಜ್ ಬಸಾಪುರ್, ಹಲವಾರು ಕರವೇ ಕಾರ್ಯಕರ್ತರು ಉಪಸ್ಥಿರಿದ್ದರು.

# ಶ್ರೀ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವ: ಭಕ್ತರಿಗೆ ನಿರ್ಬಂಧ ?

ಫೆಬ್ರವರಿ 8 ರಿಂದ 19ರವರೆಗೆ ಮೈಲಾರ ಕಾಣಿಕೋತ್ಸವ ಜಾತ್ರೆ ನಿರ್ಬಂಧಿಸಲಾಗಿದೆ

ವಿಜಯನಗರ (ಹೊಸಪೇಟೆ) ಸಮೀಪದ ಹೂವಿನ ಹಡಗಲಿ ತಾಲೂಕು ಮೈಲಾರ ಗ್ರಾಮದಲ್ಲಿ ಪ್ರತಿ ವರ್ಷದಂತೆ ಜಾತ್ರೆಯು ವಿಜ್ರಂಭಣೆಯಿಂದ ಆಗುತ್ತಿತ್ತು ಕೋವಿಡ್ 19 ರ ಕಾರಣದಿಂದ ಹಿನ್ನಲೆಯಲ್ಲಿ ಈ ಸಲವೂ ಜಾತ್ರೆ ಮಹೋತ್ಸವಕ್ಕೆ ಭಕ್ತರ ಮೇಲೆ ನಿರ್ಬಂಧ ಹೇರಲಾಗಿದೆ.

ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.ಜಿಲ್ಲಾಧಿಕಾರಿ ಅನಿರುದ್ಧ್ . ಪಿ. ಶ್ರವಣ್ ವರ್ಚುವಲ್ ಮೂಲಕ ಸಭೆ ಉದ್ದೇಶಿಸಿ ಮಾತನಾಡಿದರು.

ಪ್ರತಿವರ್ಷದಂತೆ ಈ ವರ್ಷವೂ ಸಂಪ್ರದಾಯದ ಪ್ರಕಾರ ಪೂಜೆ ಧಾರ್ಮಿಕ ಕಾರ್ಯಗಳು ನಡೆಯಲಿವೆ ಫೆಬ್ರವರಿ 8 ರಂದು ಕಂಕಣಧಾರಣೆ ಫೆಬ್ರವರಿ 16ರಂದು ಹುಣ್ಣಿಮೆ ಫೆಬ್ರವರಿ 18ರಂದು ಕಾಣಿಕೋತ್ಸವ ಮತ್ತು ಫೆಬ್ರವರಿ 19ರಂದು ಸರಳ ಪವಾಡ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು. ಮೈಲಾರ ಗ್ರಾಮಕ್ಕೆ ಸಾರ್ವಜನಿಕರು. ಭಕ್ತರ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

ಕುರುವತ್ತಿ ಹ್ಯಾರಡ ಹೊಳಲು ಹಾವೇರಿ ಒಳಗಡೆ ಡೆಂಕನ ಮರಡಿಗೆ ಸಂಪರ್ಕ ಕಲ್ಪಿಸುವ ಎಲ್ಲ ಮಾರ್ಗವನ್ನು ಬ್ಯಾರಿಕೇಡ್ ಹಾಕಿ ಜನರನ್ನು ತಡೆಯಬೇಕು. ಜಾತ್ರೆಯಲ್ಲಿ ವಾಣಿಜ್ಯ ವಹಿವಾಟಿಗೆ ಅವಕಾಶ ಇರುವುದಿಲ್ಲ. ಎಲ್ಲಾ ಕಡೆ ಪೊಲೀಸರನ್ನು ನಿಯೋಜಿಸಬೇಕು. ಮುಖ್ಯರಸ್ತೆಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವಂತೆ ಸೂಚಿಸಿದರು. ಶಾಸಕರಾದ ಪಿ ಟಿ ಪರಮೇಶ್ವರ್ ನಾಯ್ಕ

ಮಾತನಾಡಿ ಜಾತ್ರೆಯಲ್ಲಿ ಆರೋಗ್ಯ ಸೇವೆ ಸ್ವಚ್ಛತೆ ಮತ್ತು ನೈರ್ಮಲ್ಯಕರಣ ವಿಶೇಷ ಒತ್ತು ಕೊಡಬೇಕು ಗ್ರಾಮದ ಎಲ್ಲಾ ಬೀದಿಗಳ ಚರಂಡಿಗಳನ್ನು ಸ್ವಚ್ಛತೆ ಗೊಳಿಸಬೇಕೆಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಹರ್ಷ ಲೋಯರ್ ನಾರಾಯಣರಾವ್ ಎಸ್ಪಿ ಡಾ ಅರುಣ್ ಕೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು



ಬಸ್ ಬಿಡದಂತೆ ಸೂಚನೆ

ಫೆಬ್ರವರಿ 8 ರಿಂದ ಫೆಬ್ರವರಿ 20ರವರೆಗೆ ಮೈಲಾರಕ್ಕೆ ಬರುವ ಎಲ್ಲಾ ವಾಹನಗಳನ್ನು ನಿರ್ಬಂಧಿಸಲಾಗಿದೆ ಮೈಲಾರದ ಸೇತುವೆ ಮೇಲೆ ಪ್ರತಿ ದಿನ ನಿತ್ಯ ವಾಹನಗಳು ಓಡಾಡುವುದಕ್ಕೆ ಅವಕಾಶ ಇರುವುದಿಲ್ಲ ಹಗರಿಬೊಮ್ಮನಹಳ್ಳಿ ಹೂವಿನಹಡಗಲಿ ಹರಪನಹಳ್ಳಿ ಚಿತ್ರದುರ್ಗ ರಾಣೆಬೆನ್ನೂರು ಹಾವೇರಿ ಹೊಸಪೇಟೆ ಬಳ್ಳಾರಿ ಗದಗ ರಾಯಚೂರು ಹುಬ್ಬಳ್ಳಿ–ಧಾರವಾಡ ಹಲವಾರು ಕಡೆಯಿಂದ ಬರುವಂತಹ ಎಲ್ಲಾ ವಾಹನಗಳ ಕೆ ಎಸ್ ಆರ್ ಟಿಸಿ ಅಧಿಕಾರಿಗಳಿಗೆ ಪತ್ರ ಬರೆದು ತಿಳಿಸಬೇಕೆಂದು ಜಿಲ್ಲಾಧಿಕಾರಿ ಅನಿರುದ್ಧ ಪಿ . ಶ್ರವಣ್ ತಿಳಿಸಿದ್ದಾರೆ ಖಾಸಗಿ ಬಸ್ ಟ್ಯಾಕ್ಸಿ ಕ್ಯಾಬ್ ಟೆಂಪೋ ಬಗೆಬಗೆಯ ವಾಹನಗಳಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಕ್ರಮ ಜರುಗಿಸುವುದು ಕಾರಣಿಕೋತ್ಸವ ನುಡಿದಂತೆ ಧ್ವನಿವರ್ಧಕಗಳನ್ನು ಅಳವಡಿಸಬೇಕೆಂದು ಜಿಲ್ಲಾಧಿಕಾರಿ ಸೂಚನೆ ಹೊರಡಿಸಿದ್ದಾರೆ.

**ವರದಿ–ರಾಹುಲ್.ಜ.ಮಡಿವಾಳರ**

ಕರುನಾಡ ಕಂದ
ಸಂಪುಟ-1 । ಸಂಚಿಕೆ-8
ದಿನಾಂಕ: 16-02-2022 । ಪುಟಗಳು: 16

# ಶತ್ರುವಿನ ಕೊನೆಯ ಅಸ್ತ್ರ ಅಪಪ್ರಚಾರ



ಹೆಚ್ ಡಿ ಕೋಟೆ/ಸರಗೂರು:ತಾಲ್ಲೂಕಿನ ಶಾಸಕ ಅನಿಲ್ ಚಿಕ್ಕಮಾದು ಪತ್ರಿಕೆಗೋಷ್ಠಿಯಲ್ಲಿ ವಕೀಲ ಜಗದೀಶ್ ರವರು ಐಪಿಎಸ್ ಅಧಿಕಾರಿ ಡಿ ರವಿಚನ್ನಣ್ಣರವರ ವಿರುದ್ಧ ಆರೋಪ ಮಾಡಿರುವ ಬಗ್ಗೆ ಶಾಸಕ ಅನೀಲ್ ಚಿಕ್ಕಮಾದು.

ಇತ್ತೀಚಿಗೆ ಫೇಸ್ಬುಕ್ ಸಾಮಾಜಿಕ ಜಾಲತಾಣ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಬೆಂಗಳೂರಿನ ವಕೀಲ ಜಗದೀಶ್ ಎಂಬುವರು ಐಪಿಎಸ್



ಅಧಿಕಾರಿಯಾದ ಡಿ ರವಿಚನ್ನಣ್ಣರವರ ವಿರುದ್ಧ ಆರೋಪಗಳನ್ನು ಮಾಡುತ್ತಾ ಹೆಚ್ ಡಿ ಕೋಟೆಯ ತಾಲ್ಲೂಕಿನಲ್ಲಿ ಬೇನಾಮಿಗಳ ಹೆಸರಿನಲ್ಲಿ ಭೂಕಬಳಿಕೆ ಮಾಡಿಕೊಂಡಿರುವುದಾಗಿ ಹೇಳಿಕೆ ನೀಡುತ್ತಾ ಆರೋಪಿಸಿರುವುದನ್ನು ನೋಡುತ್ತಿದ್ದೇನೆ.

ನಾನು ಕಂಡ ಹಾಗೆ ರವಿ ಡಿ ಚನ್ನಣ್ಣರವರ್ ಓರ್ವ ಪ್ರಾಮಾಣಿಕ ಸೃಜನ ಶೀಲ ವ್ಯಕ್ತಿ ಕಡು ಬಡತನದ ಹಿಂದುಳಿದ ಸಮುದಾಯ ಕುಟುಂಬದಿಂದ ಬಂದ ಅವರು ಆಶ್ರಮದಲ್ಲಿ ವಿದ್ಯಾಭ್ಯಾಸ ಮಾಡಿ ಕಷ್ಟಗಳ ಮಧ್ಯೆ ಐಪಿಎಸ್ ಹುದ್ದೆ ಅಲಂಕರಿಸಿದ ಪ್ರತಿಭಾವಂತರು.ಧಕ್ಷ ಆಡಳಿತ ನೀಡುವ ಮುಖಾಂತರ ಹಲವರಿಗೆ ಮಾದರಿಯಾದಂತಹ ಅಧಿಕಾರಿ.

ಆಡಳಿತ ಸುಧಾರಣೆ ಪೋಲಿಸ್ ಜನಸ್ನೇಹಿ ವ್ಯವಸ್ಥೆ ಸೃಷ್ಟಿಸಲು ಶ್ರಮಿಸಿದಂತಹ ಪ್ರಾಮಾಣಿಕ ವ್ಯಕ್ತಿ ರವಿಚನ್ನಣ್ಣರವರ್.ಹಲವು ಗ್ರಾಮೀಣ ಪ್ರತಿಭಾವಂತ ವಿಧ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದವರು.ಅವರು ಹೆಚ್ ಡಿ ಕೋಟೆ ಗಡಿಭಾಗದ ಬಗ್ಗೆ ಹೆಚ್ಚಿನ ಒಲವು ಹೊಂದಿದ್ದವರು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಯಾಗಿ ಗ್ರಾಮ ವಾಸ್ತವ್ಯದ ಮುಖಾಂತರ ಗ್ರಾಮಾಂತರ ಸಮಸ್ಯೆಗಳ ಬಗ್ಗೆ ತಿಳಿದು ಸ್ಪಂದಿಸುವುದರ ಜೊತೆಗೆ ಪೋಲಿಸ್ ಜನಸ್ನೇಹಿ ವಾತಾವರಣ ಸೃಷ್ಟಿಸಲು ಶ್ರಮಿಸಿದಂತಹ ಪ್ರಾಮಾಣಿಕ ಅಧಿಕಾರಿ ಹಲವಾರು ಸ್ಪರ್ಧಾತ್ಮಕ ಪರೀಕ್ಷಾ ವಿಧ್ಯಾರ್ಥಿಗಳ ಶಿಬಿರಗಳನ್ನು ಉಚಿತ ಮಾರ್ಗದರ್ಶನ ನೀಡುವ ಮುಖಾಂತರ ವಿಧ್ಯಾರ್ಥಿಗಳ ಆತ್ಮ ವಿಶ್ವಾಸ ಹೆಚ್ಚಿಸುವಂತಹ ಕೆಲಸ ಮಾಡಿದ್ದಾರೆ.ಕೆಲಸ ನಿರ್ವಹಿಸಿದ ಎಲ್ಲಾ ಕಡೆಯಿಂದ ಜನಮನ್ನಣೆ ಪಡೆದಂತಹ ವ್ಯಕ್ತಿ.ಅಂತಹವರ ಬಗ್ಗೆ ಆಧಾರ ರಹಿತ ಆರೋಪಗಳನ್ನು ಮಾಡಿರುವುದು ನೋವುನ್ನಂಟು ಮಾಡಿದೆ ಎಂದರು.

ವಕೀಲರು ಫೇಸ್ಬುಕ್ ಲೈವ್ನಲ್ಲಿ ಹೆಚ್ ಡಿ ಕೋಟೆ ತಾಲ್ಲೂಕಿನಲ್ಲಿ ಡಿ ರವಿಚನ್ನಣ್ಣನವರ್ ಅವರು 78 ಎಕರೆ ಜಮೀನು ಭೂ ಕಬಳಿಕೆ ಮಾಡಿ ದೌರ್ಜನ್ಯ ವೆಸಗಿರುವುದಾಗಿ ಹೇಳಿಕೆ ನೀಡಿದ್ದು ನನಗೆ ತಿಳಿದಿರುವಂತೆ ಹೆಗ್ಗಡದೇವನಕೋಟೆಯಲ್ಲಿ ರವಿಚನ್ನಣ್ಣರವರ ಹಾಗೂ ಅವರ ಕುಟುಂಬ ವರ್ಗದವರು ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ.ಆರೋಪಿಸಲಾಗಿರುವುದೆಲ್ಲವೂ ಸತ್ಯಕ್ಕೆ ದೂರವಾದ ಸಂಗತಿ.ಅವರ ಕರ್ತವ್ಯ ನಿಷ್ಠೆ ಹಾಗೂ ಜನಪ್ರಿಯತೆಯನ್ನು ಸಹಿಸಿದವರು ವಕೀಲರ ಮುಖಾಂತರ ಇಂತಹ ಕಾರ್ಯ ಮಾಡಿಸುತ್ತಿದ್ದಾರೆಂಬದು ನನ್ನ ಭಾವನೆ.

ಮೈಸೂರು ಜಿಲ್ಲಾ ವರಿಷ್ಠಾಧಿಕಾರಿಗಳಾಗಿದ್ದಾಗ ಹೆಚ್ ಡಿ ಕೋಟೆ ತಾಲ್ಲೂಕಿನ ಜನರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದವರು ಬಡ ಜನರ ಕೇಸುಗಳನ್ನು ಹೆಚ್ಚಿನ ಆಸಕ್ತಿ ವಹಿಸಿ ಸಮಸ್ಯೆ ಬಗ್ಗೆ ಹರಿಸಲು ಶ್ರಮಿಸಿದರು ಹಿಂದುಳಿದ ತಾಲ್ಲೂಕಾಗಿದ್ದ

ಕಾರಣ ಹಲವು ಬಾರಿ ಭೇಟಿ ನೀಡಿ ಪೋಲಿಸ್ ಆಡಳಿತ ವ್ಯವಸ್ಥೆಯಲ್ಲಿ ಪ್ರಾಮಾಣಿಕ ಸೇವೆ ನೀಡಿ ಶ್ರಮಿಸಿ ಜಿಲ್ಲೆಯ ಎಲ್ಲಾ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಕ್ಯಾಂಟೀನ್ ತೆರೆಯುವ ಮುಖಾಂತರ ಪೋಲಿಸ್ ಸಿಬ್ಬಂದಿ ಹಾಗೂ ಠಾಣೆಗೆ ಬರುವ ಬಡ ಜನರಿಗೆ ಕಡಿಮೆ ದರದಲ್ಲಿ ಉತ್ತಮ ಉಪಹಾರ ಸಿಗುವ ವ್ಯವಸ್ಥೆ ಮಾಡಿಸಿದರು.ಜಿಲ್ಲೆಯಿಂದ ಬೆಂಗಳೂರಿಗೆ ವರ್ಗಾವಣೆಯಾದ ನಂತರ ಹೆಚ್ ಡಿ ಕೋಟೆಯ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿದಂತಹ ವೇಳೆ ತಾಲ್ಲೂಕಿನ ಭೌಗೋಳಿಕ ಗ್ರಾಮೀಣ ವಾತವರಣ ಹಾಗೂ ಸಾಮಾಜಿಕ ವ್ಯವಸ್ಥೆ ಅವರ ಹುಟ್ಟೂರಿನ ಲಕ್ಷಣಗಳು ಹೊಂದಿದ್ದು ಹೆಚ್ಚಿನ ಸಾಮ್ಯತೆ ಇರುವ ಕಾರಣ ಆಗಾಗ್ಗೆ ನೆನಪಿಗೆ ಬರುತ್ತದೆ ಇಲ್ಲಿನ ಜನರನ್ನು ಕಂಡರೆ ನಮ್ಮ ಊರ ಜನರೆಂಬ ಭಾವನೆ ಮೂಡುತ್ತದೆ ಎಂದು ಸ್ಥಳೀಯ ಕಾರ್ಯಕ್ರಮವೊಂದರಲ್ಲಿ ಹೇಳಿದ್ದು ನನ್ನ ಮನದಲ್ಲಿ ಅಳಿಸದಂತೆ ಉಳಿದಿದೆ.

\ಇದು ಹೆಚ್ ಡಿ ಕೋಟೆ ಜನರ ಬಗೆಗಿನ ಆತ್ಮೀಯತೆಗೆ ಸಾಕ್ಷಿಯಾಗಿದೆ ಅಧಿಕಾರಿಯಾಗಿ ಬಡ ಜನರ ಸಮಸ್ಯೆಗಳಿಗೆ ಹೆಚ್ಚಾಗಿ ಸ್ಪಂದ್ದಿಸಿದ್ದರು ನಾನೂ ಸಹ ನೋಡಿದ್ದೇನೆ. ಆರೋಪಿಸುತ್ತಿರುವ ವ್ಯಕ್ತಿಯು ರಾಜಕೀಯ ಪಕ್ಷದಲ್ಲಿ ಈಗಾಗಲೇ ಗುರುತಿಸಿಕೊಂಡಿರುವುದು ತಿಳಿದು ಬಂದಿದೆ ಅವರಿಗೆ ಸಂಬಂದಿಸಿದ ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಗಮನಿಸಿದಾಗ ಇನ್ನೂ ಹಲವು ಪ್ರಭಾವಿ/ಹೆಸರು ಮಾಡಿರುವ ವ್ಯಕ್ತಿಗಳ ವಿರುದ್ಧ ರಾಜಕೀಯ ವ್ಯಕ್ತಿಗಳು ಸಮಾಜದ ವ್ಯವಸ್ಥೆ -ಅವ್ಯವಸ್ಥೆ ಹಾಗೂ ಸರ್ಕಾರಗಳ ಬಗ್ಗೆ ಟೀಕೆಗಳನ್ನು ಪದೇ ಪದೇ ಮಾಡಿ ಪ್ರಚಾರ ಪಡೆರುವ ಆಭಿಲಾಷೆ ಉಳ್ಳವರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.ಇವರ ಆರೋಪದಿಂದ ಕರ್ನಾಟಕದ ಅದರಲ್ಲೂ ಹೆಚ್ ಡಿ ಕೋಟೆಯಲ್ಲಿನ ಚನ್ನಣ್ಣರವರ ಅಭಿಮಾನಿಗಳಿಗೆ ನೊವುಂಟಾಗಿದೆ.

ಡಿ ರವಿಚನ್ನಣ್ಣನವರ ಜನಪರ ಕಾಳಜಿ ದಕ್ಷ ಸೇವೆ ಆಡಳಿತ ಇಲಾಖೆಯಲ್ಲಿನ ಇವರ ಏಳಿಗೆ ಹಾಗೂ ಜನಪ್ರಿಯತೆ ಸಹಿಸದ ಕೆಲವು ವ್ಯಕ್ತಿಗಳ ದುರಾಲೋಚನೆ ಭರಿತ ಆರೋಪ ಪ್ರಚಾರ ಪಡೆಯಲು ಮಾಡತ್ತಿರುವ ತಂತ್ರಗಾರಿಕೆ ಅಷ್ಟೇ ಅವರ ತೇಜೋವಧೆಯನ್ನು ಮಾಡಲು ಪ್ರಯತ್ನಿಸುತ್ತಿರುವುದನ್ನು ಜನರ ಪರವಾಗಿ ಖಂಡಿಸುತ್ತೇನೆ ಎಂದರು.

# ತಂದೆಯ ಕನಸು ನನಸಾಗಿಸಿದ ಫರೀದಾ ಬೇಗಂ



ಕುಕನೂರ ಪಟ್ಟಣದಲ್ಲಿ ಹೂವು ಮಾರುತ್ತಿದ್ದ ಫರೀದಾಬೇಗಂ ತಂದೆ ಮೌಲಾಸಾಬ್ ಪಟೇಲ್ ಪಿ.ಎಸ್.ಐ.ಪರೀಕ್ಷೆಯಲ್ಲಿ 17 ನೇ ರಾಂಕ್ ಪಡೆದು ಪಿ.ಎಸ್.ಐ ಹುದ್ದೆಗೆ ಆಯ್ಕೆ ಕುಕನೂರ ಪಟ್ಟಣದಲ್ಲಿ ಪಟೇಲ್ ಕುಟುಂಬ ಅದೊಂದು ಬಡ ಕುಟುಂಬ ಬೀದಿ ಬದಿಯಲ್ಲಿ ನಿಂತು ಪಟ್ಟಣದ ವೀರಭದ್ರಪ್ಪ ಶಿರೂರು ವೃತ್ತದಲ್ಲಿ ಬಹಳ ವರ್ಷಗಳಿಂದ ಕಾಲ ಹೂವುಗಳು ಹಣ್ಣು ಮಾರುತ್ತಲೇ ಕುಟುಂಬದ ಜೀವನ ಸಾಗಿಸುತ್ತಿರುವ ಮೌಲಾಸಾಬ್ ಪಟೇಲ್ ಅವರ ಕುಟುಂಬದ ಕುಡಿ ಫರೀದಾಬೇಗಂ ಯಶೋಗಾಥೆ ಇದು.

ಹೂವು ಮಾರುತ್ತಲೇ ಅಪ್ಪ ಮೌಲಾಸಾಬ್ ಪಟೇಲ್ ಕುಟುಂಬ ನಿರ್ವಹಣೆ ಜೊತೆಗೆ ಮಗಳನ್ನು ದೊಡ್ಡ ಅಧಿಕಾರಿಯನ್ನಾಗಿ ನೋಡಬೇಕು ಎಂಬ ಕನಸು ಕಂಡಿದ್ದರು, ಅದರಂತೆ ಶ್ರಮವಹಿಸಿ ದುಡಿದು ಮಗಳನ್ನು ಪದವಿ ಓದಿಸಿದ್ದಾರೆ. ತಂದೆಗೆ ನೆರವಾಗಲೆಂದು ಫರೀದಾಬೇಗಂ, ಅಂಗಡಿಯಲ್ಲಿ ಕುಳಿತು ಹೂವು ಸಹ ಮಾರಿದ್ದಾಳೆ. ಕೆಲ ತಿಂಗಳಿಂದ ಮನೆಯಲ್ಲಿಯೇ ಹೂವು ಕಟ್ಟಿ ಅಪ್ಪ ವ್ಯಾಪಾರಕ್ಕೆ ಸಹಾಯವಾಗುತ್ತಿದ್ದಳು.

ತಂದೆಯ ಕನಸು ಈಡೇರಿಸಲು ಹಗಲಿರುಳು ಓದಿ ಐಎಎಸ್(ಖಂಖ) ಹಾಗೂ ಕೆಎಎಸ್(ಏಂಖ) ಪರೀಕ್ಷೆ ಎದುರಿಸಿದ್ದಾರೆ.

ಆದರೆ ಇತ್ತೀಚಿಗೆ ತಂದೆ ಮೌಲಾಸಾಬ್ ಪಟೇಲ್ ಅವರು ಕೋವಿಡ್ ನಿಂದ ಮೃತಪಟ್ಟರು.

ಈ ದುಃಖದ ನಡುವೆಯೂ ಪಿಎಸ್ಐ ಪರೀಕ್ಷೆ ಎದುರಿಸಿರುವ ಫರೀದಾಬೇಗಂ ಪಟೇಲ್ ಅವರು 17 ನೇ ರಾಂಕ್ ನಲ್ಲಿ ಪಾಸಾಗಿದ್ದಾರೆ.ಆದರೆ ಈ ಖುಷಿ ಹಂಚಿಕೊಳ್ಳಲು ತಂದೆ ಇಲ್ಲದಿರುವುದು ಬೇಸರ ಮೂಡಿಸಿದೆ ಎಂದು ಫರೀದಾಬೇಗಂ ಪಟೇಲ್ ಕಣ್ಣೀರಾದರು.

ಫರೀದಾಬೇಗಂ ಪಟೇಲ್ ಅವರು ಧಾರವಾಡದಲ್ಲಿ ಬಿಬಿಎ ಮುಗುಸಿ

ಹೈದರಾಬಾದ್ ನಲ್ಲಿ 6 ತಿಂಗಳು ಐಎಎಸ್ ಕೋಚಿಂಗ್ ಸಹ ಪಡೆದಿದ್ದಾರೆ.

ಈಗಾಗಲೇ ನಾಲ್ಕು ಸಲ ಐಎಎಸ್ ಪರೀಕ್ಷೆ ಬರೆದಿದ್ದು , ಒಂದೆರಡು ಅಂಕಗಳಿಂದ ಕೈ ತಪ್ಪಿವೆ.

ಇತ್ತೀಚೆಗೆ ಕೆಎಎಸ್ ಪರೀಕ್ಷೆ ಸಹ ಬರೆದಿದ್ದಾರೆ, ಅದು ಕೂಡಾ ಕೆಲವೇ ದಿನಗಳಲ್ಲಿ ಫಲಿತಾಂಶ ಪ್ರಕಟವಾಗಲಿದೆ. ಆದರೆ ಈ ನಡುವೆ ರಾಜ್ಯ ಪೋಲಿಸ್ ಇಲಾಖೆ ಕರೆದಿದ್ದ ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ 17 ನೇ ರಾಂಕ್ ಪಡೆಯುವ ಮೂಲಕ ಪಿಎಸ್ಐ ಹುದ್ದೆಗೆ ಆಯ್ಕೆಯಾಗಿದ್ದಾರೆ.ಬಡತನ ಹಾಗೂ ದುಃಖದ ನಡುವೆ ಸರ್ಕಾರಿ ನೌಕರಿ ಗಿಟ್ಟಿಸಿಕೊಳ್ಳುವ ಮೂಲಕ ಮಾದರಿಯಾಗಿದ್ದಾರೆ.

ಫರೀದಾಬೇಗಂ ಅಣ್ಣಂದಿರಾದ ಗೌಸ್ ಪಟೇಲ್, ಜಿಲಾನ್ ಪಟೇಲ್, ಫಾರೂಕ್ ಪಟೇಲ್, ಇಬ್ರಾಹಿಂ ಪಟೇಲ್ ಅವರು ನನ್ನ ತಂಗಿ ಬಹಳಷ್ಟು ಕಷ್ಟ ಪಟ್ಟಿದ್ದಾಳೆ, ಬಸ್ ನಿಲ್ದಾಣದಲ್ಲಿ ಹೂವು ಮಾರಿದ್ದಾಳೆ. ಮನೆಯಲ್ಲಿ ಕುಳಿತು ಹೂವು ಕಟ್ಟಿ ಅಂಗಡಿಗೆ ಕಳುಹಿಸುತ್ತಿದ್ದಳು. ತಂದೆಯವರ ಆಸೆಯಂತೆ ದೊಡ್ಡ ಅಧಿಕಾರಿಯಾಗಬೇಕು ಎಂಬ ಕನಸು ನನಸಾಯಿತು. ಈಗ ಅಪ್ಪ ಇಲ್ಲ. ಆದರೂ ತಂಗಿಯ ಇಚ್ಛೆಯಂತೆ ಓದಿಸಿ ದೊಡ್ಡ ಅಧಿಕಾರಿಯಾಗಿ ಕಾಣುವುದು ಹೆಮ್ಮೆ ಅನಿಸುತ್ತಿದೆ.

ಕುಕನೂರಿನ ನಾಗರೀಕ ಬಂಧುಗಳು ಶುಭಾಶಯಗಳು ಕೋರಿ ಫರೀದಾಬೇಗಂ ಸಾಧನೆ ನಿಜಕ್ಕೂ ಕುಕನೂರ ಪಟ್ಟಣಕ್ಕೆ ಮಹಿಳಾ ವರ್ಗಕ್ಕೆ ಸ್ಫೂರ್ತಿ ಎಂದರು.

-ಚಂದ್ರಕಾಂತ ಗುಡಿಮನಿ.

# ಹೈಕೋರ್ಟ್ ಕಾರ್ಖಾನೆಯನ್ನು ಬಂದ್ ಮಾಡುವಂತೆ ಆದೇಶ ಹೊರಡಿಸಿದ್ದರೂ ಅಧಿಕಾರಿಗಳು ಮೂಕರಾಗಿ ಇರುವುದು ಅನುಮಾನ







ಹಾಸನ:ಅರಕಲಗೂಡು ಪಟ್ಟಣ ಪಂಚಾಯಿತಿ ವಾರ್ಡ್ ನಂಬರ್ 14 ಕೆಲ್ಲೂರು ಗ್ರಾಮದ ಹತ್ತಿರದಲ್ಲಿರುವ ಕಾರ್ಖಾನೆಯಿಂದ ವಾಯು ಮಾಲಿನ್ಯ ಶಬ್ದ ಮಾಲಿನ್ಯ ಕುರಿತು ಈಗಾಗಲೇ ಹೈಕೋರ್ಟ್ ಕಾರ್ಖಾನೆಯನ್ನು ಬಂದ್ ಮಾಡುವಂತೆ ಆದೇಶ ಹೊರಡಿಸಿದ್ದರೂ ಯಾವುದೇ ಅಧಿಕಾರಿಗಳು ಗಮನ ಕೊಡದೆ ಮೂಕರಾಗಿ ಇರುವುದು ಗ್ರಾಮಸ್ಥರಿಗೆ ಅನುಮಾನ ಹುಟ್ಟಿಸುತ್ತಿದೆ ಹಾಗಾಗಿ ಕೂಡಲೇ ಕೋರ್ಟ್ ಆದೇಶವನ್ನು ಅಂಗೀಕರಿಸಿ ಕಾರ್ಖಾನೆಯನ್ನು ಮುಚ್ಚಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಗಣೇಶ್ ಕೆ ಪಿ ಅಂಬೇಡ್ಕರ್ ಯುವ ಸೇನೆ ಅರಕಲಗೋಡು ತಾಲೂಕ ಅಧ್ಯಕ್ಷರು ಹಾಗೂ ವಾರ್ಡ್ ನಂಬರ್ 14 ಕೆಲ್ಲೂರು ಗ್ರಾಮಸ್ಥರ ವತಿಯಿಂದ ಮನವಿ ಸಲ್ಲಿಸಿದರು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–8
ದಿನಾಂಕ: 16–02–2022 । ಪುಟಗಳು: 16

# ಭವಿಷ್ಯದ ಭರವಸೆಯ ಮೂಡಿಸುವತ್ತ ದೇಶದ ಬಜೆಟ್

ಆಧುನಿಕ ರಾಜ್ಯಗಳ ಸುಖಿ ಅಥವಾ ಕಲ್ಯಾಣ ರಾಜ್ಯಗಳೆಂದು ಆರ್ಥಿಕ ಚಿಂತಕರು ಅಭಿಪ್ರಾಯ ಪಟ್ಟಿದ್ದಾರೆ. ಇದರನ್ವಯ ದೇಶದ "ಸರ್ವೇ ಜನೋ ಸುಖಿನೋ ಭವಂತು" ಎಂಬ ತತ್ವದಡಿಯಲ್ಲಿ ಪ್ರಜಾಕಲ್ಯಾಣಕ್ಕಾಗಿ ಅಗತ್ಯವಿರುವ ಅಪಾರ ಸೌಲಭ್ಯಗಳನ್ನು ಕಲ್ಪಿಸಲು ಪ್ರಯತ್ನಿಸುತ್ತಿರುವುದರಿಂದ ಅವುಗಳನ್ನು ಕಲ್ಯಾಣ ರಾಷ್ಟ್ರಗಳೆಂದು ಗುರುತಿಬೇಕಾದರೆ ಸರ್ಕಾರ ಹೇಗೆ ಯಾವ ರೀತಿಯಿಂದ ಸೌಲಭ್ಯಗಳನ್ನು ಒದಗಿಸುತ್ತದೆ. ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಆದಾಯದ ಮೂಲಗಳು ಯಾವ ರೀತಿಯಲ್ಲಿ ಸರ್ಕಾರ ತನ್ನ ಆದಾಯವನ್ನು ವ್ಯಯಿಸುತ್ತದೆ.

ಮಿಶ್ರ ಆರ್ಥಿಕತೆಯಲ್ಲಿ ಹಣಕಾಸಿನ ಕಾರ್ಯಾಚರಣೆಗಳ ಮೂಲಕ ಸರ್ಕಾರ ಜನರ ಆರ್ಥಿಕ ಜೀವನದ ಮೇಲೆ ಹೇಗೆ ಪ್ರಭಾವ ಬೀರುತ್ತದೆ. ಮತ್ತು ಸಾಮಾಜಿಕ ಕಲ್ಯಾಣವನ್ನು ಉತ್ತೇಜಿಸಲು ಮತ್ತು ಆರ್ಥಿಕತೆಯ ಉದ್ದೇಶಗಳನ್ನು ಈಡೇರಿಸಲು ಸರ್ಕಾರದ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಮೇಲಿನ ವೆಚ್ಚವನ್ನು ವಿವಿಧ ಮೂಲಗಳಿಂದ ಅಂದಾಜಿಸುತ್ತದೆ.

ಸರ್ಕಾರವು ನಾಗರಿಕ ಕಲ್ಯಾಣಕ್ಕಾಗಿ ಹಲವು ಸಾಮಾಜಿಕ ಆರ್ಥಿಕ ಹಾಗೂ ಇತರ ಚಟುವಟಿಕೆಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ. ಇವುಗಳ ಜೊತೆಗೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹಲವಾರು ನೀತಿಗಳು. ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಜಾರಿಗೊಳಿಸಬೇಕಾಗುತ್ತದೆ.

ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದ್ದು ಸಮಗ್ರ ರಾಷ್ಟ್ರದ ಅಭಿವೃದ್ಧಿಗೆ ಅಪೇಕ್ಷಿತ ಸಾಮಾಜಿಕ ಮತ್ತು ಆರ್ಥಿಕ ಗುರಿಗಳನ್ನು ಸಾಧಿಸಬೇಕಾದರೆ ಇರುವ ಸಂಪನ್ಮೂಲವನ್ನು ಸಮರ್ಪಕವಾಗಿ, ದಕ್ಷವಾಗಿ ಮರು ಹಂಚಿಕೆ ಮಾಡುವುದರ ಮುಖಾಂತರ ಸಮಾನತೆಯನ್ನು ಕಾಪಾಡಬೇಕಾಗುತ್ತದೆ.

ಭಾರತದಂತಹ ರಾಷ್ಟ್ರಗಳಲ್ಲಿ ಅಸಮಾನತೆ ತಾಂಡವವಾಡುತ್ತಿರುವಾಗ ಸಮಾನತೆಯ ಸ್ಥಿರತೆಯನ್ನು ಕಾಪಾಡಲು ಇರುವ ಸಂಪನ್ಮೂಲದ ದಕ್ಷ ವಿತರಣೆ ಮಾಡಿ ಆರ್ಥಿಕ ಸ್ಥಿರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಆಯವ್ಯಯದ ಪಾತ್ರವು ಪ್ರಮುಖವಾಗಿರುತ್ತದೆ. ಆರ್ಥಿಕ ನ್ಯೂನ್ಯತೆ ಸರಿಪಡಿಸುವ ನಿಟ್ಟಿನಲ್ಲಿ ಪರ–ವಿರೋಧದ ನಡುವೆಯು ಆಯವ್ಯಯದ ತಯಾರಿಯ ಪೂರ್ಣೋದ್ಯೋಗ, ಬಡತನ ನಿವಾರಣೆ, ಪ್ರಾದೇಶಿಕ ಅಸಮತೋಲನ ಹೋಗಲಾಡಿಸುವ ನಿಟ್ಟಿನಲ್ಲಿ ಮಹತ್ತ್ವದ ಸ್ಥಾನ ಹೊಂದಿದೆ.

" ಮುಂಗಡ ಪತ್ರವು ಕೇವಲ ಆದಾಯ ಮತ್ತು ವೆಚ್ಚಗಳ ಯೋಜನೆ ಮಾತ್ರವಲ್ಲದೆ ಭೌತಿಕ ಹಣಕಾಸಿನ ಪೂರ್ಣ ಸ್ಥಿತಿಯನ್ನು ಶಾಸಕಾಂಗದ ಮುಂದೆ ಮಂಡಿಸಿ ಸಚಿವಾಲಯದ ಹೇಳಿಕೆಯಲ್ಲಿ ಪ್ರಕಟಪಡಿಸಿದ ಸರ್ಕಾರದ ಹಣಕಾಸಿನ ವಿಚಾರಗಳ ನಿರ್ವಹಣೆಯಾಗಿದೆ"––ಎಫ್ ಶಿರಾಸ್

ಭವಿಷ್ಯದ ಭರವಸೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮಹಾತ್ವಾಕಾಂಕ್ಷೆ ಭಾರತ, ಆರ್ಥಿಕ ಅಭಿವೃದ್ಧಿ ಮತ್ತು ಸಮಾಜದ ಆರೈಕೆ ಎಂಬ ಮೂರು ಸ್ತಂಭಗಳ ಆಧಾರದ ಮೇಲೆ ಆಯವ್ಯಯದ ಪತ್ರವನ್ನು ಸಿದ್ಧಪಡಿಸಲಾಗುತ್ತದೆ.

ಭವ್ಯ ಭಾರತದಲ್ಲಿ ಮಾನವ ಸಂಪನ್ಮೂಲಗಳನ್ನು ಸಮರ್ಪಕವಾಗಿ ನಿರ್ಮಾಣ ಮಾಡಬೇಕಾದರೆ ಆರೋಗ್ಯ,ಶಿಕ್ಷಣ ಮತ್ತು ಉತ್ತಮ ಉದ್ಯೋಗಗಳೊಂದಿಗೆ ಸಮಾಜದ ಎಲ್ಲ ವರ್ಗದ ಜನರು ಉತ್ತಮ ಜೀವನಮಟ್ಟವನ್ನು ನಿರೀಕ್ಷಿಸುವಂತೆ ಮಾಡುವುದು ಮಹಾತ್ವಾಕಾಂಕ್ಷೆ ಭಾರತದ ಉದ್ದೇಶವಾಗಿದೆ.

ಮುಂಗಡ ಪತ್ರದ ಹಿನ್ನೆಲೆಯನ್ನು ಗಮನಿಸಿದಾಗ ಮುಂಗಡಪತ್ರ ಎಂಬ ಪದವು ಃಣಜರಜಣ ಎಂಬ ಪದವು ಫ್ರೆಂಚ್ ಭಾಷೆಯ ಃಠಣಜರಜಣಣಜ ಸಂವಾದಿಯಾಗಿದೆ ಇದರ ಅರ್ಥ ಹಣಕಾಸಿನ ಪತ್ರಗಳನ್ನು ಹೊಂದಿರುವ 'ಚರ್ಮದ ಚೀಲ' ತರುವ ಸಂಪ್ರದಾಯವಿದೆ. "ಮುಂಬರುವ ವರ್ಷದ ಸರ್ಕಾರದ ನಿರೀಕ್ಷಿತ ಆದಾಯ ಮತ್ತು ವೆಚ್ಚಗಳ ಪಟ್ಟಿಯನ್ನು ಮುಂಗಡಪತ್ರ ಎನ್ನಲಾಗುತ್ತದೆ" ಇದು ಸರ್ಕಾರದ ಮುಂದಿನ ವರ್ಷದಲ್ಲಿ ಆದಾಯ ಮತ್ತು ಮಾಡಬಹುದಾದ ವೆಚ್ಚಗಳನ್ನು ಒಳಗೊಂಡಿರುತ್ತದೆ ಭಾರತದಲ್ಲಿ ಮುಂಗಡ ಪತ್ರವನ್ನು ಏಪ್ರಿಲ್ 1ರಿಂದ ಮಾರ್ಚ್ 31ರ ಹಣಕಾಸು ವರ್ಷಕ್ಕೆ ತಯಾರಿಸಲಾಗುತ್ತದೆ.

ಭಾರತದಲ್ಲಿ ಮುಂಗಡಪತ್ರವನ್ನು ಮೊದಲ ಬಾರಿಗೆ 7 ಏಪ್ರಿಲ್ 1860 ರಲ್ಲಿ ಜೇಮ್ಸ್ ವಿಲ್ಸನ್ ಪ್ರಕಟಿಸಿದರು. ಸ್ವತಂತ್ರ ಭಾರತದ ಮೊದಲ ಮುಂಗಡಪತ್ರವನ್ನು ಮೊದಲ ಹಣಕಾಸು ಸಚಿವರಾಗಿದ್ದ ಷಣ್ಮುಗಂ ಚೆಟ್ಟಿಯವರು 26 ನವಂಬರ್1947 ರಲ್ಲಿ ಪ್ರಕಟಿಸಿದರು.

ಸವಿಧಾನದ 112ನೇ ವಿಧಿಯು ಪ್ರಕಾರ ಕೇಂದ್ರ ಹಣಕಾಸು ಸಚಿವರು ಮುಂಗಡ ಪತ್ರವನ್ನು ಸಿದ್ಧಪಡಿಸಿ ಲೋಕಸಭೆಯಲ್ಲಿ ಮಂಡಿಸುತ್ತಾರೆ ಇದನ್ನು 1 ಫೆಬ್ರವರಿ ದಿನದಂದು ಮಂಡಿಸಲಾಗುತ್ತದೆ ಆಯವ್ಯ ಪತ್ರವನ್ನು ಲೋಕಸಭೆಯ ಮುಂದೆ ಹಣಕಾಸು ಸಚಿವರು ಮಂಡಿಸುವವರು ಗೌಪ್ಯತೆಯನ್ನು ಕಾಯ್ದುಕೊಳ್ಳಲಾಗುತ್ತದೆ.

ಪ್ರಸ್ತುತ ಬಜೆಟ್ಟನ್ನು ಸಿದ್ಧಪಡಿಸುವ ಕೇಂದ್ರ ಹಣಕಾಸು ಸಚಿವಾಲಯ, ನೀತಿ ಆಯೋಗ,ಮತ್ತು ಇತರ ಸಚಿವಾಲಯದ ಉನ್ನತಾಧಿಕಾರಿಗಳು ಸಮಾಲೋಚನೆ ಪ್ರಕ್ರಿಯೆ ಮೂಲಕ ಮುಂಗಡಪತ್ರ ತಯಾರಿಸುತ್ತಾರೆ. ಮುಂಗಡ ಪತ್ರದ ವೆಚ್ಚವನ್ನು ಆಧರಿಸಿ ಹಣಕಾಸು ಸಚಿವಾಲಯವು ಕೆಲವು ಮಾರ್ಗಸೂಚಿಗಳನ್ನು ಪ್ರಕಟಿಸುತ್ತದೆ. ಇದಕ್ಕ ಅನುಗುಣವಾಗಿ ಸಚಿವಾಲಯಗಳು ಬೇಡಿಕೆಯನ್ನು ಮುಂದಿರಿಸುತ್ತವೆ. ಹಣಕಾಸು ಸಚಿವಾಲಯದ ಅಧೀನದಲ್ಲಿರುವ ಆರ್ಥಿಕ ವ್ಯವಹಾರಗಳ ಇಲಾಖೆ ಮುಂಗಡಪತ್ರ ವಿಭಾಗವು ಬಜೆಟ್ಟನ್ನು ತಯಾರಿಸುತ್ತದೆ.

1947 ರಿಂದ ಕೇಂದ್ರ ವಿತ್ತಸಚಿವರು ಸಂಸತ್ತಿನಲ್ಲಿ ಮಂಡಿಸುತ್ತಾ ಬಂದಿದ್ದಾರೆ.ಸಾಮಾನ್ಯವಾಗಿ ಕೇಂದ್ರ ಸಚಿವರು ಫೆಬ್ರುವರಿ ತಿಂಗಳಿನ ಕೊನೆಯ ವಾರದ ಕೊನೆಯ ದಿನದಂದು ಲೋಕಸಭೆಯಲ್ಲಿ ಮಂಡಿಸುತ್ತಿದ್ದರು. ಆದರೆ 2017– 18 ರ ಬಜೆಟ್ಟನ್ನು ಅರುಣ್ ಜೇಟ್ಲಿ ಅವರು ಫೆಬ್ರುವರಿ ತಿಂಗಳ ಮೊದಲ ವಾರದಲ್ಲಿ ಮಂಡಿಸುವ ಸಂಪ್ರದಾಯಕ್ಕೆ ನಾಂದಿ ಹಾಡಿದರು. 1999 ರವರೆಗೆ ಕೇಂದ್ರ ಬಜೆಟ್ ಅನ್ನು ಸಂಜೆ 5 ಗಂಟೆಗೆ ಮಂಡಿಸಲಾಗುತ್ತಿದ್ದು ಯಶವಂತ್ ಸಿನ್ಹಾ ಅವರು 2000–01 ರ ಬಜೆಟ್ ಅನ್ನು ಮೊದಲು ಭಾರಿ ಬೆಳಗ್ಗೆ 11 ಗಂಟೆಗೆ ಮಂಡಿಸುವ ಸಂಪ್ರದಾಯವನ್ನು ಆರಂಭಿಸಿದರು.

ಭಾರತದ ಬಜೆಟ್ ಇಂಗ್ಲೆಂಡ್ ಬಜೆಟ್ ವಿನ್ಯಾಸವನ್ನು ಹೊಂದಿದ್ದು,ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ಇಲಾಖೆಯು ಬಜೆಟ್ ವಿಭಾಗವು ಭಾರತದಲ್ಲಿ ಬಜೆಟ್ಟನ್ನು ಸಿದ್ಧಪಡಿಸುವ ಜವಾಬ್ದಾರಿ ಹೊಂದಿದೆ. ಕೇಂದ್ರ ವಿತ್ತ ಸಚಿವರು ಬಜೆಟ್ ರಚನಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಭಾರತೀಯ ಸಂಖ್ಯಾಶಾಸ್ತ್ರದ ಪಿತಾಮಹ ಎನಿಸಿದ ಪಿ.ಸಿ.ಮಹಲನೋಬಿಸ್ ಅವರನ್ನು ಭಾರತದ ಬಜೆಟ್ ಪಿತಾಮಹ ಎಂದು ಕರೆಯುತ್ತಾರೆ. ಸ್ವತಂತ್ರ ಭಾರತದ ಮೊದಲ ಕೇಂದ್ರ ಬಜೆಟ್ ಕರಡನ್ನು ಸಿದ್ಧಪಡಿಸುವಲ್ಲಿ ಅವರ ಪಾತ್ರವೂ ಮಹತ್ವದ್ದಾಗಿದೆ.

ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಕೆಂಪುಬಣ್ಣದ ಬಳಸದೆ ಕೇಂದ್ರ ವಿತ್ತ ಸಚಿವ ನಿರ್ಮಲ ಸೀತಾರಾಮನ್ ಅವರು ಸ್ವತಂತ್ರ ನಂತರ ಮೊದಲ ಬಾರಿ ಕೆಂಪು ಬಣ್ಣದಲ್ಲಿದ್ದು. ಸಂಸತ್ತಿಗೆ ಆಗಮಿಸಿ ನಂತರ ಬಜೆಟ್ ಮಂಡನೆ 2019 ಜುಲೈ 5 ರಂದು ಮಾಡಿದರು. ಕಾರಣ ವಿತ್ತಸಚಿವರು ನಾವೀಗ ಬ್ರಿಟಿಷರ ಆಳ್ವಿಕೆಯಲ್ಲಿ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವೇಕೆ ಹಳೆಯಕಾಲದ ಸಂಪ್ರದಾಯವನ್ನು ಅನುಕರಣೆ ಮಾಡಬೇಕು. ಹಾಗೂ ಸ್ವಂತಿಕೆಯನ್ನು ಕಾಪಾಡಿಕೊಳ್ಳಲು ಮಾತ್ರ ಕೆಂಪು ಬಳಸಿದೆ ಎಂದು ಹೇಳಿದ್ದಾರೆ.

ಸ್ವತಂತ್ರ ನಂತರ ಮೊಟ್ಟಮೊದಲ ಬಾರಿಗೆ 2021ನೇ ಬಜೆಟ್ " ಕಾಗದರಹಿತ " ಬಜೆಟ್ ಆಗಿದ್ದು ಘೋಷಣೆ ಮಾಡುವುದರ ಮುಖಾಂತರ ಮತ್ತೊಂದು ಇತಿಹಾಸವನ್ನು ಸೃಷ್ಟಿ ಮಾಡಿದ ಶ್ರೇಯಸ್ಸು ವಿತ್ತ ಸಚಿವ ನಿರ್ಮಲಾ ಸಿತಾರಾಮನ ಅವರಿಗೆ ಸಲ್ಲುತ್ತದೆ.

ಹೀಗೆ ಭಾರತದ ಹಲವಾರು ಪರ–ವಿರೋಧದ ಚರ್ಚೆಗಳು ನಡುವೆಯೂ ಆರ್ಥಿಕ ಅಭಿವೃದ್ಧಿಯ ಸಾಧನೆ,ಉದ್ಯೋಗದ ಸ್ಥಾಪನೆ, ಹಣದುಬ್ಬರದ ನಿಯಂತ್ರಣ,ಬಡತನ,ನಿರುದ್ಯೋಗ, ಆದಾಯದ ಅಸಮಾನತೆ, ಪ್ರಾದೇಶಿಕ ಅಸಮಾನತೆ ಸಮಸ್ಯೆಗಳ ನಿವಾರಣೆ, ತೆರಿಗೆಗಳ ಮೂಲಕ ಆದಾಯ ಸಂಗ್ರಹಣೆ, ಮತ್ತು ಕಲ್ಯಾಣರಾಜ್ಯದ ಸ್ಥಾಪನೆ ಸಾಮಾಜಿಕ ನ್ಯಾಯ ಸ್ಥಾಪಿಸುವುದು ಮುಂತಾದ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಜನರಲ್ಲಿ ನಿರೀಕ್ಷೆಯನ್ನು ಮೂಡಿಸಿದೆ.

**– ರವಿ ಸುಣಗಾರ, ಅರ್ಥಶಾಸ್ತ್ರ ಉಪನ್ಯಾಸಕರು,ಕೊಪ್ಪಳ.**

## ನರೇಗಾ ದಿವಸ್ ಬೆಳೆಗಿಸುವದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ



ನರೇಗಾ ದಿವಸ್ (ದಿನಾಚರಣೆ) ಅಂಗವಾಗಿ ಕಲಬುರಗಿ ತಾಲೂಕ ಔರಾದ.ಬಿ ಗ್ರಾ.ಪಂ ನ ಸ್ವಾಮಿ ಸಮರ್ಥ ದೇವಾಲಯದ ಆವರಣದಲ್ಲಿ ಮಾನ್ಯ CEO ಸರ್ ಶ್ರೀ ಡಾ!!ದಿಲೀಶ್ ಹಾಗೂ DS ಸರ್ ಶ್ರೀ ಮಹ್ಮದ ಇಸ್ಮಾಯಿಲ್ ,PDO ಶ್ರೀ ಜಗದೇವಪ್ಪ, ಗ್ರಾ.ಪಂ ಅಧ್ಯಕ್ಷರು ಜ್ಯೋತಿ ಬೆಳೆಗಿಸುವದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಹಾಜರಾದ ಎಲ್ಲಾ ತಾಲೂಕಿನ ಇಔ, ಒಆ ಸರ್ ರವರಿಗೆ ಸಸಿ ನೀಡುವದರ ಮೂಲಕ ಸನ್ಮಾನ ಮಾಡಲಾಯಿತು. ಕ್ಯಾಲೆಂಡರ್,ಡೈರಿ ಬಿಡುಗಡೆ ಮಾಡಲಾಯಿತು. ನರೇಗಾದಡಿ ಕೆಲಸ ನಿರ್ವಹಿಸಿದ 3 ಜನ ಅಂಗವಿಕಲರಿಗೆ ಮತ್ತು 100 ದಿನ ಕೆಲಸ ಪೂರೈಸಿದ 10 ಜನರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ನಂತರ CEO ಅವರು ಮಾತನಾಡಿ ಹೆಚ್ಚಿನ ಜನರಿಗೆ ಉಪಯೋಗ ವಾಗುವಂತಹ ಕಲ್ಯಾಣಿ & ಅಸೆಟ್ ಸೃಜನೆ ಮಾಡಿ ಎಂದು ಹೇಳಿದರು, ಆಖ ಅವರು ಮಾತನಾಡಿ ಉನ್ನತಿ ಯೋಜನೆಯ ಲಾಭ ಪಡೆದುಕೊಳ್ಳಲು ಸೂಚಿಸಿದರು.

ಸದರಿ ಸಭೆಯಲ್ಲಿ ಜಿ.ಪಂ ADPC, DMIS, DIEC, SBM ಜಿಲ್ಲಾ ಸಂಯೋಜಕರು,ಎಲ್ಲಾ ತಾಲೂಕಿನ TC, TAEs, TMIS,TIEC, DEO, BFT, Fild Ast, ಗ್ರಾ.ಕಾ.ಮಿತ್ರ, ಕಾಯಕ ಬಂದುಗಳು, ನರೇಗಾ ಕೂಲಿ ಕಾರ್ಮಿಕರು, ಮತ್ತು ಗ್ರಾ.ಪಂ, PDO ತಾ.ಪಂ,ಜಿ.ಪಂ ಇತರ ಸಿಬ್ಬಂದಿಗಳು ಹಾಜರಿದ್ದರು. ಕಾರ್ಯಕ್ರಮದ ನಂತರ ಕೂಲಿಕಾರ್ಮಿಕರಿಗೆ ಉಚಿತ ಆರೋಗ್ಯ ಶಿಬಿರ ಮಾಡಲಾಯಿತು.

ನರೇಗಾ ದಿವಸ್ ಅಂಗವಾಗಿ ಸಿಹಿ,ಅಲ್ಪ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಜಗದೀಶ ಮೇಗಪ್ಪಿ ಮತ್ತು ಜ್ಯೋತಿ ಸಾಗರ್ ನಿರೂಪಣೆ ಮಾಡಿದರು.

**–ಸುನೀಲ್ ಪ್ಯಾಟಿ.**

## ಯಶಸ್ಸು ಎಂದರೆ..!

ಏನಿದು ಯಶಸ್ಸು! ಎಲ್ಲರೂ ಹಪಹಪಿಸುವ ಸರ್ಕಸ್ಸು! ಅಲ್ಲೆ ವ್ಯರ್ಥವಾಗುತ್ತಿದೆ ಬಾಳಹವಿಸ್ಸು! ಜೀವನದ ತುಂಬಾ ಬರೀ ಬುಸ್ಸಬುಸ್ಸು!

ಮುಂದೊಮ್ಮೆ ಎಲ್ಲವೂ ಪುಸ್ಸೋಪುಸ್ಸು!

ಜಗತ್ತಿನಲ್ಲಿ ವ್ಯಕ್ತಿಯಂತೆ ಮನವೂ ಭಿನ್ನ! ನನಗೆ ಯಶಸ್ಸೆಂದರೆ ಅವರಿವರನ್ನು ಗೆಲ್ಲುವುದಲ್ಲ! ಮತ್ತೊಬ್ಬರನ್ನು ಸೋಲಿಸುವುದಂತೂ ಅಲ್ಲವೇ ಅಲ್ಲ! ಯಶಸ್ಸೆಂದರೆ ನನ್ನನ್ನು ನಾನು ಗೆಲ್ಲುವುದು...ನನ್ನನ್ನು ನಾನು ಮೀರುವುದು...ಅನುದಿನವೂ ಏರುವುದು! ಆತ್ಮನಿರೀಕ್ಷಣೆಯೊಂದಿಗೆ ಬೆಳೆಯುವುದು..ಆದರೆ ಬೆಳಗುವುದು!

ಯಶಸ್ಸು ಎಂದರೆ ಬೆಳಿಗ್ಗೆ ಬೇಗ ಏಳುವುದು!ಮೂಡುವ ಸೂರ್ಯನ ಜೊತೆ ಮಾತಾಡುವುದು! ದಿನದ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮುಗಿಸುವುದು! ಶಬ್ದಗಳ ಜೊತೆ ಕದನ ಮಾಡುವುದು! ತಾರೆಗಳನ್ನು ಎಣಿಸುವುದು! ಅಂದುಕೊಂಡ ಪುಸ್ತಕವನ್ನು ಓದಿ ಮುಗಿಸುವುದು! ಬರೆದು ಮುಗಿಸುವುದು! ಒಟ್ಟಿನಲ್ಲಿ ಪ್ರತಿದಿನವನ್ನೂ,ಅನುಕ್ಷಣವನ್ನು ಆಸ್ವಾದಿಸುವುದೇ ಯಶಸ್ಸು!

ಮಕ್ಕಳಿಗೆ ಎರಡು ಅಕ್ಷರ ಹೆಚ್ಚಿಗೆ ಕಲಿಸುವುದು! ಮಕ್ಕಳನ್ನು ಬರವಣಿಗೆಯಲ್ಲಿ ತೊಡಗಿಸುವುದು! ಮಕ್ಕಳೇ ಮಾತನಾಡುವಂತೆ ಮಾಡುವುದು! ಮಕ್ಕಳ ಮನವನ್ನು ಅರಿತು ಬೋಧಿಸುವುದು ಕೂಡ ಯಶಸ್ಸೇ!

ಆತ್ಮತೃಪ್ತಿಗಾಗಿ ಪ್ರಾಮಾಣಿಕವಾಗಿ ಗೀಚುವುದು! ಅದಕ್ಕೊಂದು ರೂಪ ಬಂದಾಗ ಹಿರಿಹಿರಿ ಹಿಗ್ಗುವುದು ಇದೂ ಕೂಡ ಯಶಸ್ಸೇ!

ಸೋಲಲು ಕಲಿಯುವುದು ಕೂಡ ಬಹುದೊಡ್ಡ ಯಶಸ್ಸು! ಕೆಲವೊಮ್ಮೆ ಬರೆದ ಉತ್ತಮ ಲೇಖನಕ್ಕೆ ಪ್ರಶಸ್ತಿಪತ್ರ ಬರದೆ ಇರಬಹುದು! ಬಂದುದನ್ನು ಬಂದಹಾಗೆ ಸ್ವೀಕರಿಸುವುದು ಕೂಡ ಯಶಸ್ಸೇ!

ಯಶಸ್ಸು ಎಂದರೆ ಪ್ರತಿಕ್ಷಣದ ಸಾರ್ಥಕತೆ...ದಿನಗಳನ್ನು ಆಳುವುದು..ನಗುನಗುತಾ ಬಾಳುವುದು!

ಪರಮಾತ್ಮ ಪ್ರತ್ಯಕ್ಷನಾಗಿ ಬಡವನಿಗೆ *ಏನು ಬೇಕು ಕೇಳು ಎಂದನಂತೆ*!

ಬಡವ *ನನಗೆ ಏನೂ ಬೇಡ...ಆದರೆ ಸಣ್ಣಸಣ್ಣ ಖುಷಿಗಳನ್ನು ನನ್ನಿಂದ ಕಸಿಯಬೇಡ*...ಎಂದನಂತೆ!

ಯಶಸ್ಸೆಂದರೆ ಎಲ್ಲೋ ಇರುವ ಗುರಿಯನ್ನು ಮುಟ್ಟುವುದಲ್ಲ! ಇಲ್ಲೇ ಇರುವ ಅವಕಾಶಗಳಲ್ಲಿ ಸುಖಿಸುವುದು! ಮೇಲಿನವರ ನೋಡಿ ಕರುಬುವುದಲ್ಲ! ಇದ್ದುದನ್ನು ಅನುಭವಿಸುವುದು! ಫಲದತ್ತ ಗಮನ ಹರಿಸುವುದಲ್ಲ! ಕರ್ತವ್ಯದತ್ತ ಮುಖಮಾಡುವುದು!!

– ಗುಣವಂತೇಶ್ವರ, – ನಾರಾಯಣ. ಶಾಸ್ತ್ರಿ.
– ಸರಕಾರಿ ಪ್ರೌಢಶಾಲೆ.ಕುಂಬಾರಹಳ್ಳ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–8
ದಿನಾಂಕ: 16–02–2022 । ಪುಟಗಳು: 16

### ಬಾಡಿಯಾಲ:ಶಿಕ್ಷಕ ಸಿದ್ರಾಮಯ್ಯ ಸ್ವಾಮಿ ವಯೋನಿವೃತ್ತಿ ಬೀಳ್ಕೊಡಿಗೆ ಸಮಾರಂಭ

# ನಿವೃತ್ತಿ ಸುಖ ದು:ಖ ಎರಡನ್ನು ನೀಡುತ್ತದೆ:ಚೆಗುಂಟಾ ಶ್ರೀಗಳು


**ಗ್ರಾಮಸ್ಥರು, ಸಿಬ್ಬಂದಿಗಳು ನನಗೆ ಉತ್ತಮ ಸಹಕಾರವನ್ನು ನೀಡಿದ್ದಾರೆ. ನಾನು ಬೆಳಸಿದ ಮಕ್ಕಳು ಇವತ್ತು ಶಿಕ್ಷಣ ಇಲಾಖೆಯಲ್ಲಿ ನಾನು ಕೆಲಸ ಮಾಡುವ ಪರಿಸರದಲ್ಲಿ ಮುಖ್ಯ ಜವಬ್ದಾರಿಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವುದು ಸೇವೆಯ ತೃಪ್ತಿಯನ್ನುಂಟು ಮಾಡುವಂತಿದೆ. ನಿವೃತ್ತಿಯ ನಂತರವು ಶಾಲೆಗೆ ಬೇಕಾದ ಎಲ್ಲಾ ಸಹಕಾರವನ್ನು ನೀಡುತ್ತೇನೆ.**

ಸೈದಾಪುರ:ನಿವೃತ್ತಿಯ ಬದಕು ಸುಖ ದುಖ ಎರಡನ್ನು ನೀಡುತ್ತದೆ. ನಾವು ಸೇವಾ ಅವಧಿಯಲ್ಲಿ ನಿರ್ವಹಿಸಿದ ಕಾರ್ಯವೇ ನಮಗೆ ಆಧಾರವಾಗುತ್ತದೆ ಎಂದು ಚೆಗುಂಟಾದ ಕ್ಷೀರಲಿಂಗ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಬಾಡಿಯಾಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಶಿಕ್ಷಕ ಸಿದ್ರಾಮಯ್ಯ ಸ್ವಾಮಿ ಅವರ ವಯೋನಿವೃತ್ತಿ ಬೀಳ್ಕೊಡಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ ಸಿದ್ರಾಮಯ್ಯನವರ ಆದರ್ಶವಾದ ಬದಕು ನಮ್ಮದಾಗಬೇಕು. ನಿವೃತ್ತಿಯ ಬದುಕು ಉತ್ತಮವಾಗಿರಲಿ ಎಂದು ಆಶೀರ್ವಸಿದರು.

ಕ್ಷೇತ್ರ ಸಮನ್ವಯ ಅಧಿಕಾರಿ ಮಲ್ಲಿಕಾರ್ಜುನ ಪೂಜಾರಿ ಮಾತನಾಡಿ, ಶಿಕ್ಷಕ ವೃತ್ತಿ ಅಂತ್ಯಂತ ಶ್ರೇಷ್ಠವಾದದು 28 ವರ್ಷಗಳು ಸೇವೆ ಸಲ್ಲಿಸಿ ಸ್ವ ಗ್ರಾಮದಲ್ಲಿ ನಿವೃತ್ತಿ ಹೊಂದುತ್ತಿರುವುದು ವಿಶೇಷತೆಯನ್ನುಂಟು ಮಾಡಿದೆ. ಸಾಧನೆಗೆ ಪರಿಶ್ರಮ ಅತಿ ಮುಖ್ಯವಾಗಿದ್ದು ಅದು ಸಿದ್ರಾಮಯ್ಯ ಅವರ ನಿವೃತ್ತಿ ಕಾರ್ಯಕ್ರಮದಲ್ಲಿ ಕಾಣುತ್ತಿದೆ ಎಂದು ಹೇಳಿದರು. ವಯೋನಿವೃತ್ತಿ ಶಿಕ್ಷಕ ಸಿದ್ರಾಮಯ್ಯ ಸ್ವಾಮಿ, ಬಿಆರ್‌ಪಿ ಬಸವರಾಜ ಮನಗನಾಳ, ಯುವ ಕವಿ ಆಂಜನೇಯ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಮುಖ್ಯಗುರು ಸೈಯದಶೇರಲಿ ಅಧ್ಯಕ್ಷತೆ ವಹಿಸಿದ್ದರು. ನಾಗಭೂಷಣ ಸ್ವಾಮಿಗಳು, ಯುವ ಮುಖಂಡ ಶರಣಗೌಡ ಬಾಡಿಯಾಲ, ಭೂದಾನಿ ಶ್ರೀಧರ ಘಂಟಿ, ತಾ.ಅಕ್ಷರ ದಾಸೋಹ ಅಧಿಕಾರಿ ಕನಕಪ್ಪ, ಬಿಆರ್‌ಪಿ ಬಸವರಾಜ ಮನಗನಾಳ, ಹಣಮಂತ ಘಂಟಿ ಸಾಹುಕಾರ, ಗ್ರಾ.ಪಂ.ಅಧ್ಯಕ್ಷೆ ಬಸ್ಸಮ್ಮ, ಉಪಾಧ್ಯಕ್ಷೆ ಸುಮಲತಾ, ಎಸ್‌ಡಿಎಂಸಿ ಅಧ್ಯಕ್ಷ ಹಣಮಂತ್ರಾಯ, ಉಪಾಧ್ಯಕ್ಷ ಕಲ್ಪನಾ, ಪ್ರಾ.ಶಾ.ಶಿ.ಸಂಘದ ಅಧ್ಯಕ್ಷ ವೆಂಕಪ್ಪ, ಉಪಾಧ್ಯಕ್ಷ ದೇವಪುತ್ರ, ವೆಂಕಟರೆಡ್ಡಿ, ಲಿಂಗಣ್ಣಗೌಡ, ಹಪೀಜ ಪಟೇಲ, ಮುಖ್ಯಗುರು ಲಿಂಗಾರೆಡ್ಡಿ ನಾಯಕ, ಶಿವರಾಜಪ್ಪ, ಪ್ರಾಂಶುಪಾಲ ಜಿ.ಎಂ.ಗುರುಪ್ರಸಾದ, ಕರಬಸಯ್ಯ ದಂಡಿಗಿಮಠ, ಸಿಆರ್‌ಪಿಗಳಾದ ಮುಕುಂದಕುಮಾರ, ಸುಬ್ರಮಣ್ಯ, ದೇವಪ್ಪ, ಶಾಲಾ ಶಿಕ್ಷಕರಾದ ಅಂಬ್ರೇಶ, ಬಸವರಾಜ ಸೇರಿದಂತೆ ವಿವಿಧ ಶಾಲೆಗಳ ಮುಖ್ಯಗುರುಗಳು, ಶಿಕ್ಷಕರು, ಗ್ರಾಮಸ್ಥರು ಉಪಸ್ಥಿತರಿದ್ದರು. ಸೈಯದಶೇರಅಲಿ ಸ್ವಾಗತಿಸಿದರು. ಶ್ರೀನಿವಾಸ ನಿರೂಪಿಸಿದರು. ಸಂಜೀವಪ್ಪ ವಂದಿಸಿದರು.




ಸೈದಾಪುರ : ಬಾಡಿಯಾಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಯೋನಿವೃತ್ತಿ ಹೊಂದಿದ ಶಿಕ್ಷಕ ಸಿದ್ರಾಮಯ್ಯ ಸ್ವಾಮಿ ಅವರ ಬೀಳ್ಕೊಡಿಗೆ ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಸನ್ಮಾನಿಸಲಾಯಿತು. ಕ್ಷೇತ್ರ ಸಮನ್ವಯಧಿಕಾರಿ ಮಲ್ಲಿಕಾರ್ಜುನ ಪೂಜಾರಿ, ಶರಣಗೌಡ, ಶ್ರೀಧರ ಘಂಟಿ, ಕನಕಪ್ಪ, ಬಸವರಾಜ ಮನಗನಾಳ, ಮುಖ್ಯಗುರು ಸೈಯದಶೇರಅಲಿ ಇದ್ದರು.

# ಕಲ್ಲುಗಣಿಗಾರಿಕೆ ಆರಂಭ ಗ್ರಾಮಸ್ಥರ ವಿರೋಧ







ಹೆದ್ದಾರಿ ರಸ್ತೆ ಅಭಿವೃದ್ಧಿ ಮಾಡುವ ಹೆಸ–ರಿನಲ್ಲಿ ನಮ್ಮ ಪರಿಸರವನ್ನು ಹಾಳು ಮಾಡಲಾಗುತ್ತಿದೆ. ಅತಿ ಹೆಚ್ಚು ಬಂಡೆಗಳನ್ನು ವಾಹನಗಳಲ್ಲಿ ತುಂಬಿ ಬೇರೆಡೆಗೆ ಸರಬರಾಜು ಮಾಡಲಾಗುತ್ತಿದೆ ಇದ–ರಿಂದ ನಮ್ಮ ಗ್ರಾಮದ ರಸ್ತೆಗಳು ಹಾಳಾಗುತ್ತಿವೆ ನಮ್ಮ ಸಮಸ್ಯೆಗಳನ್ನು ಬಗೆಹರಿಸುವವರು ಯಾರು ಎಂದು ಗ್ರಾಮಸ್ಥರು ಪ್ರಶ್ನಿಸಿದರು

ಇದರಲ್ಲಿ ತುರುವೇಕೆರೆಯ ಮಾಜಿ ಶಾಸಕರಾದ ಕೃಷ್ಣಪ್ಪನವರು ಭಾಗವಹಿಸಿ ಮಾತನಾಡಿ ನೇರವಾಗಿ ಈಗಿನ ಶಾಸಕರಾದ ಮಸಾಲೆ ಜಯರಾಮ್ ಅವರ ಮೇಲೆ ಆರೋಪಿಸಿ ಪ್ರತಿಭಟನೆಯನ್ನು ಹಿಂದೆ ತೆಗೆಯಬಾರದು ಎಂದು ಪ್ರತಿಭಟನಾಕಾರರಲ್ಲಿ ಕಿವಿಮಾತನ್ನು ಹೇಳಿದ್ದರು.

ಗಣಿಗಾರಿಕಾ ಸ್ಥಳಕ್ಕೆ ಭೇಟಿ ನೀಡಿದ ಉಪವಿಭಾಗಾಧಿಕಾರಿ ದಿಗ್ವಿಜಯ ಭೋಡ್ಕೆ ಅವರು ಸಾರ್ವಜನಿಕರ ಅಳಲನ್ನು ಕೇಳಿಕೊಂಡರು. ಸಾರ್ವಜನಿಕರ ಸಮಸ್ಯೆಗಳನ್ನು ಕೇಳಿಕೊಂಡ ಉಪವಿಭಾಗಾಧಿಕಾರಿರವರು ಈ ಸಮಸ್ಯೆಯನ್ನು ಜಿಲ್ಲಾಧಿಕಾರಿಯವರ ಮುಂದೆ ಇಡುತ್ತೇನೆ ಎಂದು ಹೇಳಿದರು.

ಗ್ರಾಮಸ್ಥರು ಮನವಿ ಪತ್ರವನ್ನು ಉಪವಿಭಾಗಧಿಕಾರಿ ನೀಡುವ ವೇಳೆ ಪೊಲೀಸರು ಅವರನ್ನು ತಡೆದರು.

ಈ ಪ್ರತಿಭಟನೆಯಲ್ಲಿ ಮಲ್ಲಿಕಾರ್ಜುನ, ಶಂಕರಪ್ಪ, ರಾಜಶೇಖರ, ರಾಜೀವ್, ನಾಗರಾಜು, ಚಂದ್ರಶೇಖರ್ ಬಸವರಾಜು, ದಿನೇಶ್, ಚಂದ್ರಕಲಾ, ಶಿಲ್ಪ, ಶಿವರಾಜು ,ಪ್ರಭುಸ್ವಾಮಿ, ಗೌರಮ್ಮ, ಪುಷ್ಪಲತಾ ,ಲಕ್ಷ್ಮಮ್ಮ, ಕಮಲ ,ಹಾಗೂ ಇತರ ಗ್ರಾಮಸ್ಥರು ಇದ್ದರು.

**– ತರುಣ್ ಟಿ.ಪಿ**

# ನಾಳೆ ಬಾ.....

ಮನೆ ತುಂಬ ಧನಕನಕ , ಬಂಗಾರ, ಬೆಳ್ಳಿ, ಬಂಗಾರದ ನಾಣ್ಯಗಳನ್ನು ಹೊಂದಿದ್ದ ಒಬ್ಬ ಶ್ರೀಮಂತ ಮನುಷ್ಯನಿದ್ದ. ತನ್ನ ಎಲ್ಲ ಸಂಪತ್ತನ್ನು ಸದಾ ಕಾಯುತ್ತಲಿದ್ದ. ಯಾರಿಗೂ ದಾನ ಮಾಡುವ ಪ್ರವೃತ್ತಿಯಿರಲಿಲ್ಲ. ಇನ್ನೂ ಗಳಿಸಬೇಕು ಎಂದು ತಹತಹಿಸಿ ದಾನ ಮಾಡದ ಹಂತಕ್ಕೆ ಬಂದು ಮುಟ್ಟಿದ್ದ. ಇವನ ಚರ್ಯೆಯಿಂದ ಮನೆಯಲ್ಲಿಯ ಕುಟುಂಬದ ಸದಸ್ಯರು ತೀರಾ ಬೇಸತ್ತಿದ್ದರು. ಈ ಮನುಷ್ಯ ಇನ್ನೂ ಮುಂದೆ ಹೋಗಿ ತಿನ್ನುವದಕ್ಕೂ , ಉಣ್ಣುವದಕ್ಕೂ ಲೆಕ್ಕ ಹಾಕತೊಡಗಿದ. ಇದರಿಂದ ಮನೆಜನ , ಸುತ್ತಮುತ್ತಲಿನ ಜನ ಇವನ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದರು.

ಒಬ್ಬ ಬಡ ಮನುಷ್ಯ , ಇವನು ಲೇವಾದೇವಿ ಬಂಗಾರ ಬೆಳ್ಳಿ ಮಾರುವ ಅಂಗಡಿಗೆ ಬಂದು ದಾನ ಬೇಡಿದ. ನನ್ನಲ್ಲಿ ಚಿಕ್ಕಾಸು ಇಲ್ಲ. ತಿರುಗಿ ಹೋಗು ಎಂದು ಆ ಬಡ ಮನುಷ್ಯನನ್ನು ಸಾಗ ಹಾಕಿದ. ಅವನು ಆಚೆ ಹೋದ ಕೂಡಲೇ ತಾನು ಸಂತೋಷಿಸಿದ. ಮರುದಿನ ಆ ಬಡ ಮನುಷ್ಯ ಈತನ ಅಂಗಡಿಗೆ ಬಂದು ಮತ್ತೆ ದಾನ ಬೇಡಿದ. ಆ ಬಡವನ ಮುಖವನ್ನು ನೋಡಿ ನಿನ್ನೆ ನೀನು ಬಂದಿದ್ದೀ . ನಾ ಏನು ಹೇಳಿದೆ ನೆನಪು ಮಾಡಿಕೋ ಎಂದು ಹೇಳಿ ಆ ಬಡವನನ್ನು ಸಾಗಹಾಕಿದ. ಮಾರನೆಯ ದಿನ ಮತ್ತೆ ದಾನ ಬೇಡಲು ಬಂದ ಅವನನ್ನು ಬೈದು ಇನ್ನೊಮ್ಮೆ ಬರಬೇಡ ನಡೆ ಎಂದು ತಿರುಗಿ ಕಳಿಸಿದ. ಆ ಬಡ ಮನುಷ್ಯ ತನಗೆ ಮಕ್ಕಳ ಧಾರ್ಮಿಕ ಕಾರ್ಯಕ್ಕೆ ದುಡ್ಡು ಬೇಡಲು ಮತ್ತೆ ಬಂದ. ಏನೂ ಕೊಡದೇ ತಿರುಗಿ ಕಳಿಸಿದ. ಆದರೂ ಆ ಬಡ ಮನುಷ್ಯ ಈ ಸಾಹುಕಾರನ ಬೆನ್ನು ಬಿಡದೇ ಪ್ರತಿನಿತ್ಯ ಬಂದು ದಾನ ಬೇಡುವದು ನಡೆಯಿತು.ಈ ಶ್ರೀಮಂತ ಅವನನ್ನುತಿರುಗಿ ಕಳಿಸುತ್ತಲೇ ಇದ್ದ.ಕಡೆಗೆ ನಾಳೆ ಬಾ ನಾಳೆ ಬಾ ಎಂದು ಹೇಳಿ ಕಳಿಸುವದು ರೂಢಿ ಆಯಿತು.

ಆ ಬಡ ಮನುಷ್ಯ ಆ ಶ್ರೀಮಂತ ವ್ಯಕ್ತಿಯ ಅಂಗಡಿಗೆ ಹೋಗದೇ ಅವನ ಮನೆಗೆ ಬಂದ. ಶ್ರೀಮಂತ ಮನುಷ್ಯ ಮನೆಯಲ್ಲಿರಲಿಲ್ಲ. ನನ್ನ ಮಕ್ಕಳ ಕಲ್ಯಾಣಕಾರ್ಯಕ್ಕೆ ಏನಾದರೂ ಕೊಡಿರಿ ಎಂದು ಶ್ರೀಮಂತನ ಹೆಂಡತಿಗೆ ಕೇಳಿದ. ಜಿಪುಣ ಶ್ರೀಮಂತ ಮನೆಯಲ್ಲಿ ಏನೂ ಇಟ್ಟಿರಲಿಲ್ಲ. ಆಕೆ ಆ ಬಡ ಮನುಷ್ಯನನ್ನು ನೋಡಿ ಕನಿಕರಪಟ್ಟಳು. ಏನೂ ಇಲ್ಲಪ್ಪ ಮನೆಯಲ್ಲಿ , ಏನು ಕೊಡಲಿ ಎಂದು ಅವಳು ಆ ಬಡವನಿಗೆ ಹೇಳಿದಳು. ಆದರೂ ಆ ಬಡ ಮನುಷ್ಯ ಏನಾದರೂ ಕೊಡಿರಿ. ನೀವು ಕೊಟ್ಟರೇ ತುಂಬಾ ಉಪಕಾರ ಮಾಡಿದಂತೆ ಆಗುತ್ತದೆ ಎಂದು ಮತ್ತೆ ಕೇಳಿದಾಗ ತನ್ನ ಮೂಗಿನಲ್ಲಿರುವ ಮೂಗುತಿಯನ್ನು ತೆಗೆದು ಕೊಟ್ಟಳು. “ಕೃಷ್ಣಾರ್ಪಣ” ಎಂದು ಹರಸಿ ಆ ಬಡವನನ್ನು ಕಳಿಸಿದಳು.

ಆ ಬಡ ಮನುಷ್ಯ ಆ ಮೂಗುತಿಯನ್ನು ಮಾರಿ ಹಣ ಪಡೆಯಲು ಈ ಶ್ರೀಮಂತನ ಅಂಗಡಿಗೆ ಬಂದ. ಆಗ ಆ ಮೂಗುತಿಯನ್ನು ಆ ಶ್ರೀಮಂತ ಗುರುತು ಹಿಡಿದು ಬಡ ಮನುಷ್ಯನಿಗೆ ಕುಳಿತಿರಲು ಹೇಳಿ ಮೂಗುತಿಯನ್ನು ಭದ್ರವಾಗಿ–ಟ್ಟ. ಮನೆಗೆ ಬಂದು ನಿನ್ನ ಮೂಗುತಿ ತಾ ಸ್ವಲ್ಪ ಬೇಕಾಗಿದೆ ಎಂದು ಹೆಂಡತಿಗೆ ಹೇಳಿದ. ಆಕ್ಷಣ ಆ ಹೆಣ್ಣು ಮಗಳು ಗಾಬರಿಯಾಗಿ ಈತ ನನಗೆ ಶಿಕ್ಷೆ ಕೊಡಲಾರದಿರಲಾರ. ಇರಿ ಎಂದು ಹೇಳಿ ಕೋಣೆಗೆ ಹೋಗಿ ವಿಷ ತೆಗೆದುಕೊಳ್ಳಲು ಬಟ್ಟಲು ಮೇಲೆತ್ತಿದಳು ಟನ್ ಎಂದು ಶಬ್ದವಾಯಿತು ನೊಡುತ್ತಾಳೆ ತಾನು ಕೊಟ್ಟಮೂಗುತಿ . ಅದನ್ನು ನೋಡಿ ಆಶ್ಚರ್ಯಪಟ್ಟು ಅದನ್ನು ಗಂಡನಿಗೆ ತಂದು ಕೊಟ್ಟಳು. ಆ ಶ್ರೀಮಂತ ತಡಬಡಾಯಿಸಿ ಅಂಗಡಿಗೆ ಹೋಗಿ ನೋಡಲಾಗಿ ಮೂಗುತಿ ಅಲ್ಲಿರಲಿಲ್ಲ.ಕೂಡಲು ಹೇಳಿದ ಬಡವನೂ ಕಾಣಿಸಲಿಲ್ಲ. ಗಾಬರಿಯಿಂದ ಅವನಿಗೆ ಮತಿಭ್ರಮಣೆಯಾದಂತಾಯಿತು. ತಕ್ಷಣ ಅವನಿಗೆ ಜ್ಞಾನೋದಯವಾಯಿತು. ಓ ದೇವರೇ ನನ್ನನ್ನು ಪರೀಕ್ಷಿಸಲೋಸುಗ ಬಡವನ ವೇಷದಲ್ಲಿ ಬಂದು ನನ್ನನ್ನು ಉದ್ಧರಿಸಿದ್ದಾನೆ ಎಂದು ವಿರಕ್ತಿ ಹೊಂದಿದ. ತನ್ನಲ್ಲಿದ್ದ ಎಲ್ಲವನ್ನೂ ಸಕಲ ಸಜ್ಜನ–ರಿಗೆ ದಾನ ಮಾಡಿ “ಗೋಪಾಳಬುಟ್ಟಿ “ ಹಿಡಿದ. ಆತನೇ ಮುಂದೆ ಪುರಂದರದಾಸರೆಂದು ಪ್ರಸಿದ್ಧಿಹೊಂದಿದ. ದಾಸ ಶ್ರೇಷ್ಠರೆಂದು ಹೆಸರು ಪಡೆದು ಶ್ರೀಹರಿಯ ಸೇವೆ ಮಾಡಿ ಮುಕ್ತಿ ಪಡೆದ. ದೇವರೇ ಬಡವನ ರೂಪದಲ್ಲಿ ಬಂದು ಈ ನವಕೋಟಿ ನಾರಾಯಣನನ್ನು ಪರೀಕ್ಷಿಸಿ ಉದ್ಧ–ರಿಸಿ,ಮುಕ್ತಿ ದಯಪಾಲಿಸಿದ. ಎಲ್ಲವೂ ದೇವನು ಬಯಸಿದಂತೆಯೇ ತಿರುವು ಪಡೆಯುವವು.

**ಕೃಷ್ಣ ನಾರಾಯಣ ಬೀಡಕರ ವಿಜಯಪುರ**
**ಮೊಬೈಲ್– 9972087473**

ಕರುನಾಡ ಕಂದ
ಸಂಪುಟ-1 । ಸಂಚಿಕೆ-8
ದಿನಾಂಕ: 16-02-2022 । ಪುಟಗಳು: 16

# ಬಳಿಚಕ್ರ: ಹಿರಿಯ ನಾಗರಿಕರಿಗಾಗಿ ಜೇರಿಯಾಟ್ರಿಕ್ ಕ್ಲೀನಿಕ್ ಉದ್ಘಾಟನೆ ಹಿರಿಯರು ನಮ್ಮೆಲ್ಲರ ಮಾರ್ಗದರ್ಶಕರು:ಪ್ರಭು




ಸೈದಾಪುರ : ಬಳಿಚಕ್ರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಸೈದಾಪುರ: ಹಿರಿಯರು ನಮ್ಮೆಲ್ಲರ ಮಾರ್ಗದರ್ಶಕರು ಅವರಿಗೆ ಉತ್ತಮವಾದ ಆರೋಗ್ಯ ಸೇವೆಯನ್ನು ನೀಡುವುದು ಪ್ರತಿಯೊಬ್ಬರ ಜವಬ್ದಾರಿಯಾಗಿದೆ ಎಂದು ಬಳಿಚಕ್ರ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಪ್ರಭು.ಕೆ ಅವರು ಅಭಿಪ್ರಾಯಪಟ್ಟರು.

ಸಮೀಪದ ಬಳಿಚಕ್ರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯಾದಗಿರಿ, ಕಲಿಕಾ ಟಾಟಾ ಟ್ರಸ್ಟ್ ಹಾಗೂ ಎನ್.ಪಿ.ಸಿ.ಐ.ಎಲ್ ಸಂಸ್ಥೆಯ ಸಹಯೋಗದಲಿ ಆಯೋಜಿಸಿದ್ದ ಹಿರಿಯ ನಾಗರಿಕರಿಗೆ ಆರೋಗ್ಯ ತಪಾಸಣೆ (ಜೇರಿಯಾಟ್ರಿಕ್ ಕ್ಲೀನಿಕ್) ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

60 ವರ್ಷ ಮೇಲ್ಪಟ್ಟ ಹಿರಿಯರಿಗೆ ಆರೋಗ್ಯ ಸೇವೆ ನೀಡುವುದು ಪುಣ್ಯದ ಕೆಲಸವಾಗಿದೆ. ಇನ್ನು ಮುಂದೆ ನಿಮ್ಮ ಸಮೀಪದಲ್ಲಿರುವ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ತಪಾಸಣೆಯ ಸೇವೆಯನ್ನು ನೀಡಲಾಗುತ್ತಿದೆ. ಇದರ ಸದುಪಯೋಗವನ್ನು ಹಿರಿಯ ನಾಗರಿಕರು ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ನಾವು ಪಂಚಾಯಿತಿ ವತಿಯಿಂದ ಡಂಗೂರು ಹಾಕಿಸಿ ಇದರ ಮಾಹಿತಿಯನ್ನು ನೀಡುತ್ತೇವೆ. ಹಾಗೂ ಈ ಕಾರ್ಯಕ್ರಮದ ಯಶಸ್ವಿಗೆ ಪ್ರಯತ್ನಿಸುತ್ತೇವೆ. ಹಿರಿಯ ನಾಗರಿಕರಲ್ಲಿ ಸಮಸ್ಯೆಗಳಿದ್ದರೆ ಸಹಾಯವಾಣಿ 14567 ಕ್ಕೆ ಉಚಿತವಾಗಿ ಕರೆ ಮಾಡಿ ಎಂದರು.

ನಂತರ ಕಲಿಕೆ ಟಾಟಾ ಟ್ರಸ್ಟ ಸಂಸ್ಥೆಯ ಹಿರಿಯ ನಾಗರಿಕ ಕಾರ್ಯಕ್ರಮದ ವ್ಯವಸ್ಥಾಪಕ ಸಾಯಿ ಬಾಬು ಮಾತನಾಡಿ ಹಿರಿಯ ನಾಗರಿಕರಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ, ಮೊಳಕಾಲು ನೋವುಗಳಂತಹ ರೋಗಗಳು ಬಾಧಿಸುತ್ತವೆ. ಬಹಳಷ್ಟು ಹಿರಿಯರಿಗೆ ಮನೆಯಲ್ಲಿ ಸರಿಯಾದ ಆರೈಕೆ ಮತ್ತು ಆರೋಗ್ಯದ ತಪಾಸಣೆ ಇಲ್ಲದೆ ಬಳಲುತ್ತಿರುತ್ತಾರೆ. ಇಂತಹವರಿಗಾಗಿ ಪ್ರತಿ ಸೋಮವಾರ ಜೇರಿಯಾಟ್ರಿಕ್ ಕ್ಲೀನಿಕ್ ಏರ್ಪಡಿಸುತ್ತೇವೆ. ಹಿರಿಯರಿಗೆ ಆರೋಗ್ಯ ಕಾರ್ಡ ನೀಡಿ ಉತ್ತಮ ಚಿಕಿತ್ಸೆ ನೀಡಲಾಗುವುದು ಎಂದರು.


ಈ ಸಂದರ್ಭದಲ್ಲಿ ಕಲಿಕಾ ಟಾಟಾ ಟ್ರಸ್ಟ್‌ನ ಕಾರ್ಯಕ್ರಮ ಹಿರಿಯ ಸಂಯೋಜಕ ಮರೆಪ್ಪ ನಂದಿಹಳ್ಳಿ, ಕಲಿಕೆ ಸಂಸ್ಥೆಯ ಸಂಯೋಜಕ ಬಾಶುಸಾಬ ಸುಳಕಲ್, ಬಳಿಚಕ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಾದ ಸಮೀನಾ, ಸಾಹೇಬಗೌಡ ದಿಡ್ಡಿಮನಿ, ಸುನೀಲ್ ಜಿ.ಎಸ್, ಆರೋಗ್ಯ ಸಿಬ್ಬಂದಿಗಳಾದ ಜಾಸಲೀನ್ ಜೊಲ್ಲಿ, ಇಂದಿರಾ, ಲಕ್ಷ್ಮೀ, ಎಲ್.ಹೆಚ್.ವಿ.ರತ್ನಮ್ಮ, ಸುನೀತಾ, ನಾಗೇಶ, ಹಾರೀಫ್, ರಮೇಶ, ಪ್ರಸಾದ, ಮತ್ತು ಆಶಾ ಕಾರ್ಯಕರ್ತೆಯರಾದ ಶರಣಮ್ಮ,, ಲಲಿತಮ್ಮ, ಕವಿತಾ, ಸುಶೀಲಮ್ಮ ಹಾಗೂ ಹಿರಿಯ ನಾಗರಿಕರು ಸೇರಿದಂತೆ ಇತರರಿದ್ದರು.

# ಯಾದಗಿರಿ ಜಿಲ್ಲೆಯಲ್ಲಿ ಕೆಡಿಪಿ ಸಭೆ ವಿಳಂಬ ಉಸ್ತುವಾರಿ ಸಚಿವ ಪ್ರಭು ಚವ್ಹಾಣ್ ಮತ್ತು ಸರ್ಕಾರದ ದುರಾಡಳಿತಕ್ಕೆ ಚಾಟಿ ಬೀಸಿದ ಡಾ:ಭೀಮಣ್ಣ ಮೇಟಿ



ಜಿಲ್ಲೆಯಲ್ಲಿ ಕಳೆದ ಹಲವಾರು ತಿಂಗಳುಗಳಿಂದ ಕೆಡಿಪಿ ಸಭೆಯನ್ನು ಮಾಡದೆ ಅಭಿವೃದ್ಧಿ ಕಾರ್ಯಗಳನ್ನು ವಿನಾಕಾರಣ ಕುಂಠಿತಗೊಳಿಸುವ ಸರ್ಕಾರದ ಆಡಳಿತ ತುಂಬಾ ಶೋಚನೀಯವಾಗಿದೆ ಎಂದು ಹೇಳಬಹುದಾಗಿದೆ, ಜಿಲ್ಲೆಯಲ್ಲಿ ಬಹಳ ರೈತರ ಸಮಸ್ಯೆಗಳು, ನೀರಿನ ಸಮಸ್ಯೆಗಳು, ಇನ್ನಿತರ ಹಲವಾರು ಸಮಸ್ಯೆಗಳು, ಕಾಡುತ್ತಿವೆ ಆದರೆ, ಇತ್ತೀಚಿಗೆ ಸರ್ಕಾರವು ಜಿಲ್ಲೆಗೆ ಉಸ್ತುವಾರಿ ಸಚಿವರುಗಳಾದ ಶ್ರೀ ಪ್ರಭು ಚವಾಣ್ ಇವರನ್ನು ನೇಮಕ ಮಾಡಿದರೂ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಕ್ಯಾರೆ ಎನ್ನುತ್ತಿಲ್ಲ, ಗಣರಾಜ್ಯೋತ್ಸವ ದಿನದಂದು ಭೇಟಿ ನೀಡಿದ್ದ ಉಸ್ತುವಾರಿ ಸಚಿವರಾದ ಪ್ರಭು ಚೌಹಾಣ್ ಅವರು ಜಿಲ್ಲೆಗೆ ಭೇಟಿ ನೀಡಿ ಕೆಡಿಪಿ ಸಭೆ ಕರೆಯುತ್ತೇನೆ ಎಂದು ಹೇಳಿದರೂ ಕೂಡಾ ಕಾರ್ಯರೂಪಕ್ಕೆ ಬಾರದೇ ಇರುವುದು ಜಿಲ್ಲೆಯ ಸ್ಥಳೀಯರಲ್ಲಿ ತುಂಬಾ ಬೇಸರ ಮೂಡಿಸಿದೆ, ಆಡಳಿತ ನಡೆಸಲು ಕೈಲಾಗದೆ ಇದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಕಾಂಗ್ರೆಸ್ ಮುಖಂಡರಾದ ಡಾ: ಭೀಮಣ್ಣ ಮೇಟಿ ಆಕ್ರೋಶ ವ್ಯಕ್ತಪಡಿಸಿದರು.

# ನಾಡಕಚೇರಿಯಲ್ಲಿ ದಿನನಿತ್ಯ ಭ್ರಷ್ಟಾಚಾರ



ಲಿಂಗಸೂಗೂರ ತಾಲೂಕಿನ ಮುದಗಲ್ ಪಟ್ಟಣದಲ್ಲಿರುವ ನಾಡಕಛೇರಿಯ ಲಂಚದ ಭ್ರಷ್ಟಾಚಾರಕ್ಕೆ ಕಡಿವಾಣ ಇಲ್ಲ.ನಾಡಕಚೇರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರು ಸುಮಾರು ವರ್ಷಗಳಿಂದ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ನಾಡಕಚೇರಿಯಲ್ಲಿ ಯಾವುದೇ ರೀತಿಯ ಸಿ.ಸಿ. ಟಿ. ವಿ. ಕೂಡಾ ಇಲ್ಲ ನಾಡಕಚೇರಿಯ ಒಂದು ಕಿಡಕಿಯ ಮುಖಾಂತರ ಕೌಂಟರ್ ತೆರೆಯಲಾಗಿದೆ. ಆ ಕಿಡಕಿಯ ಮುಂದೆ ದಿನನಿತ್ಯ ನೂರಾರು ಜನರ ಅರ್ಜಿ ಸ್ವೀಕಾರ ಮಾಡಲಾಗುತ್ತೆ, ಕೊಡಲಾಗುತ್ತೆ. ನಿಗದಿತ ಶುಲ್ಕ ಕೊಡದವರ ಅರ್ಜಿ ತಿರಸ್ಕೃತವಾಗುತ್ತೆ ಮತ್ತೆ ಮರಳಿ ಹಾಕಬೇಕು ಇದರಿಂದ ಜನರು ಕಚೇರಿಗೆ ಅಲೆದು ಬೇಸತ್ತಿದ್ದಾರೆ.ಹೆಚ್ಚಿನ ಹಣ ಕೊಡುವ ಗಿರಾಕಿಗಳನ್ನು ನೇರವಾಗಿ ಒಳಗಡೆ ಬಿಟ್ಟುಕೊಳ್ಳಲಾಗುವದು. ಇಲ್ಲಿ ಗುಪ್ತವಾಗಿ ಯಾರು ಲಂಚ ಸ್ವೀಕರಿಸಲ್ಲ ರಾಜಾರೋಷವಾಗಿ ಫೋನ್ ಪೇ

ಮುಖಾಂತರ ಲಂಚ ಸ್ವೀಕರಿಸುತ್ತಾರೆ ಇವರಿಗೆ ಮೇಲಧಿಕಾರಿಗಳ ಕೃಪಾ ಕಟಾಕ್ಷ ಇದ್ದ ಹಾಗಿದೆ ಆದ್ದರಿಂದ ಇದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ನಾಡಕಚೇರಿಯಲ್ಲಿ ಕೆಲಸಮಾಡುವ ಎಲ್ಲಾ ಅಧಿಕಾರಿಗಳ ಮೊಬೈಲ್ ಟ್ಯಾಪ್ ಮಾಡಿ ಕಾನೂನು ರೀತಿಯ ಕ್ರಮ ಕೈಗೊಳ್ಳುತ್ತಾರೋ ಎಂದು ಕಾದು ನೋಡಬೇಕು.

ವರದಿ-ಬಸವರಾಜ್ ಬಡಿಗೇರ್

# ಡಾ॥ ಅಂಬೇಡ್ಕರ್‌ರವರಿಗೆ ಅವಮಾನಕ್ಕೆ ನ್ಯಾಯಾಧೀಶರಿಗೆ ವಿರುದ್ದ ಪ್ರಕರಣ ದಾಖಲು ಮನವಿ




ಯಾದಗಿರಿ: ಜನವರಿ 26 ಗಣರಾಜ್ಯೋತ್ಸವ ದಿನದಂದು ಸಂವಿಧಾನ ಶಿಲ್ಪಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಇವರಿಗೆ ಜಿಲ್ಲಾ ಸತ್ರ ನ್ಯಾಯಾಧೀಶರಾದ ಮಲ್ಲಿಕಾರ್ಜುನಗೌಡ ರಾಯಚೂರು ಜಿಲ್ಲೆ ಇವರು ಮಾಡಿರುವ ಅವಮಾನಕ್ಕೆ ಯಾದಗಿರಿ ಜಿಲ್ಲೆಯಲ್ಲಿ ದಲಿತ ಸಂಘಟನೆಗಳು ಸಲ್ಲಿಸಿರುವ ದೂರಿನ ಪ್ರಕರಣ ದಾಖಲು ಮಾಡುವಂತೆ ಮನವಿ:

ರಾಯಚೂರಿನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಮಲ್ಲಿಕಾರ್ಜುನಗೌಡ ಅವರು ಜನವರಿ 26ರಂದು ಗಣರಾಜ್ಯೋತ್ಸವ ಆಚರಣೆ ಮಾಡುವ ಸಮಯದಲ್ಲಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರ ಇಟ್ಟರೆ ಕಾರ್ಯಕ್ರಮಕ್ಕೆ ನಾನು ಸುತಾರಾಂ ಬರುವುದಿಲ್ಲ ಎಂದು ವಿಕೃತ ಮನೋಭಾವನೆ ಹಾಗೂ ಅವಮಾನದ ಹೇಳಿಕೆಯನ್ನು ನೀಡಿದ್ದಾರೆ, ನಮ್ಮ ದೇಶದ ಜನತೆಗೆ ನ್ಯಾಯ ಮತ್ತು ಅನ್ಯಾಯದ ಕುರಿತು ತೀರ್ಪು ಒದಗಿಸಬೇಕಾಗಿರುವ ಒಬ್ಬ ಜವಾಬ್ದಾರಿಯುತ ನ್ಯಾಯಾಧೀಶರಾಗಿ ಈ ರೀತಿಯಾಗಿ ವರ್ತಿಸುವುದು ನಮ್ಮ ಭಾರತ ದೇಶ ದ್ರೋಹದ ಸಂಗತಿಯಾಗಿದೆ ಎಂದು ಜಿಲ್ಲೆಯಲ್ಲಿನ ವಿವಿಧ ಸಂಘಟನೆಗಳ ಮತ್ತು ರಾಜಕೀಯ ಪಕ್ಷಗಳ ಗಣ್ಯ ವ್ಯಕ್ತಿಗಳು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಎಸಿ ಕಾಡ್ಲೂರು ಹಿರಿಯ ಮುಖಂಡರು, ಮೌಲಾಲಿ ನಪುರ್ ಅಹಿಂದ ಹಿರಿಯ ಮುಖಂಡರು, ಖಂಡಪ್ಪ ದಾಸನಕೇರಿ ದಲಿತ ಹಿರಿಯ ಮುಖಂಡರು, ಹಣಮೇಗೌಡ ಬೀರನಕಲ್ ಹಿರಿಯ ಮುಖಂಡರು, ಶರಣಪ್ಪ ಮನೆಗಾರ್ ಹಿರಿಯ ಮುಖಂಡರು, ಭೀಮಣ್ಣ ಮೇಟಿ ಹಿರಿಯ ನಾಯಕರು, ಲಾಯಕ್ ಹುಸೇನ್ ಬಾದಲ್, ದೇವರಾಜ್ ನಾಯಕ್ ಅಹಿಂದ ನಾಯಕರು, ಮತ್ತು ವಿಜಯಕುಮಾರ್ ಶಿರಗೋಳ ದಲಿತ ಪ್ರಗತಿಪರ ಚಿಂತಕರು ಮುಖಂಡರು, ಟಿ.ಎನ್ ಭೀಮಾನಾಯಕ್ ಕರವೇ ಜಿಲ್ಲಾಧ್ಯಕ್ಷರು ಆನಂದ್ ಕುಮಾರ್ ಬಿ ಕರ್ನಾಟಕ ಕ್ರಿಶ್ಚಿಯನ್ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷರು, ಮತ್ತು ಸುರೇಶ್ ಬೆಳಗೇರಿ ದಲಿತ ಮುಖಂಡರು ಉಪಸ್ಥಿತರಿದ್ದರು

ಕರುನಾಡ ಕಂದ
ಸಂಪುಟ–1 । ಸಂಚಿಕೆ–8
ದಿನಾಂಕ: 16–02–2022 । ಪುಟಗಳು: 16

## ಪುನೀತ್ ರಾಜ್‌ಕುಮಾರ್ ಅವರ ಭಾವ ಚಿತ್ರವನ್ನು ಅನುಜ ಎಂಬ ಕಿರು ಚಿತ್ರದ ಮುಹೂರ್ತ ಕಾರ್ಯಕ್ರಮ



ದಿ 1– 2– 2022 ರಂದು ಯಾದಗಿರಿ ಜಿಲ್ಲೆಯ ಲಕ್ಷಿ ದೇವಸ್ಥಾನದಲ್ಲಿ ಪುನೀತ್ ರಾಜ್‌ಕುಮಾರ್ ಅವರ ಭಾವ ಚಿತ್ರವನ್ನು ಪೂಜಿಸುವ ಮೂಲಕ, ಅನುಜ ಎಂಬ ಕಿರು ಚಿತ್ರದ ಮುಹೂರ್ತ ಕಾರ್ಯಕ್ರಮ ಬಹಳ ಅದ್ದೂರಿಯಾಗಿ ಆಚ–ರಿಸಲಾಯಿತು, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಯಾದಗಿರಿ ಮತ ಕ್ಷೇತ್ರದ ಬಿಜೆಪಿ ಯುವ ಮುಖಂಡರಾದ ಶ್ರೀ ಮಹೇಶ್ ರೆಡ್ಡಿ ಸರ್, ಹಾಗು ಗುರುಮಿಟಕಲ್ ಮತ ಕ್ಷೇತ್ರದ ಶ್ರೀ ನಾಗರತ್ನ ಕುಪ್ಪಿ ಉಪಸ್ಥಿತಿಯಲ್ಲಿ ನಡೆಯುತು, ವಿಶೇಷವಾಗಿ ಇದೇ ಮೊದಲ ಬಾರಿಗೆ ಯಾದಗಿರಿ ನಗರಕ್ಕೆ ಆಗಮಿಸಿ ಬಾಲ ನಟಿ ಆರಾಧ್ಯ ಅವರು ಎಲ್ಲರ ಗಮನ ಸೆಳೆದರು, ಜೆಂಟಲ್ ಮೆನ್, ಯಜಮಾನ, ವಿಕ್ರಾಂತ್ ರೋಣ ಹಾಗು ಜೇಮ್ಸ್ ಚಿತ್ರದಂತಹ ಸೂಪರ್ ಸ್ಟಾರ್ ಗಳ ಜೊತೆಯಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ, ಅಂತಹ ದೊಡ್ಡ ನಟಿ ನಮ್ಮ ಕಾರ್ಯಕ್ರಮಕ್ಕೆ ಬಂದು ನಮ್ಮ ಕಿರು ಚಿತ್ರದಲ್ಲಿ ನಟಿಸಿರುವುದು ನಮಗೆ ಬಹಳ ಸಂತಸ ತಂದಿದೆ ಎಂದರು ಚಿತ್ರದ ನಿರ್ದೇಶಕ ಎಸ್, ಎಸ್, ರವಿ ಬಾಚವಾರ್, ಚಿತ್ರದ ನಾಯಕಿ ಅನುಶ್ರುತಿ ಮಾತನಾಡಿ ಅನುಜ ಚಿತ್ರದಲ್ಲಿ ನಟಿಸುತ್ತಿರುವದು ಸಂತೋಷ ತಂದಿದೆ ಎಂದರು.


## ತಹಸಿಲ್ದಾರ್ ಮೇಲಿನ ಹಲ್ಲೆ ಖಂಡಿಸಿ, ವೀರಶೈವ ಸಮಾಜದಿಂದ ಪ್ರತಿಭಟನೆ



ದೇವದುರ್ಗ: ಹುಮನಾಬಾದ್ ತಹಶಿಲ್ದಾರ ಡಾ.ಪ್ರದೀಪ್ ಕುಮಾರ ಹಿರೇಮಠ ಅವರ ಮೇಲೆ ಬಿಎಸ್ಪಿ ಪಕ್ಷದ ಕಾರ್ಯಕರ್ತರು ನಡೆಸಿದ ಹಲ್ಲೆ ಖಂಡಿಸಿ ಬುಧವಾರ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಅಖಿಲ ಭಾರತ ವೀರಶೈವ ಸಮಾಜದ ನೇತೃತ್ವದಲ್ಲಿ ಸ್ಥಳೀಯ ಉಪ ತಹಸಿಲ್ದಾರ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಲಾಯಿತು. ವೀರಶೈವ ಲಿಂಗಾಯತ ಸಮಾಜದ ಮುಖಂಡರ ಕೆರಿಲಿಂಗಪ್ಪ ನಾಡಗೌಡ ಮಾತನಾಡಿ, ಯಾವುದೇ ಸಮಾಜಕ್ಕೆ ಸೇರಿದ ಅಧಿಕಾರಿ ತಪ್ಪು ಮಾಡಿದರೆ, ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಮೇಲಧಿಕಾರಿಗಳು ಇರುತ್ತಾರೆ. ದೂರು ನೀಡಬೇಕಾಗಿ–ತ್ತು ಆದರೆ, ದೈಹಿಕವಾಗಿ ಹಲ್ಲೆ ನಡೆಸಿರುವುದು ಖಂಡನೀಯ ಲಿಂಗಾಯತ ಸಹ ಒಂದು ರೀತಿಯಲ್ಲಿ ಶೂದ್ರರೇ. ಸಣ್ಣ ಕಿರಾಣಿ,ಚಹಾ ಹೋಟೆಲ್, ಖಾನವಳಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಸಮಾಜದಲ್ಲಿ ಇತರ ವರ್ಗದವರು ಲಿಂಗಾಯತರನ್ನು ಬೇರೆ ದೃಷ್ಟಿಯಿಂದ ನೋಡುವುದನ್ನು ಬಿಡಬೇಕೆಂದು ಹೇಳಿದರು. ಹಲ್ಲೆ ನಡೆಸಿದವರ ವಿರುದ್ಧ ಸೂಕ್ತ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.ಪಟ್ಟಣದ ಪ್ರಮುಖ ಬೀದಿ, ವೃತ್ತಗಳಲ್ಲಿ ಮೆರವಣಿಗೆ ನಡೆಸಿ ಘೋಷಣೆ ಕೂಗಿದರು.

ಜಿಪಂ ಮಾಜಿ ಸದಸ್ಯ ಎಚ್.ಪಿ ಬಸವರಾಜ, ಗ್ರಾಪಂ ಸದಸ್ಯರಾದ ಸಲಬಣ್ಣ ಹಂಪರಗುಂದಿ,ಅಯ್ಯಪ್ಪ ಸ್ವಾಮಿ,ಮಲ್ಲಿಕಾರ್ಜುನ್, ಮುಖಂಡರುಗಳಾದ ವೀರಣ್ಣ ಬಳೆ, ಶಿವಕುಮಾರ್ ಪಾಣಿ, ಶರಣು ಹುಣಿಸಿಗಿ, ಶಿವನಗೌಡ ಕಕ್ಕಲದೊಡ್ಡಿ,ಎಚ್.ಪಿ ಜಗದೀಶ್, ಸಲಬಣ್ಣ ಚೌದ್ರಿ, ರಾಮನಗೌಡ, ಬಸವರಾಜ ತೇಕೂರ್ ಸೇ–ರಿದಂತೆ ಇನ್ನಿತರರು ಇದ್ದರು.

## ತಾಲೂಕ ಸಂಘಟನೆ ಕಾರ್ಯದರ್ಶಿಯಾಗಿ ಖಾಜಸಾಬ್ ಚೌದ್ರಿ ಆಯ್ಕೆ



ಕಲ್ಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಕರ್ನಾಟಕ ಜನ ಬೆಂಬಲ ವೇದಿಕೆಯ ತಾಲೂಕ ಸಂಘಟನೆ ಕಾರ್ಯದರ್ಶಿಯಾಗಿ ಖಾಜಸಾಬ್ ಚೌದ್ರಿ ಇವರನ್ನು ರಾಜ್ಯ ಅಧ್ಯಕ್ಷರ ಅನುಮತಿ ಮೇರೆಗೆ ಮತ್ತು ತಾಲೂಕ ಅಧ್ಯಕ್ಷರಾದ ಉಮೇಶ ಅಂದೋಡಗಿ ಅವರು ಆಯ್ಕೆ ಮಾಡಿದ್ದಾರೆ ಇದೇ ಸಂದರ್ಭದಲ್ಲಿ ಖಾಜಸಾಬ್ ಚೌದ್ರಿ ಅವರು ಮಾತನಾಡಿ ಮುಂದಿನ ದಿನಗಳಲ್ಲಿ ತಾಲೂಕಿನಾದ್ಯಾಂತವಾಗಿ ಸಂಘಟನೆ ಬೆಳೆಸಿ ಯುವಕರಲ್ಲಿ ಕನ್ನಡ ಎಂಬದು ಇಂದಿನ ದಿನಗಳಲ್ಲಿ ಮರೆಯಾಗುತ್ತಿದೆ ನಾನು ಸಂಘಟನೆ ಹೆಚ್ಚಾಗಿ ಯುವಕರಿಗೆ ಸ್ಥಾನ ಮಾನ ನೀಡುತ್ತೇನೆ ಸಂಘಟನೆಯಲ್ಲಿ ಎಂದು ಮಾತನಾಡಿದ್ದಾರೆ ಇದೇ ಸಮಯದಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ಉಮೇಶ ಗೋಪಗೌಡ ಬಡದಾಳ ವಲಯ ಅಧ್ಯಕ್ಷರಾದ ವಿಲಾಶ ನಾಗರೋಳ್ಳಿ ಬಡದಾಳ ಘಟಕ ಅಧ್ಯಕ್ಷರಾದ ಚೆನ್ನಪ್ಪ ಹಡಪದ ಮತ್ತು ಇನ್ನಿತರ ಸಂಘಟನೆ ಕಾರ್ಯಕರ್ತರು ಇದ್ದರು.

## ಕಾಂಗ್ರೆಸ್,ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆ



ದೇವದುರ್ಗ:ಈ ಭಾಗದ ರೈತರ ಭೂಮಿಗೆ ನಾರಾಯಣಪುರ ಬಲದಂಡೆ ಕಾಲುವೆ ಮುಖಾಂತರ ನೀರು ಹರಿಸಿ ನೀರಾವರಿ ಕಲ್ಪಿಸಿದ ಜೆಡಿಎಸ್ ವ–ರಿಷ್ಠ ಹೆಚ್ ಡಿ ದೇವೇಗೌಡ ಕಾರ್ಯಗಳಿಗೆ ಈ ಬಾರಿ ಇಲ್ಲಿನ ಮತದಾರರು ಜೆಡಿಎಸ್ ಅಭ್ಯರ್ಥಿಗಳಿಗೆ ಆಶೀರ್ವಾದಿಸಲಿದ್ದಾರೆ ಎಂದು ಕಲ್ಯಾಣ ಕರ್ನಾಟಕ ಕಲ್ಯಾಣ ಕರ್ನಾಟಕ ವೀಕ್ಷಕರು ಹಾಗೂ ದೇವದುರ್ಗ ದೇವದುರ್ಗ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕರೆಮ್ಮ ಜಿ ನಾಯಕ್ ಹೇಳಿದರು.

ದೇವದುರ್ಗ ಪಟ್ಟಣದ ಗೌರಂಪೇಟೆಯಲ್ಲಿ ಶನಿವಾರ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಬಿಜೆಪಿ ತೊರೆದು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ದೇಶದ ಪ್ರಧಾನಿಯಾಗಿ, ಮುಖ್ಯಮಂತ್ರಿಯಾಗಿ, ಕಾರ್ಯನಿರ್ವಹಿಸಿದ ಪಕ್ಷ ನಮ್ಮದು. ಮುಂದಿನ 2023 ಅಲ್ಲಿ ಜರುಗಲಿರುವ ವಿಧಾನಸಭಾ ಚುನಾವಣೆಯಲ್ಲಿ ಜನರ ಆಶೀರ್ವಾದಿಸಲಿದ್ದಾರೆ ಎಂದರು.


ಜೆಡಿಎಸ್ ಸೇರ್ಪಡೆ: ಕಾಸಿಂಸಾಬ್ ಬುವಾಜಿ, ಗೋಕುಲ್ ಸಾಬ್ ಬುವಾಜಿ, ಭಾಷಾ ಸಾಬ್ ಖಂಡೆ, ಖಾಸಿಂಸಾಬ್ ದೊಡ್ಮನಿ, ಹುಸೇನ್ ಸಾಬ್ ಇಡಪನೂರು,ಜಹೀರ್ ಸಾಬ್ ಶೇಖ್

ಕಾರ್ಯಕ್ರಮದಲ್ಲಿ ಜೆಡಿಎಸ್ ನಗರ ಅಧ್ಯಕ್ಷ ದಾವೂದ್ ಆವಂಟಿ, ಜೆಡಿಎಸ್ ಮುಖಂಡರಾದ ಮಲ್ಲಣ್ಣ ಸಾಹು ನಾಗರಾಳ, ಅಮರೇಶ್ ಪಾಟೀಲ್, ತಾಲೂಕು ಮಹಿಳಾ ಘಟಕ ಅಧ್ಯಕ್ಷ ರೇಣುಕಾ ಮಯೂರ ಸ್ವಾಮಿ, ಬಸನಗೌಡ ಕುರ್ಕಿಹಳ್ಳಿ ಸೇ–ರಿದಂತೆ ಇನ್ನಿತರರು ಇದ್ದರು.



ಕರುನಾಡ ಕಂದ
ಸಂಪುಟ–1 । ಸಂಚಿಕೆ–8
ದಿನಾಂಕ: 16–02–2022 । ಪುಟಗಳು: 16

# ಶಾಸಕರಿಂದ"ಬೆಳಕು"ಯೋಜನೆ ಉದ್ಘಾಟನೆ



ದೇವದುರ್ಗ:ಗ್ರಾಮೀಣ ಭಾಗದ ಎಲ್ಲಾ ಪ್ರದೇಶಗಳಲ್ಲಿ ಬರುವ ವಿದ್ಯುತ್ ಸಂಪರ್ಕ ಹೊಂದಿಲ್ಲದ ಮನೆಗಳಿಗೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಬೆಳಕು ಯೋಜನೆಯಡಿಯಲ್ಲಿ ವಿದ್ಯುತೀಕರಣಗೊಳಿಸುವ ಕಾರ್ಯಕ್ರಮ ಇದಾಗಿದ್ದು, ವಿದ್ಯುತ್ ಹೊಂದಿರದ ಮನೆಯ ಫಲಾನುಭವಿಗಳು ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ಶಿವನಗೌಡ ನಾಯಕ ಹೇಳಿದರು.

ದೇವದುರ್ಗ ತಾಲೂಕಿನ ಗಾಣಧಾಳು ಗ್ರಾಮದಲ್ಲಿ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಆಯೋಜಿಸಿದ್ದ 'ಬೆಳಕು'ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಾಣಧಾಳು ಗ್ರಾಪಂ. ಅಧ್ಯಕ್ಷರಾದ ಅಮರೇಗೌಡ ಪೊಲೀಸ್ ಪಾಟೀಲ್, ಮಾಜಿ ಜಿಪಂ.ಸದಸ್ಯರಾದ ಪ್ರಕಾಶ ಪಾಟೀಲ್ ಜೇರಬಂಡಿ,ಹನುಮಂತ್ರಾಯ ಪೊಲೀಸ್ ಪಾಟೀಲ್ ಬಿ.ಆರ್.ಗುಂಡ, ಹಿರಿಯ ಮುಖಂಡರಾದ ಬಸವರಾಜ ಗಾಣಧಾಳು ವಕೀಲರು,ಚಂದಪ್ಪ ಬುದ್ದಿನ್ನಿ,ಗ್ರಾಪಂ. ಉಪಾಧ್ಯಕ್ಷೆ, ಸದಸ್ಯರು, ಇಲಾಖೆಯ ಹಿರಿಯ ಅಧಿಕಾ–ರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಅಕ್ರಮ ಮಾದಕ ವಸ್ತು ಗಾಂಜಾ ಸಾಗಾಣಿಕೆ



ಜೇವರ್ಗಿ : ತಾಲ್ಲೂಕಿನ ನೆಲೋಗಿಯ ಕಮಾನಿನ ಹತ್ತಿರ ದಿನಾಂಕ :07–02–2022 ರಂದು ಸಾಯಂಕಾಲ 5:45 ರ ಸಮಯದಲ್ಲಿ ಜೇವರ್ಗಿಯಿಂದ ಸಿಂದಗಿಯ ರಾಷ್ಟ್ರೀಯ 50ರ ಹೆದ್ದಾರಿಯಲ್ಲಿ ಮಹಾರಾಷ್ಟ್ರ ಮೂಲದ ಸೊಲ್ಲಾಪೂರ ಜಿಲ್ಲೆಯ ಮೂರು ಜನ ಆರೋಪಿಗಳನ್ನು ದ್ವಿ ಚಕ್ರವಾಹನದ ಮೇಲೆ (MH 13 BW 2041) ಮಾದಕ ವಸ್ತು ಗಾಂಜಾ ಇಟ್ಟುಕೊಂಡು ಸಾಗಾಣಿಕೆ ಮಾಡುತ್ತಿರುವ ಮಾಹಿತಿಯ ಮೆರೆಗೆ ಕಲಬುರಗಿ ಜಿಲ್ಲೆಯ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಡಾ: ಇಶಾ ಪಂತ್ ,ಮಾನ್ಯ ಹೆಚ್ಚುವರಿ ಪೊಲೀಸ್ ಅಧಿಕ್ಷಕರು,ಮಾಹಿತಿಯ ಮಾರ್ಗ ದರ್ಶನದಲ್ಲಿ ಜೇವರ್ಗಿ ವೃತ್ತ ಸಿ ಪಿ ಐ ರವರಾದ ಶ್ರೀ ಶಿವಪ್ರಸಾದ, ನೆಲೋಗಿ ಪಿ ಎಸ್ ಐ ರವರಾದ ಶ್ರೀ ರಾಜಕುಮಸರ ಜಾಮಗೊಂಡ (ಕಾ & ಸು) ರವರ ನೇತೃತ್ವದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಮೂರು ಜನ ಆರೋಪಿಗಳನ್ನು ಬಂಧಿಸಿ ಅವರಿಂದ 41.8 ಕೆ ಜಿ ಮಾದಕ ವಸ್ತು ಗಾಂಜಾ ಅಂಕಿ 4,10,000 ರೂಪಾಯಿ ಮತ್ತು ಸಾಗಾಣಿಕೆ ಮಾಡಲು ಉಪಯೋಗಿಸಿದ ಮೋಟರ್ ಸೈಕಲ್ ನ್ನು ವಶಪಡಿಸಿಕೊಂಡಿರುತ್ತಾರೆ. ನೆಲೋಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ.

ಈ ಕಾರ್ಯಾಚರಣೆಯಲ್ಲಿ ಜೇವರ್ಗಿ ವೃತ್ತದ ಹಾಗೂ ನೆಲೋಗಿ ಪೊಲೀಸ್ ಠಾಣೆಯ ಸಿಬ್ಬಂದಿಯವರಾದ ಶ್ರೀ ಗುರುಬಸಪ್ಪ ಎ ಎಸ್ ಐ, ಶ್ರೀ ಶಿವಪ್ಪ ಹೆಚ್ ಸಿ,ಸೋಮಶೇಖರ ಹೆಚ್ ಸಿ,ಚಂದ್ರಾಮ ಹೆಚ್ ಸಿ,ಶ್ರೀ ರಾಜುಕುಮಾರ ಸಿಪಿಸಿ,ಶಿವರಾಯ ಸಿಪಿಸಿ ರವರು ಪಾಲ್ಗೊಂಡಿದ್ದರು.

# ಎಂ ಡಿಸಿಸಿ ಬ್ಯಾಂಕ್ ಮತ್ತು ನಂದಿನಿ ಗ್ಯಾಲಕ್ಸಿ ಕಟ್ಟಡ ಶಂಕುಸ್ಥಾಪನೆ ಕಾರ್ಯಕ್ರಮ



ಪಿರಿಯಾಪಟ್ಟಣ:ನೂತನವಾಗಿ ಎಂ ಡಿಸಿಸಿ ಬ್ಯಾಂಕ್ ಮತ್ತು ನಂದಿನಿ ಗೆಲಕ್ಸಿ ಕಟ್ಟಡ ಸಂಸ್ಥಾಪನ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಂ ಕೆ ಸೋಮಶೇಖರ್ ಅವರು ಉದ್ಘಾಟಿಸಿದರು ಇದೇ ಸಂದರ್ಭದಲ್ಲಿ ಮಾತನಾಡಿ ಕ್ಷೇತ್ರದ ಅಭಿವೃದ್ಧಿಗಾಗಿ ಶಾಸಕರಾದ ಕೆ ಮಹಾದೇವ್ ರವರು ಸಾಕಷ್ಟು ಶ್ರಮಿಸುತ್ತಾರೆ ಎಂದು ತಿಳಿಸಿದರು ಶಾಸಕರಾದ ಕೆ ಮಹದೇವ್ ರವರು ಮಾತನಾಡಿ ಕ್ಷೇತ್ರದ ಅಭಿವೃದ್ಧಿಗಾಗಿ ಪಕ್ಷಬೇಧ ಮರೆತು ಎಲ್ಲಾ ಸಚಿವರ ಕಾರ್ಯಾಲಯ ಮತ್ತು ಮನೆಬಾಗಿಲಿಗೆ ಹೋಗಿ ನಮ್ಮ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಅನುದಾನ ಮತ್ತು ಈ ಕ್ಷೇತ್ರದ ಲೋಕಸಭಾ ಸದಸ್ಯರಾದ ಶ್ರೀಯುತ ಸಿಂಹರವರು ಸಾಕಷ್ಟು ಅನುದಾನವನ್ನು ನೀಡಿರುತ್ತಾರೆ ಎಂದು ತಿಳಿಸಿದರು ಅಧ್ಯಕ್ಷರು ಮಾತನಾಡಿ ನಾನು ನಿರ್ದೇಶಕರು ಮತ್ತು ಅಧ್ಯಕ್ಷರಾದ ಮೇಲೆ ನಮ್ಮ ಕ್ಷೇತ್ರದಲ್ಲಿ ಸುಮಾರು 50 ಹಾಲು ಉತ್ಪಾದಕರ ಸಂಘ ಹಾಗೂ 40 ಬಿಎಂಸಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತೇವೆ ಸುಮಾರು 1 ಲಕ್ಷ ಲೀಟರ್ ಹಾಲನ್ನು ಸರಬರಾಜು ಮಾಡುತ್ತೇವೆ ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಅಪೆಕ್ಸ್ ಉಪಾಧ್ಯಕ್ಷರಾದ ಶ್ರೀತ ಜಿಟಿ ಹ–ರೀಶ್ ರವರು ನೀರು ಮತ್ತು ಒಳಚರಂಡಿ ನಿರ್ದೇಶಕರಾದ ಆರ್ಟಿ ಸತೀಶ್ ರವರು ಮತ್ತು ಬಿಜೆಪಿ ತಾಲೂಕು ಅಧ್ಯಕ್ಷರಾದ ರಾಜೇಗೌಡರು ಜೆಡಿಎಸ್ ಅಧ್ಯಕ್ಷರಾದ ಶ್ರೀಯುತ ಅಣ್ಣಯ್ಯ ಶೆಟ್ಟಿ ರವರು ಪುರಸಭೆ ಅಧ್ಯಕ್ಷರಾದ ಮಂಜುನಾಥ್ ಸಿಂಗ್

ಉಪಾಧ್ಯಕ್ಷರಾದ ನಾಗರತ್ನ ರವರು ಮೈಮುಲ್ ನಿರ್ದೇಶಕರುಗಳಾದ ಸೋಮಶೇಖರ್ ಮಹೇಶ್ ರವರು ಈರೇಗೌಡ ರಾಜೇಂದ್ರ ಓಂ ಪ್ರಕಾಶ್ ಉಮಾಶಂಕರ್ ಪಿರಿಯಾಪಟ್ಟಣ ತಾಲೂಕು ಎಲ್ಲಾ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷರು ಕಾರ್ಯದರ್ಶಿ ಹಾಗೂ ರೈತರು ಹಾಗೂ ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

**ವರದಿ–ಹೆಚ್ ಆರ್ ಶಂಕರ್,ಹಂಡಿತವಳ್ಳಿ**

# ಸೈದಾಪುರ:ಅಟಲ್ ಟಿಂಕೆರಿಂಗ್ ಲ್ಯಾಬದಲ್ಲಿ ಸಿ ಕೋಡ್ ಇನ್ನೋವೇಶನ್ ಕಾರ್ಯಕ್ರಮ



ಸೈದಾಪುರ: ಪಟ್ಟಣದ ವಿದ್ಯಾ ವರ್ಧಕ ಪ್ರೌಢ ಶಾಲೆಯ ಅಟಲ್ ಟಿಂಕೆರಿಂಗ್ ಲ್ಯಾಬ್‌ದಲ್ಲಿ ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ಮತ್ತು ಡೇಲ್ ಕಂಪನಿಯ ಸಹಯೋಗದಲ್ಲಿ ಸಿ ಕೋಡ್ ಇನ್ನೋವೇಶನ್ ಪ್ರೋಗ್ರಾಮ್ ಮತ್ತು ಗೇಮಿಂಗ್ ಸಲ್ಯೂಷನ್ ಎಟಿಎಲ್ ಮಾರಥನ್ 2022 ಬಗ್ಗೆ ಹಚ್ಚಿನ ಮಾಹಿತಿಯನ್ನು ತಿಳಿಸಿ ಕೊಡಲಾಯಿತು.

ಈ ಸಂದರ್ಭದಲ್ಲಿ ಲೀಡ್ ಕನ್ಸಲ್ಟೆಂಟ್ ಲರ್ನಿಂಗ ಲಿಂಕ್ಸ್ ಫೌಂಡೇಶನ್‌ದ ನರಸಿಂಹ ಹಾಗೂ ಬಸವಂತ್ರಾಯ ಇವರು ಗೇಮಿಂಗ್ ಸಲ್ಯೂಷನ್ ಮಾಡುವುದರ ಮೂಲಕ ಮಕ್ಕಳಲ್ಲಿ ಸೃಜಶೀಲತೆ ಮತ್ತು ಆಲೋಚನಾ ಶಕ್ತಿ ವೃದ್ಧಿಯಾಗಲೂ ಸಹಾಯಕವಾಗಿದೆ ಇದರಿಂದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ನೆರವಾಗುತ್ತದೆ. ಲ್ಯಾಬಿನಲ್ಲಿರುವ ಸಾಮಾಗ್ರಿಗಳನ್ನು ಬಳಕೆ ಮಾಡಿಕೊಂಡು ಹೊಸ ವಿಧಾನಗಳನ್ನು ಕಂಡುಕೊಳ್ಳುವಲ್ಲಿ ಪ್ರಯತ್ನ ಮಾಡಬೇಕು ಎಂದು ಹೇಳಿದರು. ಮುಖ್ಯಗುರು ಲಿಂಗಾರೆಡ್ಡಿ ನಾಯಕ, ಬಸವಂತ್ರಾಯ, ಗೂಳಪ್ಪ. ಎಸ್.ಮಲ್ಹಾರ, ವಿಜ್ಞಾನ ಶಿಕ್ಷಕ ರಾಚಯ್ಯ ಸ್ವಾಮಿ ಬಾಡಿಯಾಲ, ಕವಿತಾ ಸೇರಿದಂತೆ ಇತರರಿದ್ದರು.

ಚಿತ್ರಶೀರ್ಷಿಕೆ :9ಎಸ್‌ಡಿಪಿಆರ್1: ಸೈದಾಪುರ : ಪಟ್ಟಣದ ವಿದ್ಯಾ ವರ್ಧಕ ಪ್ರೌಢ ಶಾಲೆಯಲ್ಲಿ ಅಟಲ್ ಟಿಂಕೆರಿಂಗ ಲ್ಯಾಬ್‌ದಲ್ಲಿ ಲಿಂಕ್ಸ್ ಫೌಂಡೇಶನ್ ಮತ್ತು ಡೇಲ ಕಂಪನಿಯ ಸಹಯೋಗದಲ್ಲಿ ಸಿ ಕೋಡ್ ಇನ್ನೋವೇಶನ್ ಪ್ರೋಗ್ರಾಮ ಮತ್ತು ಗೇಮಿಂಗ ಸಲ್ಯೂಷನ್ ಬಗಗೆ ನರಸಿಂಹ ಮತ್ತು ಬಸವಂತ್ರಾಯ ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಸಿಕೊಟ್ಟರು.

# ಯುವಜನ ಸಬಲೀಕರಣಕ್ಕಾಗಿ ಅಭಿಯಾನ



ಯುವ ಮುನ್ನಡೆ ಕರ್ನಾಟಕ ಮತ್ತು ಸಂವಾದ ಸಂಸ್ಥೆಯ ಜಂಟಿ ಆಶ್ರಯದಲ್ಲಿ ಯುವಜನ ಸಬಲೀಕರಣ ಕುರಿತ ರಾಜ್ಯ ಮಟ್ಟದ ಅಧ್ಯಯನ ಶಿಬಿರವು ಮಂಗಳೂರಿನಲ್ಲಿ ಫೆಬ್ರವರಿ 4 ರಿಂದ 7 ರವರೆಗೆ ನಡೆಯಿತು.

ಕರ್ನಾಟಕ ರಾಜ್ಯದ ಯುವಜನರ ಸಬಲೀಕರಣ–ಕ್ಕಾಗಿ ರಾಜ್ಯದ ಯುವನೀತಿಯಲ್ಲಿ ಯುವಜನರ ನಿರೀಕ್ಷೆಗಳು ಮತ್ತು 2022–23 ನೇ ಸಾಲಿನ ರಾಜ್ಯ ಮುಂಗಡ ಪತ್ರದಲ್ಲಿ ಯುವಜನರ ನಿರೀಕ್ಷೆಗಳು, ಮತ್ತು ಕರ್ನಾಟಕ ರಾಜ್ಯ ಸರಕಾರದ ಕಾರ್ಯಕ್ರಮಗಳಲ್ಲಿ ಆಗಬೇಕಾಗಿರುವ ಬದಲಾವಣೆ ಕುರಿತಂತೆ ಯುವಜನರ, ಸಾರ್ವಜನಿಕರ ಮತ್ತು ಸರಕಾರದದ ಗಮನ ಸೆಳೆಯಲು ಯುವಮುನ್ನಡೆ ಕರ್ನಾಟಕವು ಒಂದು ತಿಂಗಳ ಅಭಿಯಾನವನ್ನು ನಡೆಸುತ್ತಿದೆ.

**ಅಭಿಯಾನದ ಮುಖ್ಯ ಉದ್ದೇಶಗಳು:**

@ ಯುವಜನ ಸಬಲೀಕರಣವನ್ನು ಆಂದೋಲನವನ್ನಾಗಿಸುವುದು, ಯುವಜನರು ಯುವಸಬಲೀಕರಣದ ನೀತಿ, ಯೋಜನೆ ಮತ್ತು ಅನುಷ್ಠಾನದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು

@ 2012 ರ ರಾಜ್ಯ ಯುವನೀತಿಯಲ್ಲಿ ಪ್ರಸ್ತಾಪಿರುವಂತೆ ಯುವ ಸಬಲೀಕರಣ ನಿಗಮ ಸ್ಥಾಪನೆಯಾಗಬೇಕು, ಯುವಜನರ ಹಕ್ಕುಗಳ ರಕ್ಷಣೆಗೆ ಯುವಜನ ಆಯೋಗ ಸ್ಥಾಪನೆಯಾಗಬೇಕು, ಯುವಜನರಿಗಾಗಿ ರಾಜ್ಯದಾದ್ಯಂತ ಯುವಸಬಲೀಕರಣ ಕೇಂದ್ರಗಳನ್ನು ಮಾಡಬೇಕು, ಪ್ರತ್ಯೇಕ ಯುವ ಬಜೆಟ್ ಮಂಡನೆ ಮಾಡಿ ಯುವಜನ ಸಬಲೀಕರಣಕ್ಕೆ ಸಾಕಷ್ಟು ಹಣ ಮೀಸಲಿಡಬೇಕು ಎಂದು ಸರಕಾರವನ್ನು ಒತ್ತಾಯಿಸುವುದು

ಈ ಅಭಿಯಾನದ ಚಟುವಟಿಕೆಗಳಾಗಿ ಬೆಂಗಳೂರು ನಗರ ಮತ್ತು ಐದು ಜಿಲ್ಲೆಗಳ ಕಾಲೇಜುಗಳಲ್ಲಿ ಮತ್ತು ಹಳ್ಳಿಗಳಲ್ಲಿ ಸಬಲೀಕರಣ ಅರಿವು–ಅಭಿಯಾನ ಕಾರ್ಯಕ್ರಮಗಳು ನಡೆಯಲಿವೆ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ರಾಜ್ಯದ ಯುವಜನರನ್ನು ಸಾರ್ವಜನಿಕರನ್ನು ತಲಪುವ ಚಟುವಟಿಕೆಗಳು ನಡೆಯಲಿವೆ.

ಯುವಮುನ್ನಡೆ ಕರ್ನಾಟಕದ ಮನವಿಯನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಮೂಲಕ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಿಗೆ ಸಲ್ಲಿಸುವುದು ಹಾಗೂ ಮಾಧ್ಯಮದವರನ್ನು ಭೇಟಿ ಮಾಡುವುದರ ಮೂಲಕ ಈ ಅಭಿಯಾನ ಇಂದಿನಿಂದ ಅಂದರೆ ಫಬ್ರವರಿ 7 ರಿಂದ ಆರಂಭವಾಗುತ್ತಿದೆ. ಅಭಿಯಾನದ ಭಾಗವಾಗಿ ಕರ್ನಾಟಕ ರಾಜ್ಯ ಯುವನೀತಿ ತಜ್ಞರ ಸಮಿತಿಯನ್ನು ಮತ್ತು ಇತರ ಜನ ಪ್ರತಿನಿಧಿಗಳನ್ನು ಭೇಟಿ ಮಾಡಲು ಯೋಜಿಸಲಾಗಿದೆ.

ಪ್ರತಿನಿಧಿಗಳು : ನೇಹ ದೇವಾಡಿಗ,ಯುವಮುನ್ನಡೆ ಮಂಗಳೂರು ಪ್ರತಿನಿಧಿ ಬಿನಿತ ಗುರುಲಿಂಗಪ್ಪ, ಯುವಮುನ್ನಡೆ ಕಲಬರ್ಗಿ ಪ್ರತಿನಿಧಿ ಗಜೇಂದ್ರ ಸಿಂಗ್ ರಾಜ್ಪೂತ್, ಯುವಮುನ್ನಡೆ ಕೋಲಾರ ಪ್ರತಿನಿಧಿ ವರುಣ್, ಪಿ ಯುವಮುನ್ನಡೆ ಚಿತ್ರದರ್ಗೆ ಪ್ರತಿನಿಧಿ ಅವಿನಾಶ್ ಕೆ, ಯುವಮುನ್ನಡೆ ಬೆಂಗಳೂರು ಪ್ರತಿನಿಧಿ

**– ವಿಜಯ್ ಕುಮಾರ್**

ಕರುನಾಡ ಕಂದ
ಸಂಪುಟ-1 । ಸಂಚಿಕೆ-8
ದಿನಾಂಕ: 16-02-2022 । ಪುಟಗಳು: 16

# ನಕಲಿ ಬಂಗಾರ ಮಾರಾಟದ ಜಾಲ ಪತ್ತೆ




ಕೊಪ್ಪಳ ಜಿಲ್ಲೆಯ ಕೊಪ್ಪಳ ಗ್ರಾಮೀಣ ವೃತ್ತ ವ್ಯಾಪ್ತಿಯಲ್ಲಿ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಗೆ ಫಿರ್ಯಾದಿರದಾರನಾದ ವೆಂಕಟೇಶ ಸಾ.ವಣಗೇರಿ ಅವರು ದಿನಾಂಕ 3/02/2022 ಸಾಯಂಕಾಲ 7:00 ಘಂಟೆಯ ಸುಮಾರಿಗೆ ಠಾಣೆಗೆ ಹಾಜರಾಗಿ ಈಗ್ಗೆ ಸುಮಾರು 20 ದಿವಸಗಳ ಹಿಂದೆ ದೂರುದಾರರ ಮೊಬೈಲ್ ಸಂಖ್ಯೆ ಗೆ ರಮೇಶ್ ಚಿಕ್ಕಮಗಳೂರು ಎಂಬುವನು ತನ್ನ ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿ ಪರಿಚಯ ಮಾಡಿಕೊಂಡು ಒಂದು ಮನೆಯಲ್ಲಿ ಬುನಾದಿ ತೆಗೆಯುವ ಸಂದರ್ಭದಲ್ಲಿ ಭೂಮಿಯಲ್ಲಿ ಬಂಗಾರದ ಬಿಲ್ಲೆಗಳು ಸಿಕ್ಕಿವೆ, ಕಡಿಮೆ ಬೆಲೆಯಲ್ಲಿ ಕೊಡುತ್ತೇನೆ ಬೇಕಾದಲ್ಲಿ ನಮ್ಮ ಹರಪನಹಳ್ಳಿ ತಾಲೂಕಿನ ಕೆ ಬಸಾಪೂರ ಗ್ರಾಮಕ್ಕೆ ಬನ್ನಿರಿ ಅಂತಾ ಹೇಳಿ ಕರೆಯಿಸಿ ಅಸಲಿ ಬಂಗಾರದ ಬಿಲ್ಲೆಗಳನ್ನು ನೀಡಿ ನಿಮಗೆ ಇವುಗಳು ಚೆಕ್ ಮಾಡಿಸಿ ಬೇಕಾದಲ್ಲಿ ನಂತರ ತಿಳಿಸಿರಿ ಅಂತಾ ಹೇಳಿ ಕಳುಹಿಸಿ, ನಂತರ ಆಪಾದಿತರು ಕರೆ ಮಾಡಿ ನಾಲ್ಕೂವರೆ ಕೆ.ಜಿ.ಬಂಗಾರದ ಬಿಲ್ಲೆಗಳನ್ನು ತೆಗೆದುಕೊಂಡು ಬರುತ್ತೇವೆ,ನೀವು ಹಣ ತೆಗೆದುಕೊಂಡು ಹಲಗೇರಿ ಗ್ರಾಮದ ಹತ್ತಿರ ಬನ್ನಿ ಅಂತಾ ಹೇಳಿದಾಗ, ನಾವು ಅಲ್ಲಿಗೆ ಹಣ ತೆಗೆದುಕೊಂಡು ಹೋದಾಗ ನಕಲಿ ಬಿಲ್ಲೆಗಳನ್ನು ನೀಡಿದ್ದಾರೆ ಅಂತಾ ಗೊತ್ತಾಗುವಷ್ಟರಲ್ಲಿ ,ಹಣ ವಾಪಸು ಪಡೆದುಕೊಂಡಾಗ ಆಪಾದಿತರು ಫಿರ್ಯಾದಿ ಹಾಗೂ ಇಬ್ಬರಿಗೆ ದಬ್ಬಾಡಿ,ನೂಕಿ,ಕೈಯಿಂದ ಹೊಡಿ-ಬಡಿ ಮಾಡಿ ನಗದು ಐದು ಲಕ್ಷಗಳ ರೂಪಾಯಿಗಳು ಕಸಿದುಕೊಂಡು ತಮ್ಮ ತಮ್ಮ ಮೋಟಾರು ಸೈಕಲ್ ನೊಂದಿಗೆ ಹೋಗುತ್ತಿದ್ದಾಗ ಸಾರ್ವಜನಿಕರ ಸಹಕಾರದೊಂದಿಗೆ ಒಂದು ಮೋಟಾರು ಸೈಕಲ್ ದೊಂದಿಗೆ 2 ಜನ ಆಪಾದಿತ-ರಿಗೆ ಹಿಡಿದುಕೊಂಡು ಬಂದಿದ್ದರಿಂದ ಮೇಲಿಂದ ಠಾಣೆ ಗುನ್ನೆ ನಂಬರ್: 25/2022 ಕಲಂ 397 ಐಸಿಸಿ ನೇದರಲ್ಲಿ ಪ್ರಕರಣ ದಾಖಲಿಸಿಕೊಂಡು ಸೆರೆ ಸಿಕ್ಕ ಇಬ್ಬರೂ ಆಪಾದಿತರಿಗೆ ವಿಚಾರಣೆ ನಡೆಸಿ ಇಬ್ಬರಿಗೆ ನ್ಯಾಯಾಂಗ ಬಂಧನಕ್ಕೆ ಕಳಿಸಿರುತ್ತದೆ.

ನಂತರ ಪ್ರಕರಣದಲ್ಲಿ ತಲೆ ಮರೆಸಿಕೊಂಡ ಇನ್ನೂ ನಾಲ್ಕು ಜನ ಆಪಾದಿತ ಮತ್ತು ಅವರಿಂದ ನಗದು ಹಣ ಎರಡು ಮೋಟಾರು ಸೈಕಲ್ ಪತ್ತೆ ಕುರಿತು ಮೇಲಾಧಿಕಾರಿಗಳಾದ ಮಾನ್ಯ ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಅರುಣಾಂಗಸು ಗಿರಿ ಹಾಗೂ ಶ್ರೀಮತಿ ಗೀತಾ ಬೇನಾಳ ಪೊಲೀಸ್ ಉಪಾಧೀಕ್ಷಕರು ಕೊಪ್ಪಳ ಉಪವಿಭಾಗ ಮಾರ್ಗದರ್ಶನದಲ್ಲಿ ಕೊಪ್ಪಳ ಗ್ರಾಮೀಣ ವೃತ್ತದ ಶ್ರೀ ವಿಶ್ವನಾಥ ಹಿರೇಗೌಡರ್ ಅವರು ಎರಡು ಪ್ರತ್ಯೇಕ ತಂಡ ಮಾಡಿ ಆ ತಂಡದ ಸಿಬ್ಬಂದಿಯವರಾದ ಎ.ಎಸ್.ಐ.ಶಶಿಕಾಂತ.ಹೆಚ್.ಸಿ., ಮಾರುತಿ, ಪಿ.ಸಿ.ವೀರಬಸಪ್ಪ , ಗದ್ದೆಪ್ಪ ಅವರಿಗೆ ಸೂಕ್ತ ತಿಳಿವಳಿಕೆ ನೀಡಿ ಕಳಿಹಿಸಿಕೊಟ್ಟಿದ್ದು ದಿನಾಂಕ 04/02/2022 ರಂದು ಆಪಾದಿತ ಕೊಪ್ಪಳ ತಾಲೂಕಿನ ಅಳವಂಡಿ ಕಡೆಯಿಂದ ಮುಂಡರಗಿ ಕಡೆಗೆ ಮೋಟಾರು ಸೈಕಲ್ ನಿಂದ ಹೊರಟಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಸಿ.ಪಿ.ಐ.ರವರು ವಿಶೇಷ ತಂಡದೊಂದಿಗೆ ಸಾಯಂಕಾಲ 4:30 ಘಂಟೆಗೆ ಬೆಳಗಟ್ಟಿ ಸೀಮಾದಲ್ಲಿ ಮುಂಡರಗಿ ರಸ್ತೆಯಲ್ಲಿ ಎರಡು ಮೋಟಾರು ಸೈಕಲ್ ಮೇಲೆ ಪರಾರಿಯಾಗುತ್ತಿರುವಾಗ ಪೊಲೀಸ್ ಜೀಪ್ ನೋಡಿ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಬೆನ್ನತ್ತಿ ಒಂದು ಮೋಟಾರು ಸೈಕಲ್ ಮೇಲೆ ಹೋಗುತ್ತಿದ್ದ ಇಬ್ಬರನ್ನೂ ವಶಕ್ಕೆ ತೆಗೆದುಕೊಂಡು ಸದರಿಯವ-ರಿಂದ ಕೃತ್ಯಕ್ಕೆ ಉಪಯೋಗಿಸಿದ ಒಂದು ಮೋಟಾರು ಸೈಕಲ್ ಮತ್ತು 5 ಲಕ್ಷ ರೂಪಾಯಿ ನಗದು ಹಣ ಜಪ್ತಿ ಮಾಡಿಕೊಂಡಿದ್ದು ಇರುತ್ತದೆ.ಇನ್ನೂ ಇಬ್ಬರ ಅಪಾದಿತರ ಪತ್ತೆ ಕುರಿತು ತನಿಖೆ

ಪ್ರಕರಣವು ಹಂತದಲ್ಲಿರುತ್ತದೆ.

ಸದರಿ ಪ್ರಕರಣವನ್ನು ಬೇಧಿಸುವಲ್ಲಿ ಪ್ರಯತ್ನಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೊಪ್ಪಳ ಅವರು ಶ್ಲಾಘನೆ ವ್ಯಕ್ತ ಪಡಿಸಿದ್ದಾರೆ. ಇಂತಹ ಸಂದರ್ಭಗಳಲ್ಲಿ ಪೊಲೀಸ್ ಪಡೆಗಳ ಕಾರ್ಯ ಅಭಿನಂದನೆಗೆ ಪಾತ್ರವಾಗಿದೆ ಎಂದು ಸಾರ್ವಜನಿಕರ ಮೆಚ್ಚುಗೆಗೆ ಮಾತುಗಳು ಕೇಳಿಬರುತ್ತಿದ್ದವು.

# ಕನಕದಾಸರ ಚಿಂತನೆಗಳು ನಮಗೆ ಆದರ್ಶವಾಗಬೇಕು ಬಿಇಓ ಯು. ಬಸವರಾಜಪ್ಪ



ಹರಪನಹಳ್ಳಿ ತಾಲೂಕು ಪಟ್ಟಣದ ಹಳೆ ಬಸ್ ನಿಲ್ದಾಣದ ಬಳಿ ಇರುವ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ 06.02.2022 ಭಾನುವಾರದಂದು ತಾಲೂಕು ಕನಕ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ಕನಕದಾಸರ 534 ನೇ ಜಯಂತೋತ್ಸವ ಹಾಗೂ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಮತ್ತು ಸಮಾರಂಭ ಹಮ್ಮಿಕೊಳ್ಳಲಾಗಿತ್ತು.



ಕುರುಬ ಸಮಾಜದ ಹಿರಿಯ ಮುಖಂಡ ನೀಲಗುಂದ ಜಿಲ್ಲಾ ಪಂಚಾಯ್ತಿ ಕ್ಷೇತ್ರದ ಮಾಜಿ ಸದಸ್ಯ ಎಚ್ ಬಿ ಪರಶುರಾಮಪ್ಪ ಮಾತನಾಡಿ ವಿದ್ಯಾರ್ಥಿಗಳು ಕನಕದಾಸರ ಆದರ್ಶ ಚಿಂತನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಮತ್ತೊಬ್ಬ ಸಮಾಜದ ಹಿರಿಯ ಮುಖಂಡ ವೈ. ಕೆ. ಬಿ. ದುರುಗಪ್ಪ ಮಾತನಾಡಿ ವಿದ್ಯಾರ್ಥಿಗಳು ಸಮಾಜದಲ್ಲಿ ಗುರು-ಹಿರಿಯರನ್ನು ಗೌರವಿಸುವ ಮೂಲಕ ತಂದೆ-ತಾಯಿಗೆ ಆದರ್ಶ ಮಕ್ಕಳಾಗಿ ಬೆಳೆಯಬೇಕೆಂದು ಮಕ್ಕಳಲ್ಲಿ ಸಲಹೆ ನೀಡಿದರು.

ಕನಕ ನಮ್ಮವನು ಎಂದು ಹೆಮ್ಮೆಯಿಂದ ಹೇಳುತ್ತೇವೆ ಆದರೆ ಅವರ ಚಿಂತನೆ ಆದರ್ಶಗಳನ್ನು ಪಾಲಿಸುವುದು ಅಷ್ಟೇ ಮುಖ್ಯ ಎಂದು ಅವರ ಸಮಾಜದ ಸಂಘ-ಸಂಸ್ಥೆಗಳು ವ್ಯಕ್ತಿಗತ ವಾಗಬಾರದು ಸಾಮಾಜಿಕ ಚಿಂತನೆಗಳನ್ನು ಇಟ್ಟುಕೊಂಡು ಶೈಕ್ಷಣಿಕ ಸಾಮಾಜಿಕ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳನ್ನು ಗುರುತಿಸಿ ಮಾರ್ಗದರ್ಶನ ಮಾಡುವಂಥ ಕೆಲಸ ಪ್ರತಿಯೊಬ್ಬ-ರಿಂದಲೂ ಆಗಬೇಕು. ಯು. ಬಸವರಾಜಪ್ಪ ಕ್ಷೇತ್ರ ಶಿಕ್ಷಣಾಧಿಕಾರಿ ಕನಕ ನೌಕರರ ಸಂಘದ ವತಿಯಿಂದ ಪ್ರತಿ ವರ್ಷ ಸುಮಾರು ಹದಿನೈದು ವರ್ಷಗಳಿಂದ ಸಮಾಜದ ಪ್ರತಿಭಾವಂತ ಎಸೆಸೆಲ್ಸಿ ಮತ್ತು ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಸಂಘದಿಂದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದು ಈ ಬಾರಿ ಕೋವಿಡ್ ಹಿನ್ನೆಲೆ ತಡವಾಗಿ ಏರ್ಪಡಿಸಲಾಗಿದೆ ಸನ್ಮಾನಿತ ವಿದ್ಯಾರ್ಥಿಗಳು ಇದ-ರಿಂದ ಪ್ರೇರಣೆಯಾಗಿ ಮುಂದೆ ಉನ್ನತ ಸ್ಥಾನಮಾನ ಪಡೆಯಲಿ ಎಂಬ ಉದ್ದೇಶ ಸಂಘ ಒಂದಿದೆ. ಎಸ್. ರಾಮಪ್ಪ, ಕನಕ ನೌಕರರ ಸಂಘದ ಗೌರವಾಧ್ಯಕ್ಷ. ಈ ಸಭೆಗೆ ಅತಿಥಿಗಳಾಗಿ ಶಿಕ್ಷಕರ ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪ ನವರ್, ಕುರುಬ ಸಮಾಜದ ತಾಲೂಕು ಅಧ್ಯಕ್ಷ ಬಿ. ಗೋಣಿಬಸಪ್ಪ, ಕನಕ ನೌಕರರ ಸಂಘದ ತಾಲೂಕು ಅಧ್ಯಕ್ಷ ದುರುಗಪ್ಪ ಹೊನ್ನೂರ್, ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಜಿ. ಪದ್ಮಲತಾ, ಕನಕ ನೌಕರರ ಸಂಘದ ಪದಾಧಿಕಾ-ರಿಗಳಾದ ಸಿದ್ದಪ್ಪ ಹರಿಂದ್ರಾಳ್, ಮಹಾದೇವಮ್ಮ, ಬಿ. ಮಂಜುಳಾ, ಎಚ್. ಬಿ. ಪ್ರಭಾಕರ್, ಚೆನ್ನಪ್ಪ ಕಂಬಳಿ, ಕೆ. ರತ್ನಮ್ಮ, ಹೆಗ್ಗಪ್ಪರ್ ಪರಶು ನಾಯಕ, ಜಿ. ಹನುಮಂತಪ್ಪ, ಕೆ. ಮಂಜುನಾಥ್, ಮುಖಂಡರಾದ ಮಲ್ಲಿಕಾರ್ಜುನ್, ಬಳಿಗನೂರು ಪರಶುರಾಮ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಸಿದ್ದಲಿಂಗನಗೌಡ, ಇನ್ನು ಮುಂತಾದವರು ಮತ್ತು ವಿದ್ಯಾರ್ಥಿಗಳು ಪೋಷಕರು ಉಪಸ್ಥಿತರಿದ್ದರು.

# ಅಂಬೇಡ್ಕರ್ ರವರಿಗೆ ಅವಮಾನ ಮಾಡಿರುವ ಮಲ್ಲಿಕಾರ್ಜುನಗೌಡ ರವರನ್ನು ವಜಾಗೊಳಿಸಿ ಗಡಿ ಪಾರು ಮಾಡುವಂತೆ ಒತ್ತಾಯ

ಸರಗೂರು:08/02/2022ರ ಮಂಗಳವಾರ ಮಲ್ಲಿಕಾರ್ಜುನ ಗೌಡ ರವರು ನ್ಯಾಯದೀಶರಾಗಿದ್ದರೂ ಅಂಬೇಡ್ಕರ್ ರವರ ಬಾವಚಿತ್ರವನ್ನು ತೆರವುಗೊಳಿಸಿ ಅವಮಾನ ಮಾಡಿರುವುದರಿಂದ ತಾಲೂಕಿನಾದ್ಯಂತ ಬೃಹತ್ ಪ್ರತಿಭಟನೆ ಯನ್ನುಹಮ್ಮಿಕೊಂಡಿದ್ದು ಮಲ್ಲಿಕಾರ್ಜುನಗೌಡ ರವರನ್ನು ವಜಾಗೊಳಿಸಿ ಗಡಿ ಪಾರುಮಾಡುವಂತೆ ಒತ್ತಾಯಿಸಿ ಸಂವಿಧಾನ ಸಂರಕ್ಷಣಾಸಮಿತಿಯ ನೇತೃತ್ವದ ಲ್ಲಿ ಪ್ರಗತಿಪರ ಹೊರಾಟಗಾರರು ಎಲ್ಲಾ ಜನಾಂಗದ ಮುಖಂಡರುಗಳು ದಲಿತಪರ ಹೊರಾಟಗಾರರು ವರ್ತಕರ ಸಂಘದವರು ಎಲ್ಲಾ ಗ್ರಾಮದ ಹೋರಾಟಗಾರರು ರೈತಪರ ಹೋರಾಟಗಾರು ಸೇರಿದ್ದರು ಈಪ್ರತಿಭಟನೆಯನ್ನು ಕುರಿತು ಪ್ರಗತಿಪರ ಹೊರಾಟಗಾರರು ಮಾತನಾಡಿದ ನಂತರ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು ಮನವಿ ಸ್ವೀಕರಿಸಿದ ತಹಶೀಲ್ದಾರರು ಸರ್ಕಾರಕ್ಕೆಕಳುಹಿಸಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಮನವಿಯನ್ನು ತಿಳಿಸಿದರು ಈಪ್ರತಿಭಟನೆಯಲ್ಲಿ ಎಸ್ ಎಲ್ ರಾಜಣ್ಣ ಚಾ ಶಿವಕುಮಾರ್ .ಕೊಟೆ ಶಿವಣ್ಣ ಬಿಡಗಲು ರಾಜಣ್ಣ ಹಿಟ್ನ ನರಸಿಂಹ ಮೂರ್ತಿ ಕೊಟೆ ಪುರುಷೋತ್ತಮಣ್ಣ ಮೈಸೂರು ಸೋಮಣ್ಣ ಹಳೆಹೆಗ್ಗೂಳು ಮುದ್ದಮಲ್ಲಯ್ಯ ಅ.ಕ.ಮಹಾಸಬೆ ಮಾಜಿ ಅದ್ಯಕ್ಷ ರು ಚೆನ್ನಕೊಟೆ ಜಿವಿಕ ಬಸವರಾಜಣ್ಣ ಕುಮಾರ್ ಚಂಗೌಡನಹಳ್ಳಿ ಮರಿದೇವಯ್ಯ ಜೋಂಪನಹಳ್ಳೀ ಪ್ರಕಾಶ್ ಹಾದನೂರು ಶಿವಲಿಂಗಯ್ಯ ಯಶವಂತಪುರ ಮಹೇಶ್ ಮೂಳ್ಳೂರು ಮಂಜು ಮುಳ್ಳೂರು ಮಂಜು ಬೆಳತ್ತೂರು ಗೋವಿಂದ ಕೊಡಗಿ ಕೃಷ್ಣ ಸರಗೂರು ಮಹದೇವಸ್ವಾಮಿ ಹಾದನೂರು ಮೂರ್ತಿ ಹಳೆಯೂರು ಮೂರ್ತಿ ಮೂಳ್ಳೂರು ಇನ್ನೂ ಹಲವಾರು ಪ್ರಗತಿಪರರು ಭಾಗವಹಿಸಿದ್ದರು.



ಕರುನಾಡ ಕಂದ
ಸಂಪುಟ–1 । ಸಂಚಿಕೆ–8
ದಿನಾಂಕ: 16–02–2022 । ಪುಟಗಳು: 16

# ಸಕ್ಕರೆ ಕಾರ್ಖಾನೆ ನಮಗೆ ಬೇಡ



ಹಾವೇರಿ ಜಿಲ್ಲೆ ಶಿಗ್ಗಾವಿ ತಾಲೂಕಿನ ಕೋಣನಕೇರಿ ಹೊರವಲಯದಲ್ಲಿರುವ ಸಕ್ಕರೆ ಕಾರ್ಖಾನೆ ಅವಶ್ಯಕತೆ ನಮಗಿಲ್ಲ ಕಾರ್ಖಾನೆಯಿಂದ ತುಂಬಾ ತೊಂದರೆ ಉಂಟು ಆಗುತ್ತದೆ ಎಂದು ಉತ್ತರ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಹನುಮಂತಪ್ಪ ಬಂಡಿವಡ್ಡರ್ ಸುದ್ದಿಗೋಷ್ಠಿಯಲ್ಲಿ ಹೇಳಿಕೆ ನೀಡಿದ್ದಾರೆ.

ನಮ್ಮ ಪರಿಸರ ನಮ್ಮ ಭೂಮಿ ನೀರು ಇವುಗಳು ನಮ್ಮ ಹಕ್ಕಾಗಿದ್ದು ಅವುಗಳನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆಯಾಗಿದೆ ಆದರೆ ಕೊಡಕೆರಿ ಗ್ರಾಮದ ಅರಣ್ಯ ಪ್ರದೇಶದಲ್ಲಿ ಉದ್ಯೋಗ ಆಮಿಷವೊಡ್ಡಿ ಸುಂದರ ಪರಿಸರ ಕಾಣುವ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಿ ಪರಿಸರ ನಾಶ ಮಾಡುತ್ತಿರುವ ನಿಟ್ಟಿನಲ್ಲಿ ಪ್ರಭಾವಿಗಳ ಕೈವಾಡವಿದೆ.

ಕಾರ್ಖಾನೆ ಯಾಗಲು ಯಾವುದೇ ಕಾರಣ–ಕ್ಕೂ ನಾವು ಬಿಡುವುದಿಲ್ಲ ಇದರಿಂದ ನಮ್ಮ ಪರಿಸರ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ತೊಂದರೆ ಉಂಟಾಗುತ್ತದೆ ಎಂದು ಕನ್ನಡಪರ ಹೋರಾಟಗಾರರ ವಿರೋಧವಿದೆ ಎಂದು ಹನುಮಂತಪ್ಪ ಬಂಡಿವಡ್ಡರ ವಿರೋಧ ವ್ಯಕ್ತಪಡಿಸಿದರು.

80 ಎಕರೆ ಬೆಳೆದುನಿಂತ ಅರಣ್ಯ ಮರಗಳನ್ನು ಕಡಿದು ಇದರಿಂದ ನಮ್ಮ ಭಾಗದ ಪರಿಸರ ನಾಶವಾಗಿ ಭೂಮಿಯ ಗುಣಮಟ್ಟತೆಯನ್ನು ಕಳೆದುಕೊಳ್ಳುತ್ತದೆ.

ಜಿಲ್ಲಾಧಿಕಾರಿಗಳಾದ ತಿಪ್ಪೇಸ್ವಾಮಿಯವರ ಜೊತೆ ಮಾತನಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ

ಈ ಕಾರ್ಖಾನೆ ಮಾಲೀಕ ಜಿಲ್ಲಾ ಉಸ್ತುವಾ–ರಿಗಳಾಗುತ್ತಿದ್ದಾರೆ ಎನ್ನಲಾಗುತ್ತಿದೆ ಅವರು ನಮ್ಮ ಜಿಲ್ಲೆಯವರಲ್ಲ ಅವರು ಕಾರವಾರ

ಜಿಲ್ಲೆಯ ಯವರು ಪರಿಸರ ನಾಶವಾದರೆ ಸುಮ್ಮನೆ ಇರುತ್ತಾರೆ ಎಂದು ಸಾಮಾಜಿಕ ಹೋರಾಟಗಾರರು ಹಾಗೂ ಪ್ರಗತಿಪರ ರೈತರು ಸುತ್ತ ಮುತ್ತಲಿನ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

–ಮಂಜುನಾಥಗೌಡ ಪಾಟೀಲ

# ಅಮರ ಶಿಲ್ಪಿ ಜಕಣಾಚಾರಿ ಜಯಂತಿ



ಶಿಗ್ಗಾಂವ: ತಾಲ್ಲೂಕಿನ ಅತ್ತಿಗೇರಿ ಗ್ರಾಮದ ಗ್ರಾಮ ದೇವಿ ದೇವಸ್ಥಾನದಲ್ಲಿ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಜನ್ಮದಿನವನ್ನು ಬುಧವಾರ ಆಚರಿಸಲಾಯಿತು. ಗ್ರಾಮ ಪಂಚಾಯತಿ ಅಧ್ಯಕ್ಷರಾದ ಗೀತಾ ಮಂಡಿಗನಾಳ ಅಮರ ಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ದೀಪ ಬೆಳಗಿಸಿ ಉದ್ಘಾಟಿಸಿದರು, ಅಮರ ಶಿಲ್ಪಿ ಜಕಣಾಚಾರಿ ಅವರು ರೂಪಿಸಿದ ಅದ್ಭುತ ಕಲಾಕೃತಿಗಳು ಇಂದಿಗೂ ನಮ್ಮನ್ನು ಬೆರಗುಗೊಳಿಸುತ್ತವೆ. ಇಂತಹ ಕಲೆ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ನಿಂಗಪ್ಪ ಭಿ ಬಾರಕೇರ ಹೇಳಿದರು ಜಗತ್ತಿನ ಅದ್ಭುತ ಶಿಲ್ಪಗಳ ಸಾಲಿನಲ್ಲಿ ನಿಲ್ಲುವ ಜಕಣಾಚಾರಿ ಅವರು ಬೇಲೂರು ಮತ್ತು ಹಳೇಬೀಡು ಸೇ–ರಿದಂತೆ ಇತರ ಸ್ಥಳಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ಕಲಾಕೃತಿಗಳನ್ನು ನೋಡುವುದೇ ಒಂದು ಸೌಭಾಗ್ಯವೆಂದು ಸಾಹಿತಿ ಮೌನೇಶ ಸ ಬಡಿಗೇರ ಹೇಳಿದರು.

ಮಾಡುವ ಕೆಸದ ಬಗ್ಗೆ ತಿಳಿವಳಿಕೆ, ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಯಶಸ್ಸು ಲಭಿಸುತ್ತದೆ ಎಂದು ವಿಶ್ವ ಕರ್ಮದ ಮುಖಂಡರಾದ ರಮೇಶ ಬಡಿಗೇರ ನುಡಿದರು, ಪ್ರಾಸ್ತಾವಿಕ ವಾಗಿ ಮಾತಾನಾಡಿದ ಕವಿ ಶಂಕರ ಬಡಿಗೇರ ಅವರು ನಮ್ಮೊಳಗಿನ ಕಲೆಯನ್ನು ನಾವು ಗುರುತಿಸಿದರೆ ಮಾತ್ರ ಸಮಾಜ ನಮ್ಮನ್ನು ಗುರುತಿಸುತ್ತದೆ ಎಂದು ಹೇಳಿದರು. ನಂತರದಲ್ಲಿ ಸಾಧಕರನ್ನು ಸ್ಮರಣೆ ಮಾಡಿದರಷ್ಟೇ ಸಾಲದು. ಅವರ ಗುಣ ಮತ್ತುಬೆಳೆದು ಬಂದ ಪರಿಶ್ರಮದ ಘಟನೆಗಳನ್ನ ತಿಳಿದು ಜೀವನದಲ್ಲಿ ಅಳವಡಿಸಿಕೊಳ್ಳುದು ಅತೀ ಮುಖ್ಯ ವೆಂದು ಮೈಲಾರೆಪ್ಪ ಕಮ್ಮಾರ ಹೇಳಿದರು.

ಗ್ರಾಪಂ ಸದಸ್ಯರಾದ ಸೋಮಪ್ಪ ಭೂಸರಡ್ಡಿ , ನಿಂಗಪ್ಪ ಬಾರ್ಕಿ ಸೇರಿದಂತೆ ಗುರುಶಿದ್ದಗೌಡ ಪಾಟೀಲ್, ನಿಂಗಪ್ಪ ಜವಳಿ,ಶಂಬಣ್ಣ ಕಮ್ಮಾರ, ಕಲ್ಲಪ್ಪ ಬಡಿಗೇರ, ಶಂಕ್ರಪ್ಪ ಕಮ್ಮಾರ,ನಿಂಗಪ್ಪ ಬಡಿಗೇರ, ಮಂಜುನಾಥ ಬಡಿಗೇರ, ದೇವಪ್ಪ ಬಡಿಗೇರ, ಬಡಿಗೇರ,ದೇವಪ್ಪ ಬಡಿಗೇರ, ವೀರನಗೌಡ ಪಾಟೀಲ್, ಶಿವರುದ್ರಪ್ಪ ಬಡಿಗೇರ, ತೇಜಸ್ವರ ಕಮ್ಮಾರ ಹಾಗೂ ವಿಶ್ವ ಕರ್ಮದ ಹಿರಿಯರು ,ಕಿರಿಯರು ,ಊರಿನ ಗ್ರಾಮಸ್ಥರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ವಿನಾಯಕ ಬಡಿಗೇರ ನಿರೂಪಿಸಿ, ವಂದಿಸಿದರು

–ಮಂಜುನಾಥಗೌಡ ಪಾಟೀಲ

# ಕೆರಗೋಡಿ : ರಂಗಾಪುರ ಶ್ರೀ ಮಠಕ್ಕೆ ಉತ್ತರಾಧಿಕಾರಿಗಳ ನೇಮಕ




ತುಮಕೂರು– ಕಲ್ಪತರು ನಾಡೆಂದೇ ಪ್ರಸಿದ್ಧವಾದ ತಿಪಟೂರು ತಾಲ್ಲೂಕು ಕೇಂದ್ರದಿಂದ ಸುಮಾರು 5 ಕಿಲೋ ಮೀಟರ್ ದೂರದಲ್ಲಿರುವ ಕೆರಗೋಡಿ–ರಂಗಾಪುರ ಸುಕ್ಷೇತ್ರ ಶ್ರೀ ಮಠವು ಇಲ್ಲಿಯವರೆಗೆ ಏಳು ಜನ ಶ್ರೀಗಳನ್ನು ಕಂಡಿದ್ದು , ಏಳನೇ ಶ್ರೀಗಳಾದ ಗುರುಪರದೇಶೀಕೇಂದ್ರ ಸ್ವಾಮಿಗಳು ಸುಕ್ಷೇತ್ರದ ಎಂಟನೇ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ. ಶ್ರೀ ಮಠಕ್ಕೆ ಉತ್ತರಾಧಿಕಾರಿ ಆಯ್ಕೆ ಬಗ್ಗೆ ಯೋಚಿಸುತ್ತಿದ್ದ ಹಾಲಿ ಶ್ರೀಗಳು , ಶ್ರೀ ಮಠದಲ್ಲಿ ಪ್ರಸಿದ್ಧ ಗುರು ಸಪ್ತಾಹ ನಡೆಯುತ್ತಿರುವ ಈ ಸಂದರ್ಭದಲ್ಲಿ ರಂಗಾಪುರ ಶ್ರೀ ಮಠದ ಮನೆ ವಂಶಸ್ಥರಾದ ದ. ಏಜೆಂಟ್ ಶಿವನಂಜಪ್ಪನವರ ಮೂರನೇ ಪುತ್ರ ಶರಣ ಶ್ರೀ ರೇಣುಕಾರಾಧ್ಯ ಹಾಗೂ ಶರಣೆ ಶಂಕರಮಣಿ ಇವರ ದ್ವಿತೀಯ ಪುತ್ರ ಶರಣ ಷಣ್ಮುಖಸ್ವಾಮಿ (35) ರವರನ್ನು ಆಯ್ಕೆ ಮಾಡಿದ್ದಾರೆ.

ಕೆರಗೋಡಿ–ರಂಗಾಪುರ ಸುಕ್ಷೇತ್ರದ ಶ್ರೀ ಮಠವು ನಿತ್ಯ ತ್ರಿವಿಧ ದಾಸೋಹವನ್ನು ನಡೆಸಿಕೊಂಡು ಬಂದಿದ್ದು, ಹಲವಾರು ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿ ಜಾತಿ–ಧರ್ಮದ ಭೇದವಿಲ್ಲದೆ ಬಡ ಅನಾಥ ಮಕ್ಕಳಿಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಲು ಸವಕಾಶ ಮಾಡಿಕೊಟ್ಟಿದೆ. ಶ್ರೀ ಮಠದಲ್ಲಿ ವಿದ್ಯಾಭ್ಯಾಸ ಮಾಡಿದ ಅದೆಷ್ಟೋ ಜನ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧಕರಾಗಿ ಹೊರ ಹೊಮ್ಮಿದ್ದಾರೆ. ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಉತ್ತಮ ಅಧಿಕಾರಿಗಳಾಗಿ, ನಾಯಕರಾಗಿ ಸೇವೆ ಸಲ್ಲಿಸಿ ಶ್ರೀ ಮಠಕ್ಕೆ ಒಳ್ಳೆಯ ಹೆಸರನ್ನು ತಂದಿದ್ದಾರೆ.ಸಮಾಜದಲ್ಲಿ ಯಾರು ಹಸಿವಿನಿಂದ ಇರಬಾರದೆಂಬ ಆಶಯದಂತೆ ಶ್ರೀ ಮಠದಲ್ಲಿ ನಿತ್ಯ ಅನ್ನ ದಾಸೋಹ ನಡೆಯುತ್ತಿದ್ದು ನಿತ್ಯ ಸಾವಿರಾರು ಜನ ಭಕ್ತರು ವಿದ್ಯಾರ್ಥಿಗಳು ಪ್ರಸಾದ ಸ್ವೀಕರಿಸುತ್ತಾರೆ.

ಕೆರಗೋಡೂ–ರಂಗಾಪುರ ಶ್ರೀ ಮಠವು ಧಾರ್ಮಿಕ ಕ್ಷೇತ್ರದಲ್ಲಿ ಅಗಾದವಾದ ಸೇವೆ ಸಲ್ಲಿಸುತ್ತುದ್ದು, ಶ್ರೀ ಕ್ಷೇತ್ರದಲ್ಲಿ ಶಿವ ಹಾಗೂ ವಿಷ್ಣುವಿನ ಆರಾಧನೆ ನಡೆಯುವುದು ವಿಶೇಷ. ಶ್ರೀ ಕ್ಷೇತ್ರಕ್ಕೆ ಶ್ರೀ ಶಂಕರೇಶ್ವರ ಸ್ವಾಮಿ ಹಾಗೂ ಶ್ರೀ ರಂಗನಾಥ ಸ್ವಾಮಿ ಕ್ಷೇತ್ರಾಧಿಪತಿಗಳಾಗಿದ್ದಾರೆ.ಶ್ರೀ ಮಠದ ಆರು ಜನ ಹಿರಿಯ ಸ್ವಾಮಿಗಳ ಗದ್ದುಗೆ ಇದ್ದು ನಿತ್ಯ ಪೂಜೆ ನಡೆಯುತ್ತದೆ. ಶ್ರೀ ಮಠದ ಉರಿಗದ್ದುಗೆ ರಾಜ್ಯಾದ್ಯಂತ ಪ್ರಸಿದ್ಧವಾಗಿದ್ದು ಸ್ಥಳೀಯವಾಗಿ ನ್ಯಾಯ ತೀರ್ಮಾನದ ಸ್ಥಳವೂ ಹೌದು.



2012 ರಲ್ಲಿ 839 ನೇ ಸಿದ್ಧರಾಮ ಜಯಂತಿ ಕಾರ್ಯಕ್ರಮದ ಆತಿಥ್ಯವು ಶ್ರೀ ಮಠಕ್ಕೆ ಸಿಕ್ಕಿದ್ದು, ಈ ಕಾರ್ಯಕ್ರಮವನ್ನು ಬಹಳ ಅದ್ದೂರಿಯಾಗಿ, ಯಶಸ್ವಿಯಾಗಿ ನಡೆಸಲಾಗಿತ್ತು. ಇದರ ಫಲವಾಗಿ ಈ ವರ್ಷದ 849 ನೇ ಸಿದ್ಧರಾಮ ಜಯಂತಿ ಕಾರ್ಯಕ್ರಮದ ಆತಿಥ್ಯವು ಶ್ರೀ ಮಠಕ್ಕೆ ದೊರಕಿದ್ದು, ಕೋವಿಡ್ ಮಹಾಮಾರಿಯ ಆತಂಕದಿಂದ ಕಾರ್ಯಕ್ರಮವನ್ನು ಸರ್ಕಾರವು ರದ್ದು ಮಾಡಿತು. ಮುಂದಿನ ವರ್ಷದ 850 ನೇ ಸಿದ್ಧರಾಮ ಜಯಂತಿ ಕಾರ್ಯಕ್ರಮ ಶ್ರೀ ಮಠದಲ್ಲಿ ನಡೆಯಬಹುದೆಂಬ ಮಾಹಿತಿ ಇದ್ದು, ಶ್ರೀ ಮಠದ ಭಕ್ತರು ಈ ಕಾರ್ಯಕ್ರಮವನ್ನು ಸಂಭ್ರಮದಿಂದ ನಡೆಸಲು ಉತ್ಸುಕರಾಗಿದ್ದಾರೆ.

ವಿಶೇಷ ಪೂಜೆ: ಏಳನೇ ಶ್ರೀಗಳಾದ ಗುರುಪರದೇಶಿಕೇಂದ್ರ ಮಹಾ ಸ್ವಾಮಿಗಳು ಭಾನುವಾರ ಮಠದ ಉತ್ತರಾಧಿಕಾರಿ ಪೂರ್ವಾಶ್ರಮದ ಹೆಸರಾದ ಷಣ್ಮುಖಸ್ವಾಮಿಯವರ ಮನೆಗೆ ತೆರಳಿ ವಿಧಿ ವಿಧಾನ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿ ಆಶೀರ್ವಚನ ನೀಡಿ ಮನೆಯವರೆಲ್ಲರ ಪೂರ್ಣ ಸಮ್ಮತಿಯೊಂದಿಗೆ ಷಣ್ಮುಖಸ್ವಾಮಿಯವರನ್ನು ಶ್ರೀ ಮಠಕ್ಕೆ ಕರೆತಂದರು. ಈ ಪ್ರಯುಕ್ತ ಶ್ರೀ ಶಂಕರೇಶ್ವರ ಸ್ವಾಮಿ, ಶ್ರೀ ರಂಗನಾಥ ಸ್ವಾಮಿ ದೇವಾಲಯಗಳಿಗೆ ಹಾಗೂ ಮಠದ ಹಿರಿಯ ಶ್ರೀಗಳ ಗದ್ದುಗೆಯಲ್ಲಿ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನೂರಾರು ಭಕ್ತರು ಹಾಜರಿದ್ದು ಶ್ರೀಗಳ ಕೃಪೆಗೆ ಪಾತ್ರರಾದರು.

ವರದಿ– ಮನು ಎಸ್ ಎಂ

# ಪಡಿತರ ಅಕ್ಕಿ ಅಕ್ರಮ ಮಾರಾಟಕ್ಕೆ ಯತ್ನ : ಗ್ರಾಮಸ್ಥರ ಪ್ರತಿಭಟನೆ : ತಹಶೀಲ್ದಾರ್ – ಆಹಾರ ನಿರೀಕ್ಷಕರ ದಾಳಿ




ಭದ್ರಾವತಿ ಸಿದ್ದಾಪುರ ತಾಂಡದಲ್ಲಿರುವ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಮಾರಾಟ ಮಾಡಲು ಯತ್ನಿಸುತ್ತಿದ್ದಾಗ ತಹಶೀಲ್ದಾರ್ ಪ್ರದೀಪ್ ಆರ್. ನಿಕ್ಕಮ್ ಮತ್ತು ನಗರ ಆಹಾರ ನಿರೀಕ್ಷಕ ಎ.ಟಿ ಬಸವರಾಜ್ ನೇತೃತ್ವದ ತಂಡ ದಾಳಿ ನಡೆಸಿದ್ದಾರೆ.

ಸಿದ್ದಾಪುರ ತಾಂಡದಲ್ಲಿರುವ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿ ಮಾರಾಟಕ್ಕೆ ಯತ್ನಿಸುತ್ತಿದ್ದಾಗ ಗ್ರಾಮಸ್ಥರು ತಡೆದು ಪ್ರತಿಭಟನೆ ನಡೆಸಿದರು.

ನ್ಯಾಯಬೆಲೆ ಅಂಗಡಿ ಮಾಲೀಕ ಯೋಗೇಶ್‌ನಾಯ್ಕ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ನಂತರ ಬೇರೆ ಚೀಲಗಳಿಗೆ ತುಂಬಿ ಮಾರಾಟ ಮಾಡಲು ಯತ್ನಿಸುತ್ತಿದ್ದಾನೆಂಬ ದೂರು ಗ್ರಾಮಸ್ಥರಿಂದ ಬಂದ ಹಿನ್ನಲೆಯಲ್ಲಿ ಸ್ಥಳಕ್ಕೆ ತಹಸೀಲ್ದಾರ್ ಪ್ರದೀಪ್ ಆರ್ ನಿಕ್ಕಮ್ ಮತ್ತು ನಗರ ಆಹಾರ ನಿರೀಕ್ಷಕ ಎ.ಟಿ ಬಸವರಾಜ ನೇತೃತ್ವದ ತಂಡ ದಾಳಿ ನಡೆಸಿದೆ.

ದಾಳಿ ನಡೆಸಿದ ಸಂದರ್ಭದಲ್ಲಿ ನ್ಯಾಯಬೆಲೆ ಅಂಗಡಿಯಲ್ಲಿ ಒಟ್ಟು 248 ಚೀಲ ಅಕ್ಕಿ ಹಾಗೂ ಅಂಗಡಿ ಮಾಲೀಕ ಯೋಗೇಶ್‌ನಾಯ್ಕ ಮನೆಯಲ್ಲಿ ದಾಸ್ತಾನು ಮಾಡಲಾಗಿದ್ದ 136 ಚೀಲ ಅಕ್ಕಿ ಮತ್ತು ಅಕ್ರಮವಾಗಿ ಮಾರಾಟ ಮಾಡಲು ಬುಲೆರೋ ವಾಹನದಲ್ಲಿ ತುಂಬಲಾಗಿದ್ದ ಸುಮಾರು 30 ಚೀಲ ಅಕ್ಕಿ ಪತ್ತೆಯಾಗಿದೆ. ಈ ತಿಂಗಳು ನ್ಯಾಯಬೆಲೆ ಅಂಗಡಿಗೆ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲು 158 ಕ್ವಿಂಟಲ್ 87 ಕೆ.ಜಿ ಅಕ್ಕಿ ( 50 ಕೆ.ಜಿ ತೂಕದ ಒಟ್ಟು 318 ಚೀಲ) ಕೆಎಫ್‌ಸಿಎಸ್‌ಸಿ ಗೋದಾಮಿನಿಂದ ಸರಬರಾಜು ಮಾಡಲಾಗಿದೆ. ಜನವರಿ ತಿಂಗಳಿನಲ್ಲಿ ವಿತರಣೆಯಾಗಿ ಉಳಿದಿರುವ ಅಕ್ಕಿ ಮತ್ತು ಸರಬರಾಜು ಮಾಡಲಾಗಿರುವ ಅಕ್ಕಿ ಎರಡನ್ನು ಒಟ್ಟು ಗೂಡಿಸಿ ಲೆಕ್ಕ ಹಾಕಿದಾಗ ವ್ಯತ್ಯಾಸ ಕಂಡು ಬಂದಿದೆ. ಈ ಹಿನ್ನಲೆಯಲ್ಲಿ ನಗರ ಆಹಾರ ನಿರೀಕ್ಷಕ ಎ.ಟಿ ಬಸವರಾಜ್ ನ್ಯೂಟೌನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರಿನ ಆಧಾರದ ಮೇರೆಗೆ ಪೊಲೀಸರು ಅಕ್ಕಿ ಸಾಗಾಣಿಕೆಗೆ ಬಳಸಿದ್ದ ಬುಲೇರೋ ವಾಹನ ಮತ್ತು ವಾಹನದಲ್ಲಿ ಅಕ್ರಮ ತುಂಬಲಾಗಿದ್ದ 30 ಚೀಲ ಅಕ್ಕಿಯನ್ನು ವಶಕ್ಕೆ ಪಡೆದಿದ್ದಾರೆ. ಅಂಗಡಿ ಮಾಲೀಕ ಯೋಗೇಶ್‌ನಾಯ್ಕ ಮತ್ತು ಬುಲೇರೋ ವಾಹನ ಚಾಲಕ ತಲೆ ಮರೆಸಿಕೊಂಡಿದ್ದು, ಅಂಗಡಿ ಮಾಲೀಕ ಯೋಗೇಶ್‌ನಾಯ್ಕ ಸಹೋದರರನ್ನು ಪೊಲೀಸರು ಬಂಧಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–8
ದಿನಾಂಕ: 16–02–2022 । ಪುಟಗಳು: 16

# ಕೆ ಎಸ್ ಆರ್ ಟಿ ಸಿ ಬಸ್ಸಿಗಾಗಿ ಹಪಹಪಿಸುತ್ತಿರುವ ಹಿರೇಗುಂಜಳ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರು



ಕುಂದಗೋಳ– ತಾಲೂಕಿನ ಹಿರೇಗುಂಜಳ ಗ್ರಾಮಕ್ಕೆ ಕರೋನ ಲಾಕ್ ಡೌನ್ ತೆರವಾದ ನಂತರದಿಂದ ಸರಿಯದ ಬಸ್ ಸೇವೆ ಆರಂಭಗೊಂಡಿಲ್ಲ. ಬರುವ ಬಸ್ಸುಗಳು ಸರಿಯಾದ ಸಮಯಕ್ಕೆ ಬರುವುದಿಲ್ಲ. ಹಲವು ಬಸ್ಸುಗಳು ಇಲ್ಲಿಯವರೆಗೂ ಸಂಚಾರವನ್ನೇ ಆರಂಭಿಸಿಲ್ಲ. ವಿದ್ಯಾರ್ಥಿಗಳು ಬಸ್ಸು ಯಾವಾಗ ಬರುತ್ತೋ ಅಂತ ಕಾಯುತ್ತಾ ಕುಳಿತಿರುತ್ತಾರೆ.

ಮುಂಜಾನೆಯ ಬಸ್ಸು ಹಿರೇಗುಂಜಳ ಗ್ರಾಮದಿಂದ ಹುಬ್ಬಳ್ಳಿ ನಗರದತ್ತ ಹೋಗುತ್ತದೆ, ಆದಾದ ಬಳಿಕ ಹುಬ್ಬಳ್ಳಿ ನಗರಕ್ಕೆ ತೆರಳಲು ಸುಮಾರು ಮೂರ–ರಿಂದ ಮೂರೂವರೆ ಗಂಟೆ ಕಾಯಬೇಕು ಕಾದರೂ ಕೂಡಾ ಬಸ್ಸುಗಳು ಬರುತ್ತವೆ ಎಂಬುವ ನಂಬಿಕೆಯೇ ಇಲ್ಲ. ಇದರಿಂದ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಬೆಳಿಗ್ಗೆ 9 ಗಂಟೆಗೆ ಅಥವಾ 10 ಗಂಟೆಗೆ ವಿದ್ಯಾರ್ಥಿಗಳ ತರಗತಿಗಳು ಪ್ರಾರಂಭ ವಾಗುತ್ತವೆ. ಆದರೆ ಅವರು ಬೆಳಿಗ್ಗೆ 6:30 ಕ್ಕೆ ಹೋಗುವ ಬಸ್ಸಿಗೆ ಹೋಗಿ ನಗರದಲ್ಲಿ ಕಾಲ ಹರಣ ಮಾಡಬೇಕಾಗುತ್ತದೆ. ಒಂದು ವೇಳೆ ಬಸ್ಸು ತುಸು ಬೇಗನೆ ಗ್ರಾಮದಿಂದ ಹೊರಟು ಹೋದರೆ ಮುಗೀತು ನೋಡಿ ಅಂದಿನ ಅವರ ತರಗತಿಗಳು ನೀರಲ್ಲಿ ತರ್ಪಣ ಬಿಟ್ಟಹಾಗೆ, ಕೇಳಲು ಯಾವ ಕ್ಲಾಸು ಇರುವದಿಲ್ಲ. ನಂತರದ 10 ಗಂಟೆಯ ಬಸ್ಸಿಗೆ ಹೋದರೆ ಎಲ್ಲ ತರಗತಿಗಳು ಮುಗಿದು ಹೋಗಿರುತ್ತವೆ. ವಿದ್ಯಾರ್ಥಿಗಳ ಯಾವ ತಪ್ಪು ಇಲ್ಲದಿದ್ದರು ಸಹ ಬಸ್ಸಿನ ಕಾರಣದಿಂದ ತಮ್ಮ ತರಗತಿಗಳಿಂದ ವಂಚಿತರಾಗುತ್ತಿದ್ದಾರೆ.

ಹುಬ್ಬಳ್ಳಿ ಕಡೆಗೆ ಗ್ರಾಮದಿಂದ ಬೆಳಿಗ್ಗೆ 7 ಮತ್ತು 8 ಗಂಟೆಗೆ ಎರಡು ಬಸ್ಸುಗಳು ಸಂಚ–ರಿಸುತ್ತಿದ್ದವು. ಒಂದು ಹುಬ್ಬಳ್ಳಿ ಗ್ರಾಮೀಣ ಘಟಕದ ಬಸ್ಸು, ಇನ್ನೊಂದು ಲಕ್ಷ್ಮೇಶ್ವರ ಘಟಕದ ಬಸ್ಸು. ಇವೆರಡೂ ಬಸ್ಸುಗಳು ಸಹ ಸಂಚಾರ ಸ್ಥಗಿ–ತಗೊಳಿಸಿವೆ. ಇದರಿಂದ ವಿದ್ಯಾರ್ಥಿಗಳು ಅಷ್ಟೇ ಅಲ್ಲದೆ ಊರಿನ ಜನರು ಸಹ ತೊಂದರೆಗೆ ಒಳಗಾಗುತ್ತಿದ್ದಾರೆ. ತಮ್ಮ ಮತ್ತು ಕುಟುಂಬದ ಉಪಜೀವನಕ್ಕಾಗಿ ಹುಬ್ಬಳ್ಳಿ ನಗರಕ್ಕೆ ಬಂದು ಕೆಲಸ ಮಾಡುವಂತಹ ವ್ಯಕ್ತಿಗಳಿಗೆ, ಆಸ್ಪತ್ರೆ ಅಥವಾ ಇನ್ನಾವುದೋ ಕೆಲಸಕ್ಕಾಗಿ ಊರಿಗೆ ಪ್ರಯಾಣ ಮಾಡುವಂತಹ ಪ್ರಯಾಣಿಕ–ರಿಗೂ ಕೂಡ ಬಸ್ಸಿನ ಬಿಸಿ ತಟ್ಟಿದೆ.




ಇದರ ಬಗ್ಗೆ ಹಲವು ಸಾರಿ ಹಿರೇಗುಂಜಳ ಪಂಚಾಯತಿ ಅಧ್ಯಕ್ಷರ ಗಮನಕ್ಕೆ ತರಲಾಗಿದೆ ಆದರೆ ಅವರು ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವದು ಆಶ್ಚರ್ಯ ಎನಿಸುತ್ತಿದೆ. ಪಂಚಾಯತಿಯ ಎಲ್ಲ ಮುಖಂಡರು ಒಗ್ಗೂಡಿ ಬೇಗನೆ ಬಸ್ಸಿನ ಅನಾನೂಕೂಲತೆಯನ್ನು ಸರಿಪಡಿಸುವತ್ತ ಗಮನ ಹರಿಸಬೇಕು. ಇಲ್ಲವಾದರೆ ವಿದ್ಯಾರ್ಥಿಗಳ ಮತ್ತು ಊರಿನ ಜನರ ಕೆಂಗಣ್ಣಿಗೆ ಗು–ರಿಯಾಗುವದಂತೂ ಶತಸಿದ್ಧ.

ಅಲ್ಲದೆ ಈಗಿರುವ ಬಸ್ಸುಗಳು ಕೂಡ ಸರಿಯಾದ ಸಮಯಕ್ಕೆ ಬರುವದಿಲ್ಲ. ಅವುಗಳು ಬಂದ ವೇಳೆಯಲ್ಲೇ ಸರ್ರನೆ ಓಡಿ ಹೋಗಿ ಹತ್ತಿಕೊಳ್ಳಬೇಕು. ವಿದ್ಯಾರ್ಥಿಗಳು ಬೆಳಿಗ್ಗೆ ಬೇಗ ಎದ್ದು ಇರುವದನ್ನು ಅಲ್ಪಸ್ವಲ್ಪ ತಿಂದು ಹೋಗಿ ತರಗತಿಗಳನ್ನು ಕೇಳಿ, ಹೊಟ್ಟೆ ಹಸುವಿನಿಂದ ಮರಳಿ ಬೇಗನೆ ಊರಿಗೆ ಹೋಗಬೇಕೆಂದು ಹುಬ್ಬಳ್ಳಿ ನಗರ ಬಸ್ ನಿಲ್ದಾಣಕ್ಕೆ ಬಂದರೆ ಅಲ್ಲಿಯೂ ಇದೆ ಕಥೆ. ಅಲ್ಲಿಯೂ ಸಹ ಬಸ್ಸಿಗಾಗಿ ಕಾಯುತ್ತಾ ಕುಳಿತು ಕೊಳ್ಳಬೇಕಾಗುತ್ತದೆ. ಯಾವ ಬಸ್ಸು ಸರಿಯಾದ ಸಮಯಕ್ಕೆ ಸರಿಯಾಗಿ ಬಿಡುವುದೇ ಇಲ್ಲ. ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಅಧಿಕಾರಿಗಳು, ಬಸ್ ಚಾಲಕ ಮತ್ತು ನಿರ್ವಾಹಕರು ಬಸ್ಸಿನ ಸಮಯದ ಪರಿಪಾಲನೆ ಮಾಡುವದರಲ್ಲಿ ಎಡವುತ್ತಿರುವದು ಪ್ರತ್ಯಕ್ಷವಾಗಿ ಕಣ್ಣೆದುರಿಗೆ ಕಾಣಸಿಗುತ್ತದೆ.

ಸರಕಾರಿ ಸ್ವಾಮ್ಯದ ಬಸ್ಸುಗಳ ಸ್ಥಗಿತ ಹಾಗೂ ಸಮಯದ ವಿಳಂಬದಿಂದ ಹಿರೇಗುಂಜಳ ಗ್ರಾಮದ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರು ಬಹಳ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ತೊಂದರೆಯಡೆ ಗ್ರಾಮ ಪಂಚಾಯತಿ ಮತ್ತು ಕೆ ಎಸ್ ಆರ್ ಟಿ ಸಿ ಗಮನ ಹರಿಸಿ ಆಗಿರುವ ತೊಂದರೆಯನ್ನು ಸರಿಪಡಿಸಬೇಕು.

–ಪ್ರವೀಣ್ ಎಸ್ ಕಾಲವಾಡಮಠ

# ಊರಿನ ಗಟಾರಗಳು ತುಂಬಿ ಹರಿಯುತ್ತಿದ್ದರೂ ಗಮನಹರಿಸದ ಅಧಿಕಾರಿಗಳು







ಪಾವಗಡ : ತಾಲೂಕಿನ ರಂಗ ಸಮುದ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ ದೊಡ್ಡೇನಹಳ್ಳಿಯಲ್ಲಿ ಊರಿನ ಗಟಾರಗಳು ತುಂಬಿ ನೀರು ರಸ್ತೆ ತುಂಬೆಲ್ಲಾ ಆವರಿಸಿತ್ತು. ಒಬ್ಬ ಗ್ರಾಮ ಪಂಚಾಯ್ತಿ ಸದಸ್ಯರು ಇದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತಿದ್ದರೂ ಸಹ ಇವರಿಗೆ ಗ್ರಾಮಪಂಚಾಯ್ತಿ ಪಿಡಿಒ ತಿಪ್ಪಣ್ಣರವರು ಈ ಬಗ್ಗೆ ಗಮನಹರಿಸದೆ, ಹಾರಿಕೆಯ ಉತ್ತರ ಜಾರಿಕೊಳ್ಳುತ್ತಾರೆ ಸಾರ್ವಜನಿಕರಿಗೆ ಸರಿಯಾಗಿ ಸಹಕರಿಸುತ್ತಿಲ್ಲ ಎಂಬ ಅರೋಪ ಕೇಳಿಬರುತ್ತಿತ್ತು.

"ನಮ್ಮ ಕರುನಾಡ ಕಂದ ವರದಿಗಾರರು ದೂರವಾಣಿ ಮೂಲಕ ಸಂಪರ್ಕಿಸಿ ಪಂಚಾಯ್ತಿ ಚರಂಡಿಗಳ ಅವ್ಯವಸ್ಥೆ ಬಗ್ಗೆ ಪ್ರಸ್ತಾಪಿಸಿದ ಮರು ದಿನ ಎಚ್ಚೆತ್ತಾ ಅಧಿಕಾರಿಗಳು"

ಹೌದು ಪಾವಗಡ ತಾಲೂಕಿನ ರಂಗಸಮುದ್ರ ಗ್ರಾಮಪಂಚಾಯ್ತಿ ವ್ಯಾಪಿಯ ದೋಡ್ಡೆನಹಳ್ಳಿ ಯಲ್ಲಿ ಚರಂಡಿ ಸ್ವಚ್ಚತೆ ಮಾಡಿಸದೆ ಪಂಚಾಯ್ತಿ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ ಎಂದು ದೋಡ್ಡನಹಳ್ಳಿ ಗ್ರಾಮಸ್ಥರು ವರದಿಗಾರರಿಗೆ ಊರಿನ ಅವ್ಯವಸ್ಥೆ ಮತ್ತು ಅಧಿಕಾರಿಗಳ ಕಾರ್ಯ ವೈರಿಗಳ ಬಗ್ಗೆ ವಿವರಿಸಿದರು ಅವರ ಸಮಸ್ಯೆಯನ್ನು ಕೇಳಿ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ನಮ್ಮ ವರದಿಗಾರರು ಸ್ಥಳದಲ್ಲಿಯೇ ಪಂಚಾಯತಿ ಕಅಂ ಗಳಾದ ತಿಪ್ಪಣ್ಣನವರನ್ನು ಸಂಪರ್ಕಿಸಿ ಪಂಚಾಯತಿಯ ದೋಡ್ಡೆನಹಳ್ಳಿಯ ಸಮಸ್ಯ ಬಗ್ಗೆ ಮಾತನಾಡಿ ಈ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಈ ಕೂಡಲೇ ಇಲ್ಲಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಅಲ್ಲಿನ ಚಿತ್ರಣವನ್ನು ಅಧಿಕಾರಿಗಳಿಗೆ ತಿಳಿಸಿದ ನಂತರ ಎಲ್ಲರ ಮನವಿಗೆ ಎಚ್ಚೆತ್ತ ಅಧಿಕಾರಿಗಳು ಮರುದಿನ ಸ್ವಚ್ಚತಾ ಕಾರ್ಯ ಪ್ರಾರಂಭಿಸಿ ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದರು.

# ನ್ಯಾಯಧೀಶ ಮಲ್ಲಿಕಾರ್ಜುನ ಗೌಡ ವಿರುದ್ಧ ಬೃಹತ್ ಪ್ರತಿಭಟನೆ




ಶಹಾಪುರ–ಸಂವಿಧಾನ ಶಿಲ್ಪಿ ಡಾ॥ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ರಾಯಚೂರು ಜಿಲ್ಲಾ ನ್ಯಾಯಧೀಶರಾದ ಮಲ್ಲಿಕಾರ್ಜುನ ಗೌಡ ಅವರನ್ನು ನ್ಯಾಯಾಧೀಶರ ಹುದ್ದೆಯಿಂದ ವಜಾ ಮಾಡಬೇಕೆಂದು ಒತ್ತಾಯಿಸಿದರು.

ಪ್ರಗತಿ ಪರ ಗೋರ ಸೇನಾ ಸಂಘಟನೆಗಳ ಒಕ್ಕೂಟ ಮತ್ತು ದಲಿತ ಸಂಘರ್ಷ ಭೀಮ್ ಆರ್ಮಿ ಸಂಘಟನೆಗಳ ವತಿಯಿಂದ ಜಂಟಿಯಾಗಿ ಶಹಾಪುರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ರಾಯಚೂರು ಜಿಲ್ಲಾ ನ್ಯಾಯಲಯದ ಅವರಣದಲ್ಲಿ ಜನವರಿ 26 ರಂದು ನಡೆದ ಸಂವಿಧಾನ ದಿನಾಚರಣೆಯ ಗಣರಾಜ್ಯೋತ್ಸವ ದಿನದಿಂದ ರಾಯಚೂರು ಜಿಲ್ಲಾ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡ ಅವರು ನನ್ನ ಅಪ್ಪಣೆ ಇಲ್ಲದೆ ಅಂಬೇಡ್ಕರ್ ರವರ ಭಾವಚಿತ್ರವನ್ನು ಇಡಲಾಗಿದೆ ಅವರ ಭಾವಚಿತ್ರ ತೆಗೆದರೆ ಮಾತ್ರ ನಾನು ಧ್ವಜಾರೋಹಣ ಮಾಡುತ್ತೇನೆ ಇಲ್ಲವಾದರೆ ಮಾಡುವುದಿಲ್ಲ

ಎಂದು ಹೇಳಿ ಅಂಬೇಡ್ಕರ್ ಅವರ ಭಾವಚಿತ್ರವನ್ನು ತಮ್ಮ ಪ್ರಭಾವ ಬಳಿಸಿ ಕಾರ್ಯಕ್ರಮದ ಮುಖ್ಯ ಸ್ಥಳದಿಂದ ತೆಗಸುವ ಮೂಲಕ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ॥ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಅಪಮಾನ ಮಾಡಿರುವುದು ಅಕ್ಷಮ್ಯ ಅಪರಾಧವಾದದ್ದು ಇದೊಂದು ದೇಶ ದ್ರೋಹದ ಕೆಲಸ ಸಂವಿಧಾನ ಓದಿ ಕರ್ತವ್ಯ ನಿರ್ವಹಿಸ ಬೇಕಾದಂತಹ ನ್ಯಾಯಧೀಶರು ಇಂತಹ ಕೆಲಸ ಮಾಡಿರುವುದು ದೇಶ ದ್ರೋಹಿ ಕೆಲಸ ಇಂತಹ ಸಂವಿಧಾನ ವಿರೋಧಿ ಮಲ್ಲಿಕಾರ್ಜುನ ಗೌಡ ಅವರನ್ನು ನ್ಯಾಯಾಧೀಶರ ಹುದ್ದೆಯಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಎಸ್ಸಿ. ಎಸ್ಟಿ.ಓಬಿಸಿ ಕಾಯ್ದೆ ಅಡಿಯಲ್ಲಿ ತೀರ್ಪು ನೀಡಿರುವ ಪ್ರಕರಣಗಳನ್ನು ಮರು ಪರಿಶೀಲನೆಗೆ ಮಾಡಬೇಕು ಎಂದು ನಮ್ಮ ಎರಡು ಸಂಘಟನೆಯ ಮೂಲಕ ಖಂಡಿಸುತ್ತೇವೆ ಎಂದು ಗೋರ ಸೇನಾ ಜಿಲ್ಲಾ ಅಧ್ಯಕ್ಷರು ರಾಮು ಮೇಘವತ್ತಾ ಲೂಕ ಅಧ್ಯಕ್ಷರು ಅನಿಲ್ ಚವ್ಹಾಣ ಹೇಳಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ರಾಮಚಂದ್ರ ರಾಥೋಡ್, ಶಿವರಾಜ್ ದೇವಸೋಥ್, ಪ್ರಕಾಶ್ ಮೇಘವತ್, ಶಶಿಕಾಂತ ಮೂಡ,ಮೇನೇ ಮೇಘವತ್, ಪಾಲ ಗಾಲಾವತ್ ಜಾದವ್ ಬೋಜರಾಜ ದೇವಸಾಥ್,

ದಲಿತ ಸಂಘರ್ಷ ಭೀಮ್ ಆರ್ಮಿ ಜಿಲ್ಲಾ ಅಧ್ಯಕ್ಷರು ಸೈದಪ್ಪ.ಎಂ.ಕಣಜಕರ್, ತಾಲೂಕ ಅಧ್ಯಕ್ಷರಾದ ಬಸಲಿಂಗಪ್ಪ ಕೋಳಿ ಶೀರವಾಳ,ತಾಲೂಕ ಉಪಾಧ್ಯಕ್ಷರು ತವಕಲ್ಲಪ ಅಣಬಿ, ಪ್ರಧಾನ ಕಾರ್ಯದರ್ಶಿ ಶರಣು ಗ್ಯಾಂಗಿನ, ಕಾರ್ಯದರ್ಶಿ ಮಲ್ಲಿಕಾರ್ಜುನ ತಳಗೇರಿ,ಸಂಚಾಲಕರು ರಮೇಶ್ ಸಲಾದಪುರ,ಸಹ ಸಂಚಾಲಕರು ಅಂಬ್ರೇಶ್ ಸಹ ಸಂಚಾಲಕರು,ಖಜಾಂಚಿ ಈರಣ್ಣ ಹಾಲಬಾವಿ ಹಾಜ–ರಿದ್ದರು.

ವರದಿ–ರಾಜಶೇಖರ ಮಾಲಿ ಪಾಟೀಲ ಶಹಾಪುರ

ಕರುನಾಡ ಕಂದ
ಸಂಪುಟ–1 | ಸಂಚಿಕೆ–8
ದಿನಾಂಕ: 16–02–2022 | ಪುಟಗಳು: 16

# ಕರ್ನಾಟಕದ ಅಪರೂಪದ ಮಾದರಿ ಶಾಲೆ




ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಹೊಳಲು ಗ್ರಾಮದ ಸರ್ .ಎಂ .ವಿಶ್ವೇಶ್ವರಯ್ಯ ಪ್ರೌಢಶಾಲೆ ಈ ಒಂದು ಪ್ರೌಢಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ 9 ಜನರು ಸಿಬ್ಬಂದಿಯವರು ಸಂಸ್ಥೆಯು ಕೊಡುವ ಅಲ್ಪ ಪ್ರಮಾಣದ ಗೌರವ ಧನದಲ್ಲಿ ಕೆಲಸ ಮಾಡುತ್ತಿದ್ದು. ಶಾಲೆಯ ಆಡಳಿತ ಮಂಡಳಿಯವರು ಎಲ್ಲಾ ಮಕ್ಕಳಿಗೂ ಸತತವಾಗಿ 19 ವರ್ಷಗಳಿಂದ ಯಾವುದೇ ಫ಼ೀ ಇಲ್ಲದೆ ಡೊನೇಶನ್ ತೆಗೆದುಕೊಳ್ಳದೆ ಉಚಿತವಾಗಿ ಶಾಲಾ ಸಮವಸ್ತ್ರ ಪಠ್ಯಪುಸ್ತಕ ಹಾಗೂ ಬೇರೆ ಬೇರೆ ಊರುಗಳಿಂದ ಬರುವಂತಹ ಬಡ ಮಕ್ಕಳಿಗೂ ವಾಹನ ಸೌಲಭ್ಯ ಮಾಡುವ ಮೂಲಕ ಮಾದರಿಯಾಗಿದ್ದಾರೆ. ಅನುದಾನರಹಿತವಾದರೂ ಈ ಒಂದು ಪ್ರೌಢಶಾಲೆಗೆ ಇನ್ನೂವರೆಗೂ ಸರ್ಕಾರದಿಂದ ಯಾವುದೇ ಸೌಲಭ್ಯ ಸಿಕ್ಕಿಲ್ಲ ಎನ್ನುವುದು ಇಲ್ಲಿ ಕೆಲಸ ಮಾಡುತ್ತಿರುವ ನೊಂದ ಶಿಕ್ಷಕರ ಮಾತಾಗಿದೆ.ಇದರ ಮಧ್ಯೆ ಮಕ್ಕಳಿಗೋಸ್ಕರ ಅವರ ಭವಿಷ್ಯಕ್ಕಾಗಿ ಅವರು ಮಾಡುತ್ತಿರುವ ತ್ಯಾಗ ಬಹಳ ಮುಖ್ಯವಾಗಿದೆ ಅದರಲ್ಲಿ ಇಂಥ ಸ್ಥಿತಿಯಲ್ಲಿ ಮಧ್ಯಾಹ್ನದ ಬಿಸಿ ಊಟಕ್ಕೂ ಸೌಲಭ್ಯ ಕಲ್ಪಿಸಲು 2022 ನೇ ಮಾರ್ಚ್ ತಿಂಗಳಿನಿಂದ ಪ್ರಾರಂಭಿಸಲು ಸಿದ್ದತೆ ನಡೆಸಿರುವುದು

ಸರ್ಕಾರಕ್ಕೆಒಂದು ಸಡ್ಡುಹೊಡೆದಂತಾಗಿದೆ.ಆಡಳಿತ ಮಂಡಳಿಯವರು ಇಂತಹ ವಿಷಯವನ್ನು ಕರ್ನಾಟಕ ರಾಜ್ಯದಲ್ಲಿ ಇಂತಹ ಒಂದು ಶಾಲೆ ಇದೆಯಾ? ಎಂದು ಸರ್ಕಾರಕ್ಕೆ ನಾಚಿಕೆಯಾಗುವಂತಹ ಇಂಥಹ ಸನ್ನಿವೇಶ ಇದಾಗಿದೆ ಸರ್ಕಾರದ ಗಮನಕ್ಕೆ ಮುಟ್ಟಿಸುವಂತಹ ವಿಷಯ ಇದಾಗಿದೆ ಹೊಳಲು,ಮೈಲಾರ, ಹ್ಯಾರಡ, ಡೊಂಬರಳ್ಳಿ,ಹೂವಿನಹಡಗಲಿ ತಾಲೂಕಿನಲ್ಲಿ ಬರುವಂತಹ ಹಲವು ಗ್ರಾಮಗಳಿಂದ ಸರ್ ಎಂ ವಿಶ್ವೇಶ್ವರಯ್ಯ ಪ್ರೌಢಶಾಲೆಗೆ ಹಲವು ವಿದ್ಯಾರ್ಥಿಗಳು ದಿನ ನಿತ್ಯ ಬರುತ್ತಾರೆ.ವಿದ್ಯಾರ್ಥಿಗಳೆಲ್ಲರೂ ಬಡಮಕ್ಕಳೇ ಆಗಿದ್ದಾರೆ. ಆದರೆ ಈ ಸಂಸ್ಥೆಯವರು ಬಡ ಮಕ್ಕಳಿಗೆ ಉಚಿತ ಶಿಕ್ಷಣ ಉಚಿತ ಊಟವನ್ನು ಕೊಡಬೇಕೆಂದು ಸಂಸ್ಥೆಯ ಮ್ಯಾನೇಜ್ಮೆಂಟ್ ದಿಟ್ಟ ನಿರ್ಧಾರವಾಗಿದೆ.ಪಕ್ಕದ ಜಿಲ್ಲೆ ಆಗಿರುವ ಹಾವೇರಿಯ ಹೌಸೀ, ಶ್ಯಾಕಾರ, ಗುತ್ತಲ

ಎಂ .ಜಿ .ತಿಮ್ಮಾಪುರ್ಚೌ,ಡದಾನಪುರ, ಕಂಚರಗಟ್ಟಿ, ಹಲವು ಗ್ರಾಮಗಳಿಂದ ನಮ್ಮ ಒಂದು ಶಾಲೆಗೆ ದಿನನಿತ್ಯ ವಿದ್ಯಾರ್ಥಿಗಳಿಗೆ ಬಸ್ಸಿನ ಅನುಕೂಲ ಸಹ ಮ್ಯಾನೇಜ್ಮೆಂಟ್ ಮಾಡಿ ಬಡ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲ ಮಾಡಿಕೊಡುತ್ತಿದೆ. 19 ವರ್ಷಗಳಿಂದ ಈ ಸಂಸ್ಥೆಯನ್ನು ತುಂಬಾ ಜವಾಬ್ದಾರಿಯುತವಾಗಿ ನಡೆಸಿಕೊಂಡು ಬಂದಿದ್ದಾರೆ ಪ್ರತಿವರ್ಷ 100 ಶೇಕಡಾ 95% ರಿಂದ 98%ರ ಫಲಿತಾಂಶವನ್ನು ಸರ್ ಎಂ ವಿಶ್ವೇಶ್ವರಯ್ಯ ಪ್ರೌಢಶಾಲೆ ತಂದುಕೊಟ್ಟಿದೆ. ಮುಂದಿನ ದಿನಗಳಲ್ಲಾದರೂ ಸರ್ಕಾರ ಹಾಗೂ ಸ್ಥಳೀಯ ದಾನಿಗಳು,ಸಂಘ–ಸಂಸ್ಥೆಗಳು ಇವರಿಗೆ ಸಹಕಾರ ನೀಡಲಿ ಎಂದು ಕರುನಾಡ ಕಂದ ಪತ್ರಿಕೆಯ ಪರವಾಗಿ ಆಶಿಸುತ್ತೇವೆ.

**ಶ್ರೀ ಆರ್ ಕೆ ಗಣಾಚಾರಿ ಎಫ್ ಡಿ ಸಿ**
**ಎಂ. ವಿಶ್ವೇಶ್ವರಯ್ಯ.ಪ್ರೌಢಶಾಲೆ ಹೊಳಲು**
**ತಾ–ಹೂವಿನ ಹಡಗಲಿ ಜಿ–ವಿಜಯನಗರ.**

# ಜಿಲ್ಲಾ ನ್ಯಾಯಧೀಶರ ವರ್ತನೆ ಖಂಡಿಸಿ ಪ್ರತಿಭಟನೆ



ಶಹಾಪುರ : ರಾಯಚೂರು ಜಿಲ್ಲಾ ನ್ಯಾಯಧೀಶರು ಸರ್ಕಾರದ ಹುದ್ದೆಯಲ್ಲಿ ಇದ್ದು ಗುಂಡಾ ವರ್ತನೆ ಮಾಡಿ ಡಾ॥ಬಾಬಾಸಾಹೇಬ್ ಅಂಬೇಡ್ಕರ್ ಭಾವ ಚಿತ್ರ ತೆಗೆದರೆ ಮಾತ್ರ ಧ್ವಜಾರೋಹಣ ಮಾಡುತ್ತೇನೆ ಎಂದು ಮಲ್ಲಿಕಾರ್ಜುನ ಗೌಡ ಒಬ್ಬ ನ್ಯಾಯಾಧೀಶರಾಗಿ ಹೇಳುವ ಮಾತು ಖಂಡನೀಯ.

ಡಾ॥ ಬಿ.ಆರ್.ಅಂಬೇಡ್ಕರ್ ಸಮಾಜದ ನಿರ್ಮಾತೃ ಸಂವಿಧಾನ ವಿರೋಧಿ ಕೃತ್ಯ ನಡೆಸಿದ ಯಾರೇ ಆಗಲಿ ಯಾವುದೇ ಹುದ್ದೆಯಲ್ಲಿರಲಿ ಅವರ ಮೇಲೆ ಸಂವಿಧಾನಾತ್ಮಕವಾಗಿ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಡಾ॥ ಬಿ.ಆರ್. ಅಂಬೇಡ್ಕರ್ ಅವರು ಸರ್ವ ಜನಾಂಗದ ಶ್ರೇಯೋಭಿವೃದ್ಧಿಗಾಗಿ ಹಾಕಿಕೊಟ್ಟ ಸಮಾನತೆ ಶಿಕ್ಷಣ ಮತ್ತು ಶಾಂತಿ ಕದಡುವ ಕೆಲವು ಕುತಂತ್ರಗಳನ್ನು ಮಟ್ಟ ಹಾಕಬೇಕಾಗಿದೆ ಎಂದು ಕರ್ನಾಟಕ ಪ್ರಜಾಶಕ್ತಿ ಸಮಿತಿ ಸಂಘಟನೆ ಕಲ್ಯಾಣ ಕರ್ನಾಟಕ ವಿಭಾಗೀಯ ಉಪಾಧ್ಯಕ್ಷರು ರಾಜಶೇಖರ ಮಾಲಿ ಪಾಟೀಲ ನುಡಿದರು.

ಸಂವಿಧಾನಾತ್ಮಕ ಹುದ್ದೆಯಲ್ಲಿರುವವರು ಮೇಲೆ ಹಲ್ಲೆ ಮಾಡುವುದು ಮತ್ತು ಡಾ॥ ಬಿ ಆರ್. ಅಂಬೇಡ್ಕರ್ ಅವರಿಗೆ ಅವಮಾನಿಸುವುದು ಸಂವಿಧಾನ ವಿರೋಧಿ ಕೃತ್ಯವಾಗಿದೆ ಎಂದು ನಮ್ಮ ಸಂಘಟನೆಯ ಮೂಲಕ ಖಂಡಸುತ್ತೆವೆ ಎಂದರು.

ಕಲ್ಯಾಣ ಕರ್ನಾಟಕ ವಿಭಾಗೀಯ ಉಪಾಧ್ಯಕ್ಷರು ರಾಜಶೇಖರ ಮಾಲಿ ಪಾಟೀಲ ಜಿಲ್ಲಾ ಅಧ್ಯಕ್ಷರು ಮಲ್ಲಿಕಾರ್ಜುನ ಸಗರ ತಾಲೂಕ ಅಧ್ಯಕ್ಷರು ದೇವು ಪತ್ತಾರ ಕಾರ್ಯದರ್ಶಿ ಭೀಮು ಕಟ್ಟಿಮನಿ. ಗ್ರಾಮೀಣ ಅಧ್ಯಕ್ಷರು ನಭೀ ಗೋಗಿ.ದಾವುದ್ ಗೋಗಿ ಮಹೀಬೂಬ ಗೋಗಿ. ಚಾಂದಪಾಷ್ ಗೋಗಿ. ರಘು ಹಾದಿಮನಿ.ಭೀಮಾಶಂಕರ ಹೋಸಕೇರಾ.ಅಂಬ್ಲಪ್ಪ ಮಂಡ್ನಾಳ.ಮಾಳಪ್ಪ ಪೂಜಾರಿ ಮಡ್ನಾಳ.ಶಿವು ಹುಲಿಮನಿ ಇದ್ದರು.

**ವರದಿ–ರಾಜಶೇಖರ ಮಾಲಿ ಪಾಟೀಲ ಶಹಾಪುರ**

# ಸ್ವಾಮಿ ವಿವೇಕಾಂದರ ಜಯಂತಿ ಕಾರ್ಯಕ್ರಮ



ಜಮಖಂಡಿ: ಸ.ಹಿ.ಪ್ರಾ.ಶಾಲೆ ಜಂಬಗಿ ಕೆ ಡಿ ಮುಖ್ಯ ಗುರುಗಳಾದ ಶ್ರೀ ಎ.ಎ ಉಮಾರಾಣಿ ನಿವೃತ್ತಿ ಬಡ್ತಿ ಬೀಳ್ಕೊಡುವ ಸಮಾರಂಭ ಹಾಗೂ ಸ್ವಾಮಿ ವಿವೇಕಾಂದರ ಜಯಂತಿ ಕಾರ್ಯಕ್ರಮವನ್ನು ಎಸ್.ಡಿ. ಎಮ್.ಸಿ ಅಧ್ಯಕ್ಷೆ ಸುರೇಶ ಅಲ್ಲವಗೋಳ್ ಉದ್ಘಾಟನೆ ಮಾಡಿದರು ಉಪಾಧ್ಯಕ್ಷ ಬಾಬು ಶಿಂಗಿ ಜ್ಯೋತಿ ಬೆಳಗಿಸಿದರು ಹಾಗೂ ಎಸ್.ಡಿ.ಎಮ್.ಸಿ ಎಲ್ಲಾ ಸದ್ಯಸರು ಭಾಗವಹಿಸಿದ್ದರು. ಸೇವೆ ಸಲ್ಲಿಸಿದ ಗುರುಗಳಿಗೆ ಎಲ್ಲಾ ವಿದ್ಯಾರ್ಥಿಗಳಿಂದ ಕಾಣಿಕೆಗಳನ್ನು ಸಲ್ಲಿಸಲಾಯಿತು.

ಎಸ್.ಡಿ.ಎಮ್.ಸಿ ಎಲ್ಲಾ ಸದ್ಯಸರು ಕೂಡಿ ನಿವೃತ್ತ ಶಿಕ್ಷಕರಿಗೆ 50 ಗ್ರಾಊ ಬೆಳ್ಳಿ ಚೈನ್ ಹಾಕಿದರು 6ವರ್ಷ ಬಡ್ತಿ ಪ್ರದಾನ ಗುರುಗಳು ಶ್ರೀ ಎ.ಎ ಉಮಾರಾಣಿ ಶಾಲೆಯ ಅಭಿವೃದ್ಧಿಗಾಗಿ 25000 ರೂಪಾಯಿ ದೇಣಿಗೆ ನೀಡಿದರು ಮುಖ್ಯ ಗುರುಗಳಾದ ಜಿ.ಎಸ್ ಕೊಕ್ಕನವರ, ಶಾಲೆಯ ಸಹ ಶಿಕ್ಷಕರು ಜಿ.ಬಿ ಗ್ಯಾನಪ್ಪ ನವರ್,ಎಸ್ ಬಿ ಹಾದಿಮನಿ ,ಎ.ಎಸ್ ನವಣಿ ಪಿ.ಎನ್ ದೋಷಿ ಹಾಗೂ ಊರಿನ ಗುರು ಹಿರಿಯರು ಭಾಗವಹಿಸಿದ್ದರು.

# "ಸ್ವತಂತ್ರ ಯೋಧರ ನಾಡು ಕೊಗನೂರಿ"ನಲ್ಲಿ ಕನ್ನಡದ ಸಂಭ್ರಮ



ಗದಗ ಜಿಲ್ಲೆ ಶಿರಹಟ್ಟಿ ತಾಲೂಕು 18 ಹುತಾತ್ಮರ ನೆಲ ಕೊಗನೂರಿನಲ್ಲಿ ಕನ್ನಡದ ಕಲರವ ಎದ್ದುಕಾಣುತ್ತಿತ್ತು. ಮಕರಸಂಕ್ರಮಣದ ದಿನದಂದು ಪ್ರತಿವರ್ಷ ಊರಿನಿಂದ ಮಕರ ಸಂಕ್ರಮಣ ಹಬ್ಬವನ್ನು ಆಚರಿಸಲು ತುಂಗಭದ್ರಾ ನದಿ ಸಂಗಮ ಸ್ಥಳವಾದ ಗಳಗನಾಥ ಎಂಬ ಗ್ರಾಮಕ್ಕೆ ಹೋಗುತ್ತಾರೆ ಕೊಗನೂರಿನ ಯುವಕರು.

ಮಕರ ಸಂಕ್ರಮಣದಂದು ಕೋಗನೂರಿನ ಯುವಕರ ಒಂದು ಸಂಭ್ರಮ ನೋಡುಗರ ಕಣ್ಣಿಗೆ ಮನ ತಣಿಯುವಂತಿತ್ತು. ಎತ್ತಿನ ಬಂಡಿಗಳು ಕನ್ನಡದ ಬಾವುಟಗಳಿಂದ ಅಲಂಕಾರವಾಗಿದ್ದವು ಹಾಗೂ ಯುವಕರು ಸಂಭ್ರಮದಿಂದ ಎತ್ತಿನ ಬಂಡಿಗಳನ್ನು ಓಡಿಸಿಕೊಂಡು ತಮ್ಮದೇ ಆದ ಕನ್ನಡದ ಘೋಷಣೆಗಳನ್ನು ಕೂಗುತ್ತಾ ಹೋಗುತ್ತಿದ್ದರು. ಇದರಲ್ಲಿ ಕೋಗನೂರು ಯುವಕರಾದ ಪ್ರವೀಣ ಬಿರಬ್ಬಿ,ಮಂಜುನಾಥ್ ಬೂದನೂರ್,ಜುನಾಥ್ ಪೂಜಾರ್,ಗೌಡಪ್ಪ ಇನ್ನೂ ಹಲವಾರು ಯುವ ರೈತರು ಕೂಡಿದ್ದರು.

ಸ್ವತಂತ್ರ ಯೋಧರ ನಾಡು ಕೊಗನೂರಿನಲ್ಲಿ ಮಕರ ಸಂಕ್ರಮಣದ ಸಡಗರ ಅದ್ದೂರಿಯಾಗಿತ್ತು

ಮತ್ತೊಂದು ವಿಶೇಷ ಏನೆಂದರೆ ಹಳ್ಳಿ ಯುವಕರಲ್ಲಿ ಕನ್ನಡ ಪ್ರೇಮವನ್ನು ಉಣಬಡಿಸಿದ ಆ ಒಂದು ದೃಶ್ಯ ಮನಮೋಹಕರವಾಗಿತ್ತು.

–ರಾಖೇಶ್ ಬೂದಿಹಾಳ (ಶಿರಹಟ್ಟಿ)

# ಅಂಬೇಡ್ಕರ್ ಭಾವಚಿತ್ರವನ್ನು ಎಲ್ಲಾ ಆಚರಣೆಗಳಲ್ಲಿ ಇಟ್ಟು ಪೂಜಿಸಿ: ಕಟ್ಟಿಮನಿ



ಚಿಂಚೋಳಿ:– ಗಣರಾಜ್ಯೋತ್ಸವ ಆಚರಣೆ ಹಾಗೂ ಸ್ವಾತಂತ್ರ್ಯ ದಿನಾಚರಣೆ ಸಂದರ್ಭಗಳಲ್ಲಿ ನ್ಯಾಯಾಲಯದಲ್ಲಿ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಕಡ್ಡಾಯಗೊಳಿಸಿರುವ ನ್ಯಾಯಾಲಯದ ಆದೇಶಕ್ಕೆ ನ್ಯಾಯವಾದಿ ಸಂಘದ ತಾಲೂಕು ಘಟಕದ ಮಾಜಿ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ ದೇಶದ ಸ್ವಾತಂತ್ರ್ಯ ನಂತರವೂ ನ್ಯಾಯಾಲಯಗಳಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಮಾಡುತ್ತಿರಲಿಲ್ಲ ಈ ವಿಷಯವನ್ನು ಶಾಸಕ ಡಾಕ್ಟರ್ ಅವಿನಾಶ್ ಜಾಧವ್ ಅವರಿಗೆ ಮಾಹಿತಿ ನೀಡಿದಾಗ ಅವರು 2019ರಲ್ಲಿ ಕಾನೂನು ಸಚಿವರಿಗೆ ಮತ್ತು ಹಿಂದಿನ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ರವರಿಗೆ ಪತ್ರ ಬರೆದು ಖುದ್ದು ಭೇಟಿಯಾಗಿ ಕ್ರಮಕೈಗೊಳ್ಳುವಂತೆ ಆಗ್ರಹಿಸಿದರು ಅದರಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟರ್ ರವರಿಗೆ ಸರ್ಕಾರ ಪತ್ರ ಬರೆದು ಕ್ರಮ ತೆಗೆದುಕೊಳ್ಳಲು ಮನವಿ ಮಾಡಲಾಗಿತ್ತು ಅದು ಪೂರ್ಣ ಪೀಠದಲ್ಲಿ ತೀರ್ಪು ಬಾಕಿ ಇತ್ತು ಅದರಂತೆ ಫೆಬ್ರವರಿ 4ರಂದು ಅಂತಿಮ ತೀರ್ಮಾನ ಮಾಡಿ ನ್ಯಾಯಾಲಯದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಗಣರಾಜ್ಯೋತ್ಸವ ಸಮಾರಂಭ ಮತ್ತು ಸ್ವಾತಂತ್ರ್ಯ ದಿನಾಚರಣೆ ಹಾಗೂ ಸಂವಿಧಾನ ದಿನಾಚರಣೆ ಸಂದರ್ಭದಲ್ಲಿ ಇಡುವಂತೆ ಆದೇಶ ಮಾಡಿದ್ದಾರೆ ಇದರಲ್ಲಿ ಶಾಸಕ ಡಾಕ್ಟರ್ ಅವಿನಾಶ್ ಜಾಧವ್ ರವರ ಕೊಡುಗೆ ಅಮೂಲ್ಯವಾಗಿದೆ ಶಾಸಕರಿಗೆ ಹಾಗೂ ನ್ಯಾಯಾಲಯದ ವಕೀಲರಿಗೆ ಮತ್ತು ಹೋರಾಟಗಾರರಿಗೆ ಅಭಿನಂದನೆಗಳು ತಿಳಿಸಿದ್ದಾರೆ

ಕರುನಾಡ ಕಂದ
ಸಂಪುಟ-1 | ಸಂಚಿಕೆ-8
ದಿನಾಂಕ: 16-02-2022 | ಪುಟಗಳು: 16

# ನಂಬಿಕೆ ಆಚರಣೆಯ ತವರು ಚನ್ನಾಪುರ ಕ್ಷೇತ್ರ



ಕರ್ನಾಟಕದಲ್ಲಿ ಸಂಸ್ಕೃತಿಗೆ ಸಿಕ್ಕಷ್ಟು ಪ್ರೋತ್ಸಾಹ ಬಹುಶಃ ಭಾರತದ ಯಾವುದೇ ಭಾಗದಲ್ಲಿ ಸಿಕ್ಕಿಲ್ಲವೆಂದು ಹೇಳಬಹುದು ಯಾಕೆಂದರೆ ಈ ನಾಡಿನಲ್ಲಿ ಸಾಹಿತ್ಯ, ಸಂಸ್ಕೃತಿ, ಪುಣ್ಯ, ಆಚಾರ-ವಿಚಾರ ನಂಬಿಕೆ, ಆಚರಣೆ ಹಾಗೂ ಧಾರ್ಮಿಕ ಕ್ಷೇತ್ರಗಳನ್ನು ಕನ್ನಡ ತಾಯಿ ತನ್ನ ಒಡಲಿನಲ್ಲಿ ಇರಿಸಿಕೊಂಡಿದ್ದಾಳೆ ಈ ಮಾತಿಗೆ ವಿಜಯನಗರ ಜಿಲ್ಲೆ ಕನ್ನಡ ನಾಡಿನ ಪ್ರಮುಖ ಪ್ರವಾಸಿ ಜಿಲ್ಲೆಗಳಲ್ಲಿ ಒಂದಾಗಿದೆ ಹಾಗೆಯೇ ಮಧ್ಯಕಾಲೀನ ಇತಿಹಾಸದಲ್ಲಿ ಇಡೀ ಜಗತ್ತೇ ನಿಬ್ಬೆರಗಾಗುವಂತೆ ನೇ?ಡುವ ಇತಿಹಾಸ ದಾಖಲಿಸಿದ ಜಿಲ್ಲೆಯೂ ಹೌದು.ಈ ಜಿಲ್ಲೆಯಲ್ಲಿ ಹತ್ತು ಹಲವು ಪ್ರವಾಸಿ ಹಾಗೂ ಪುಣ್ಯಕ್ಷೇತ್ರ ತಾಣಗಳು ಇಂದಿಗೂ ಕಂಡುಬರುತ್ತಿವೆ ಈ ಹಿನ್ನೆಲೆಯಲ್ಲಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಹೋಬಳಿಯಲ್ಲಿರುವ ಚನ್ನಾಪುರ ಒಂದು ಚಿಕ್ಕ ಹಳ್ಳಿ ಪಕ್ಕದಲ್ಲಿಯೇ ಚನ್ನಾಪುರ
ತಾಂಡ ಇಲ್ಲೊಂದು ಶ್ರೀಕೃಷ್ಣ ದೇವಾಲಯವಿದೆ. ಊರಿನಿಂದ ಎರಡು ಕಿಲೋಮೀಟರ್ ದೂರದಲ್ಲಿ ದಕ್ಷಿಣ ದಿಕ್ಕಿಗೆ ಹೊಸಹಳ್ಳಿ ಮಠ ಎಂಬ ದೇವಾಲಯಗಳ ಗುಂಪೊಂದು ಇದೆ. ಬಸವಣ್ಣ ಹಾಗೂ ಮಂಜುನಾಥ ದೈವ ಪ್ರಮುಖವಾದರೆ ಇಲ್ಲಿ ಭೂತಪ್ಪ ಮತ್ತು ಚೌಡೇಶ್ವರಿ ದೇವಿ ದೇವಾಲಯಗಳು ಪ್ರಮುಖವಾಗಿವೆ ಜೊತೆಗೆ ಮಠದ ಪಕ್ಕದ ಹೊಲವೊಂದರಲ್ಲಿ ಮಧ್ಯಕಾಲಿನ ಯುಗಕ್ಕೆ ಸೇರಿದ ಬುರುಜೊಂದು ಚನ್ನಾಪುರದ ಐತಿಹಾಸಿಕ ಮಹತ್ವ ಸಾರುವ ಕುರುಹುಗಳಾಗಿವೆ.

ಇಲ್ಲಿರುವ ದೇವಾಲಯಗಳು ಪ್ರಾಚೀನ ಕಾಲದವಲ್ಲವಾದರೂ ನಂಬಿಕೆ, ಆಚರಣೆ, ಆಚಾರ, ವಿಚಾರಗಳಿಗೆ ಸಂಬಂಧಿಸಿದಂತೆ ತುಂಬಾ ಮಹತ್ವ ಹೊಂದಿದ ಕ್ಷೇತ್ರವಾಗಿದೆ. ಬಹುಶಃ ಮಧ್ಯಕಾಲೀನ ಸಂದರ್ಭದಲ್ಲಿ ಗ್ರಾಮ ಇಲ್ಲೇ ಇದ್ದಿರಬಹುದೆಂದು ಊಳಿಸಲಿಕ್ಕೆ ಸಾಧ್ಯತೆಯಿದೆ ಅಂದಿನ ಊರ ಕಾವಲಿನ ದೊಡ್ಡದಾದ ಎತ್ತರದ ಕೇ?ಟೆ ಬುರುಜು ಇದ್ದು ಮೇಲ್ಭಾಗದಲ್ಲಿ ಗಿಡ ಗಂಟೆಗಳೆಲ್ಲ ಬೆಳೆದು ನಿಂತಿವೆ.ಬುರುಜಿನ ಸುತ್ತಲೂ ಅಂ-ದು ಕಂದಕವಿದ್ದಿರಬಹುದೇನೋ ಇಂದು ಯಾವ ಕಂದಕವಿಲ್ಲ. ಕೇ?ಟೆಯ ಪಕ್ಕ ಸ್ವಲ್ಪ ದೂರದಲ್ಲಿ ಮಠವಿದೆ. ಗ್ರಾಮ ರಕ್ಷಣಾ ವಾಸ್ತುವಿಗಿಂತಲೂ ಭಿನ್ನವಾದ ವಿನ್ಯಾಸ ಬುರುಜುಗಳಲ್ಲಿ ಕಾಣಬಹುದು. ಇವುಗಳ ನಿರ್ಮಾಣದ ಹಿಂದಿನ ಉದ್ದೇಶ ಎರಡು ಗ್ರಾಮಗಳ ಮಧ್ಯೆ ದಾಳಿ ಕಾಳಗ ನಡೆದಾಗ ಇಲ್ಲವೇ ಶತ್ರು ಪಾಳೆಯ ದಾಳಿ ಮಾಡಿದ ಸಂದರ್ಭದಲ್ಲಿ ಎತ್ತರವಾದ ಬುರುಜಿನ ಮೇಲೆ ಚಿಕ್ಕಮಕ್ಕಳನ್ನು, ಹೆಂಗಸರು, ಮುದುಕರು ಹಾಗೂ ತಮ್ಮ ಸಂಪತ್ತನ್ನು ಏಣಿಗಳ ಮೂಲಕ ಸಾಗಿಸಿ ಉಳಿದ ಪುರುಷರು ಶತ್ರುಗಳೊಂದಿಗೆ ಕಾದಾಡುತ್ತಿದ್ದರು ಬುರುಜುವಿನ ನಿರ್ಮಾಣಕ್ಕೆ ಸ್ಥಳೀಯವಾಗಿ ಸಿಗುವಂತಹ ಗ್ರಾನೈಟ್ ಕಾಡುಗಲ್ಲುಗಳನ್ನು ವ್ಯವಸ್ಥಿತವಾಗಿ ಬಳಸಿ ವೃತ್ತಾಕಾರವಾಗಿ ನಿರ್ಮಾಣ ಮಾಡಿದ್ದಾರೆ. ತುರ್ತು ಸಂದರ್ಭದಲ್ಲಿ ಕೆಲವರ ಪ್ರಾಣ ಮಾನಹಾನಿಗಳನ್ನಾದರೂ ರಕ್ಷಿಸಿಕೊಳ್ಳುವಲ್ಲಿ ಬುರುಜುಗಳು ಮಹತ್ವದ ಪಾತ್ರವಹಿಸಿದ್ದವು. ಇದು ಐತಿಹಾಸಿಕ ಮಹತ್ವ ಸಾರುವ ವಿಷಯವಾದರೆ ಆಧುನಿಕ ಸಂದರ್ಭದಲ್ಲಿ ಚನ್ನಾಪುರವೆಂದರೆ ನಂಬಿಕೆ, ಆಚರಣೆ ಮತ್ತು ಪದ್ದತಿಗಳಿಗೆ ಹೆಸರುವಾಸಿಯಾದ ಸ್ಥಳವಾಗಿದೆ.

ನಂಬಿಕೆಗಳನ್ನು ಹೊರತುಪಡಿಸಿ ಬದುಕಿನ ಕಲ್ಪನೆಯೆ ಅಸಾಧ್ಯ ಬದುಕು ಎಷ್ಟು ಪ್ರಾಚೀನವೊ ನಂಬಿಕೆಗಳು ಅಷ್ಟೇ ಪ್ರಾಚೀನವಾದವು. ಈ ನಂಬಿಕೆಗಳು ಮೊದಲು ವ್ಯಕ್ತಿ ನಿಷ್ಟವಾಗಿದ್ದು ನಂತರ ಸಾರ್ವತ್ರಿಕವಾದವುಗಳಾಗಿ ಬಲಗೊಂಡವು. ಚನ್ನಾಪುರದಲ್ಲಿರುವ ಭೂತಪ್ಪ ಹಾಗೂ ಚೌಡೇಶ್ವರಿ ದೇವಿಗೆ ಮೊದಲು ಹರಕೆ ಕಟ್ಟಿಕೊಳ್ಳುತ್ತಾರೆ ಆ ಹರಕೆ ವೈಯಕ್ತಿಕವಾಗಿ ಹಾಗೂ ಕೌಟುಂಬಿಕವಾಗಿ ಕಟ್ಟಿಕೊಳ್ಳುತ್ತಾರೆ. ವ್ಯಕ್ತಿಯೊಬ್ಬರು ತಮಗೆ ಕಷ್ಟ ನಷ್ಟಗಳುಂಟಾದಾಗ, ಇಲ್ಲವೇ ರೇ?ಗ ರುಜಿನಗಳಿಗೆ ತುತ್ತಾದಾಗ ಅದರಿಂದ ಪಾರು ಮಾಡುವುದೆಂದು ಭಾವಿಸಿದ ದೈವಗಳಿಗೆ ಹರಕೆ ಒಪ್ಪಿಸುವುದಾಗಿ ಹೇಳಿಕೊಳ್ಳುತ್ತಾರೆ ಹಾಗೆಯೇ ಕುಟುಂಬವೊಂದರ ಸಾಮೂಹಿಕ ಕಷ್ಟ ನಷ್ಟಗಳ ಸಂದರ್ಭದಲ್ಲಿ ಕುಟುಂಬದ
ಹಿರಿಯರು ಇಡೀ ಕುಟುಂಬದ ಪರವಾಗಿ ಮಾಡಿಕೊಳ್ಳುವ ಹರಕೆ ದೇವತೆಗೆ ಕುರಿ, ಕೋಳಿ ಬಲಿ ಕೊಡುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಹೀಗೆ ಮಾಡಿಕೊಂಡ ಹರಕೆಗಳನ್ನು ತೀರಿಸಲು ಭಕ್ತರು ಗುರುವಾರ ಹಾಗೂ ಭಾನುವಾರಗಳಂದು ಹರಕೆ ತೀ-ರಿಸಲು ಚನ್ನಾಪುರಕ್ಕೆ ಹೇ?ಗುತ್ತಾರೆ ಕೆಲವರು ಒಂದು ರಾತ್ರಿ ಉಳಿದುಕೊಂಡು ಬರುತ್ತಾರೆ ಇನ್ನೂ ಕೆಲವರು ಅಂದಿನ ದಿನವೇ ಹಿಂತಿರುಗಿ ಬರುತ್ತಾರೆ. ಈ ಹರಕೆಗಾಗಿ ಕೆಲವರು ಕುರಿ ಕೋಳಿಗಳನ್ನು ಸಾಕಿರುತ್ತಾರೆ. ದೇವರ ಹೆಸರಿನಲ್ಲಿ ಹರಕೆಗಾಗಿ ಸಿದ್ದವಾದ
ಕುರಿ ಕೋಳಿಗಳನ್ನು ಚನ್ನಾಪುರ ತೆಗೆದುಕೊಂಡು ಹೋಗಿ ಭೂತಪ್ಪ ಹಾಗೂ ಚೌಡೇಶ್ವರಿ ದೇವಿಗೆ ಬಲಿ ಕೊಡುತ್ತಾರೆ. ಬಲಿಕೊಡುವ ಪದ್ಧತಿಯಲ್ಲಿ ವಿಶೇಷವಾಗಿ ಭೂತಪ್ಪನಿಗೆ ಬಲಿಕೊಟ್ಟು ಹರಕೆಗಳಲ್ಲಿ ಕೋಳಿಯ ತಲೆಯನ್ನು ಕುರಿಯ ಕಾಲುಗಳನ್ನು ಮರಕ್ಕೆ ಕಟ್ಟಿದರೆ, ಚೌಡೇಶ್ವರಿ ದೇವಾಲಯಕ್ಕೆ ಬಲಿಕೊಟ್ಟ ಹರಕೆಯ ಕೋಳಿಗಳನ್ನು ಎಡೆಮಾಡಿ ದೇವಿಗೆ ಅರ್ಪಿಸುತ್ತಾರೆ ನಂತರ ಮಾಡಿದ ಅಡಿಗೆಯನ್ನು ಎಲ್ಲರೂ ಊಟ ಮಾಡಿ ಹಿಂತಿರುಗುತ್ತಾರೆ ಇನ್ನೂ ವಿಶೇಷವಾದ ನಂಬಿಕೆ ಎಂದರೆ ತೆಗೆದುಕೊಂಡು ಹೊದ ರೇಷನ್ ಹಾಗೂ ಉಳಿದ ಆಡುಗೆಯನ್ನು ಮರಳಿ ತರಬಾರದು ಒಂದು ಪಕ್ಷ ತಂದರೆ ಮತ್ತೆ ನಮ್ಮ ಕಷ್ಟಗಳನ್ನ ಹಿಂದಿರುಗಿ ತಂದಂತೆ ಎಂಬ ನಂಬಿಕೆ ಇದೆ ಹಾಗಾಗಿ ಅದನ್ನೆಲ್ಲಾ ಅಲ್ಲಿರುವ ಭಕ್ತರನ್ನ ಕರೆದು ಊಟಕ್ಕೆ ನೀಡುವ ಅಥವಾ ಅಲ್ಲಿಯೇ ಬಿಟ್ಟು ಬರುವ ಪದ್ದತಿ ಇದೆ. ದಾವಣಗೆರೆ ವಿಜಯನಗರ ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಯ ಜನರು ಗಾಢವಾದ ನಂಬಿಕೆಯಿಂದ ಪೂಜಿಸುವ ದೈವವಾಗಿದೆ.

ಎ.ಆರ್. ಆನಂದಕುಮಾರ ಅರಸೀಕೆರೆ ಪೊಲೀಸ್ ಇವರು ಹರಕೆ ಕಟ್ಟಿಕೊಂಡಿದ್ದನ್ನು ತೀರಿಸಲು ಬಂದಾಗ ಅವರೇ ಹೇಳುವ ಹಾಗೆ ನಾವು ಇಲ್ಲಿಗೆ ನಡೆದುಕೊಂಡು ಹರಕೆ ಕಟ್ಟಿಕೊಂಡ ಮೇಲೆ ನಾವು ಅಂದುಕೊಂಡ ಕೆಲಸ ನೆರವೇರಿದೆ ಹಾಗಾಗಿ ಹರಕೆ ತೀರಿಸಲು ಬಂದಿದ್ದೇವೆ ಎನ್ನುತ್ತಾರೆ. ಭಕ್ತರು ಧಾರ್ಮಿಕ ವಿಧಿವಿಧಾನಗಳಲ್ಲಿ ಈ ಅಂಶವು ಬಹಳ ಮುಖ್ಯವಾಗಿದೆ ಈ ಜಗತ್ತಿನಲ್ಲಿ ಜನಿಸಿದ ಮಾನವನಿಗೆ ಯಾವಾಗ ಅರಿವು ಜ್ಞಾನ ಬಂತೋ ಅಂದೇ ದೇವರ ಮೊರೆಹೋದನು. ಆಗಲೇ ಹರಕೆಗಳು ಜನನವಾದವು.



ಅಂದಿನಿಂದ ಇಂದಿನವರೆಗೂ ಈ ಸಂಪ್ರದಾಯ ಬೆಳೆದುಬಂದಿದೆ. ಅಂದರೆ ನಂಬಿಕೆ ಮತ್ತು ಹರಕೆಗಳು ಒಂದೆ ನಾಣ್ಯದ ಎರಡು ಮುಖಗಳಿದ್ದಂತೆ. ಅವನಿಗೆ ಆಪತ್ತು ತೊಂದರೆ ಬಂದಾಗ ಆ ಕಷ್ಟವನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಮುಡುಪು ಕಟ್ಟುವುದು, ದೀಡು ನಮಸ್ಕಾರ ಹಾಕುವುದು, ಒಡವೆಗಳನ್ನು ದೇವರಿಗೆ ಒಪ್ಪಿಸುವುದು, ವಿವಿಧ ರೀತಿಯ ಅಭಿಷೇಕ ಮಾಡಿಸುವುದು, ಹುಂಡಿಗಳಲ್ಲಿ ಕಾಣಿಕೆ ಹಾಕುವುದು, ನೆಲೆಸಿದ ದೇವರಿಗೆ ಪಾದಯಾತ್ರೆ ಮಾಡುವುದು, ದೇವರಿಗೆ ಕಾಯಿ ಮತ್ತು ಕರ್ಪೂರ ಮಾಡಿಸುವುದು ಮುಂತಾದವುಗಳನ್ನು ಮಾಡುತ್ತಾರೆ. ಈ ರೀತಿ ಮಾನವನು ಹರಕೆಯನ್ನು ಕಟ್ಟಿಕೊಳ್ಳುವುದನ್ನು ಈಗಲೂ ಕಾಣುತ್ತೇವೆ.

ನಾಗರಿಕ ಸಮಾಜಕ್ಕಿಂತ ಆದಿ ಮಾನವನ ಸಮಾಜದಲ್ಲಿ, ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ ಸುಶಿಕ್ಷಿತರಿಗಿಂತ ನಿರಕ್ಷ-ರಿಗಳಲ್ಲಿ ಸಂಪ್ರದಾಯಗಳು ಪ್ರಬಲವಾಗಿರುತ್ತದೆ. ನಗರವಾಸಿಗಳಿಗಿಂತ ಹಳ್ಳಿಗಳಲ್ಲಿ ವಾಸಿಸುವ ಜನರಲ್ಲಿ ಸಂಪ್ರದಾಯಾಚರಣೆಗಳಲ್ಲಿ ಹೆಚ್ಚು ಸಂಕೀರ್ಣವನ್ನು ಕಾಣಬಹುದು ಇಂತಹ ಒಂದು ಐತಿಹಾಸಿಕ ನಂಬಿಕೆ,ಆಚರಣೆ, ಸಂಪ್ರದಾಯವನ್ನು ಚನ್ನಾಪುರದಲ್ಲಿ ಕಾಣಬಹುದು.

**-ಡಾ.ಹಾದಿಮನಿ ರಮೇಶ ಅರಸೀಕೆರೆ ವಿಜಯನಗರ ಜಿಲ್ಲೆ**

# 371 (ಎ) 545 ಪಿಎಸ್ಐ ನೇಮಕಾತಿಯಲ್ಲಿ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ಅನ್ಯಾಯ



ಕಲಬುರಗಿ-ಕಲ್ಯಾಣ ಕರ್ನಾಟಕದ ಸರ್ಕಾರಿ ಹುದ್ದೆ ಆಕಾಂಕ್ಷೆಯನ್ನ ಹೊಂದಿದವ-ರಿಗೆ 2020 ರ ಸುತ್ತೋಲೆ ಮೂಲಕ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಕಲಬುರುಗಿಯಲ್ಲಿ ಶಾಂತಿಯುತವಾಗಿ ಪ್ರತಿಭಟನೆಯನ್ನು ಮಾಡುವುದರ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು

2016ರ ಸುತ್ತೋಲೆ ಪ್ರಕಾರ ನೇಮಕಾತಿ ಮಾಡಿದರೆ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ರಾಜ್ಯವ್ಯಾಪ್ತಿ ನೇಮಕಾತಿ ಪರಿಗಣಿಸಿದರೆ ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳು ಉತ್ತಮ ಅಂಕ ಪಡೆಯುವುದರ ಜೊತೆಗೆ ರಾಜ್ಯವ್ಯಾಪ್ತಿ ನೇಮಕಾತಿಯಲ್ಲಿ ಸ್ಥಾನ ಪಡೆಯುತ್ತಾರೆ ಆದರೆ 2020ರ ಹೊಸ ಸುತ್ತೋಲೆ ಪ್ರಕಾರ ಕಲ್ಯಾಣ ಕರ್ನಾಟಕದ ಅಭ್ಯರ್ಥಿಯನ್ನು ರಾಜ್ಯವ್ಯಾಪ್ತಿ ಪರಿಗಣಿಸದೆ ಕೇವಲ ಕಲ್ಯಾಣ ಕರ್ನಾಟಕ ಸೀಮಿತ ಮಾಡಲಾಗಿದೆ ಆದರಿಂದ ಕಲ್ಯಾಣ ಕರ್ನಾಟಕದ ಉತ್ತಮ ಅಂಕ ಪಡೆದ ಅಭ್ಯರ್ಥಿಗಳು ಕಲ್ಯಾಣ ಕರ್ನಾಟಕ ನೇಮಕಾತಿ ಮಾತ್ರ ಸೀಮಿತ ಆಗುತ್ತಾರೆ ಇದರಿಂದ ಕಲ್ಯಾಣ ಕರ್ನಾಟಕದ ಉತ್ತಮ ಅಂಕ ಪಡೆದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ ಆದರಿಂದ ಸರ್ಕಾರವು 2020ರ ಸುತ್ತೋಲೆ ರದ್ದುಪಡಿಸಿ 2016ರ ಸುತ್ತೋಲೆ ಪ್ರಕಾರವೇ ನೇಮಕಾತಿ ಮಾಡುವುದರ ಮೂಲಕ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ಸರ್ಕಾರ ಮಧ್ಯಸ್ಥಿಕೆ ವಹಿಸಿ ಆಗಬಹುದಾದ ತೊಂದರೆಯನ್ನು ಸರಿಪಡಿಸಬೇಕೆಂದು ಸರಕಾರಿ ಹುದ್ದೆ ಆಕಾಂಕ್ಷಿ ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

# ಸಮಯ ಸಾಧಕರು

ಬೀದಿಗೆ ಬಿದ್ದಾಗ
ಬಾರದ ನಮ್ಮ ಬಂಧ ,
ತಾನು ಬಡವನಾದಗ
ಬೇಡಲು ಬಂದರು ಮನೆಯ
ಬಾಗಿಲಿಗೆ. !!

ಬಿಕ್ಷೆ ಎತ್ತಿ
ತಿನ್ನುವಾಗ ತಿರುಗಿ
ನೋಡದ ಸಂಬಂಧ ,
ತನಗೆ ಕಷ್ಟ ಬಂದಾಗ
ನಾಚಿಕೆ ಬಿಟ್ಟು ನೀವೆ ಗತಿ
ಎಂದರು. !!

ಹೇಳಿಕೆ ಮಾತು ಅಂದು
ಸಪ್ತ ಸ್ವರವಾದವು ಅವರ
ಶ್ರವಣಗಳಿಗೆ,
ಬೀದಿ ಬೀದಿ ಅಲೆದರು
ಕಾಣಲಿಲ್ಲ ನಮ್ಮ ಮನದ
ನೋವು ಅವರ ಕಣ್ಣುಗಳಿಗೆ.!!

ರಣ ಹದ್ದುಗಳು
ಕಿತ್ತು ತಿನ್ನಲು
ರಕ್ತ ಸಂಬಂಧಗಳು
ನಮ್ಮಲ್ಲಿದ್ದರೆ ಸಂಪತ್ತು .
ತೂತು ಮಡಿಕೆ ನಮ್ಮ
ಜೀವನ ಎಂದು ತಿಳಿದಾಗ
ಓಡುವರು ಬರುವುದೆಂದು
ತಮಗೆ ಆಪತ್ತು. !!

**- ರಾಧ ಅಪರಂಜಿ**
ಕಲ್ಲೇದೇವರಪುರ
ಜಗಳೂರು ತಾಲ್ಲೂಕು
ದಾವಣಗೆರೆ ಜಿಲ್ಲೆ .

KARUNADA KANDA, Fortnightly, Published and Owned by Karibasappa Baligar, At & Post: Gunnal-583237, Tq: Yalaburga, Dist: Koppal. Printed at Manohar printery , Azad road CBT HUBLI, Dist. Dharwad -580 020 email-karunadakanda33@gmail.com, Ph:9986366909, 9742776385. KARKAN/2021/27600. Editor: Basavaraj Baligar.